ವಿವೇಕಪ್ರಭ

ರಾಮಕೃಷ್ಣ ಮಹಾಸಂಘದ ಕನ್ನಡ ಮಾಸಪತ್ರಿಕೆ




₹ 14

ಮೇ 2019

PACKAGE TOURS - 2019

Hotel Room Accom. & South Indian Veg. Food

Mini Andhra



05 Days

Nov 04
Dec 02

Mantralaya, Srishaila, Mahanandi, Ahobilam (Nava Narasimha)

Kolkata Darjeeling



16 Days

Nov 04

Bhubaneshwar, Puri, Konark, Chilka Lake, Kolkata, Siliguri, Gangtok, Chengu Lake, Harbhajan Singh Mandir, Darjeeling

Shaktipeetha Manali Special



18 Days

Sep 05
Oct 09

Wagah Border [Indo-Pak Border], Amritsar, Vaishnavi Devi, Chamunda, Kangra, Chintapurni, Jwalamukhi, Baijnath, Kullu-Manali, Vasista, Rohtang Pass [Optional], Naina Devi, Kufri, Shimla, Chandigarh, Kurukshetra, New Delhi

Amarnath Yatra




19 Days

July 01

Attari Border [Indo-Pak Border], Amritsar, Katra, Vaishnavi Devi, Baltal, Amarnath, Gulmarg, Srinagar, Kurukshetra, New Delhi

Nepal Special




08 Days

Sep 17
Oct 03, 15

Kathmandu, Manokamana, Pokhara, Jomsom, Mukthinath, Patan

Charodham Yatra

19 Days



May 06
Jun 06
Sep 05, 16, 22
Oct 06, 09

Haridwar, Yamunotri, Gangotri, Uttarkashi, Kedarnath, Triyugi (Optional), Mana, Vyasa Guha, Ganesh Guha, Keshava Prayag, Badrinath, Rishikesh, New Delhi

KAILASH & MANASA SAROVAR YATRA



11 Days

May 30
Jun 06, 11
July 04, 16
Aug 27 Sep 05

SRILANKA



07 Days

Sep 17
Oct 15

Shri Hansaa Travels

Recognised by Department of Tourism, Govt. of Karnataka

✉ : 640, 40th Cross, 8th Block, Jayanagar, Bangalore - 70



: hansaatravels@gmail.com : hansaatravels.com

☎ 080-26643276 / 26543891 / 9341215612 / 9341415612

ವಿವೇಕಪ್ರಭ

ಮೇ-2019

ಸಂಪುಟ 20 ಸಂಚಿಕೆ 05

ಪ್ರಾರ್ಥನೆ : ಶ್ರೀಬುದ್ಧದೇವ ವಂದನಾ, ಶ್ರೀ ಶಂಕರಾಚಾರ್ಯವಂದನಾ 4

ಸಂಪಾದಕೀಯ : ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ 7

ವಚನವೇದದಿಂದ : ಸ್ವ-ಪ್ರಯತ್ನ 10

ಯುವ ಜಾಗೃತಿ : ಯುವ ಚೈತನ್ಯದ ಸದ್ಬಳಕೆ 19

ಸ್ವಾಮಿ ವಿವೇಕಾನಂದರಿಂದ ಸ್ಫೂರ್ತಿ ಪಡೆದ ಮಹಿಳೆಯರು:

ಮಹಾರಾಣಿ ವಾಣಿವಿಲಾಸ ಸನ್ನಿಧಾನ ಮತ್ತು ಪ್ರತಿಭಾ ವರ್ಮಾ 27

ಉಪನಿಷತ್ ಪರಿಚಯ : ತೈತ್ತಿರೀಯ ಉಪನಿಷತ್ತು 33

ಚಿತ್ರಕಥೆ : ಕುಸ್ತಿಪಟುವಿನ ಪರಿವರ್ತನೆ 38

ಸುದ್ದಿ ಸಂಚಯ : ರಾಮಕೃಷ್ಣ ಮಹಾಸಂಘದ ಚಟುವಟಿಕೆಗಳು 42

ವಿಶೇಷ ಲೇಖನ

ಶ್ರೀಮಾತೆಯವರೊಂದಿಗೆ - ಭಾಗ ೩ — *ಸ್ವಾಮಿ ಶಾರದೇಶಾನಂದ* 11

‘ವಾಕ್ಯಪದೀಯ’ದಲ್ಲಿ ಬ್ರಹ್ಮತತ್ತ್ವ — *ಡಾ. ಕೆ. ಎಲ್. ಪ್ರಸನ್ನಾಕ್ಷೀ* 24

ಶರತ್‌ಚಂದ್ರ ಚಕ್ರವರ್ತಿ - ಭಾಗ ೩ — *ಛಾಯಾ ಬ್ಯಾನರ್ಜಿ* 30

ಧಾರಾವಾಹಿ

ಕಳೆದ ದಿನಗಳ ನೆನಪುಗಳು - ೨೮ — *ಸ್ವಾಮಿ ಶ್ರದ್ಧಾನಂದ* 15

ಆನಂದದ ಹುಡುಕಾಟ-೫ — *ಸ್ವಾಮಿ ಬ್ರಹ್ಮೇಶಾನಂದ* 22

ಶ್ರೀಮಾತೆಯವರ ಪತ್ರಗಳು - ೧೮ — *ಪ್ರವ್ರಾಜಿಕಾ ಧರ್ಮಪ್ರಾಣಾ* 28





ವ್ಯವಸ್ಥಾಪಕ ಸಂಪಾದಕರು: ಸ್ವಾಮಿ ಆತ್ಮಜ್ಞಾನಂದ

ಸಂಪಾದಕರು: ಸ್ವಾಮಿ ಜ್ಞಾನಯೋಗಾನಂದ

ನೆರವು: ಆರ್. ಎಸ್. ಪೂರ್ಣಾನಂದ,
ಡಾ. ಕೆ. ಎಲ್. ಪ್ರಸನ್ನಾಕ್ಷೀ,
ಡಾ. ಎಚ್. ಪಾಂಡುರಂಗ ವಿಠಲ

ಅಕ್ಷರ ಜೋಡಣೆ: ಶ್ರೀರಾಮಕೃಷ್ಣ ಆಶ್ರಮ, ಮೈಸೂರು

ಮುದ್ರಣ: ಮಯೂರ್ ಗ್ರಾಫಿಕ್ಸ್, ಬೆಂಗಳೂರು

ಮುಖಪುಟ

ಮರು ಮರೀಚಿಕೆ (ವಿವರಣೆ : ಪು.೨೧)

ಚಂದಾ ವಿವರ

ಬಿಡಿ ಪ್ರತಿ : ₹14
ವಾರ್ಷಿಕ : ₹ 140
ಮೂರು ವರ್ಷ : ₹ 375
ಆಜೀವ (25 ವರ್ಷ) : ₹ 3,000
ಪೋಷಕರು : ₹5,000 ಅಥವಾ ಹೆಚ್ಚು.

ವಿದೇಶಗಳಿಗೆ : (ಏರ್‌ಮೇಲ್)
ವಾರ್ಷಿಕ : $ 20; ಮೂರು ವರ್ಷ: $ 60
ಆಜೀವ (25ವರ್ಷ): $ 300
ಪೋಷಕರು : $ 600 ಅಥವಾ ಹೆಚ್ಚು.

ಈ ಪತ್ರಿಕೆಯ ಧ್ಯೇಯ

‘ನಾವು ಪತ್ರಿಕೆಯ ಮೂಲಕ ಸಕಲ ವಿಚಾರಗಳಲ್ಲಿಯೂ ಜೀವನಪೋಷಕ ಆದರ್ಶಗಳನ್ನು ಜನರಿಗೆ ಕೊಡಬೇಕು... ವೇದವೇದಾಂತಗಳ ಉಚ್ಚ ಭಾವನೆಗಳನ್ನು ಸುಲಭವಾದ ಮಾತುಗಳಲ್ಲಿ ಜನರಿಗೆ ತಿಳಿಸಿಕೊಡಬೇಕು.’


- ಸ್ವಾಮಿ ವಿವೇಕಾನಂದ

ಚಂದಾ ಹಣವನ್ನು (Sri Ramakrishna Ashrama, Viveka Prabha A/c ಹೆಸರಿಗೆ) ಎಂ.ಓ. ಅಥವಾ ಡಿ.ಡಿ. ಮೂಲಕ ಮಾತ್ರ ಕಳುಹಿಸಬೇಕು. ಚೆಕ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಆಜೀವ ಚಂದಾದಾರರು ಮತ್ತು ಪೋಷಕರಿಗೆ ಮೈಸೂರು ಆಶ್ರಮದ ಪುಸ್ತಕಗಳ ಮೇಲೆ ಮೈಸೂರು ಆಶ್ರಮದ ಮೂಲಕ ನೇರವಾಗಿ ಕೊಂಡಾಗ ಮಾತ್ರ ಶೇ. 20 ರಷ್ಟು ರಿಯಾಯಿತಿ ಕೊಡಲಾಗುವುದು. ಪೋಷಕ ಸಹಾಯಧನಕ್ಕೆ 80-G ಅಧಿನಿಯಮದ ಪ್ರಕಾರ ವರಮಾನ ತೆರಿಗೆ ವಿನಾಯಿತಿ ಇದೆ. ಪೋಷಕರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

E-mail: mysuru.vivekaprabha@rkmm.org
Website: www.vivekaprabha.net
ಫೋನ್ : 9481533505

ಪ್ರಾರ್ಥನೆ

ಶ್ರೀ ಬುದ್ಧದೇವ ವಂದನಾ



ಬದ್ಧ್ವಾ ಪದ್ಮಾಸನಂ ಯೋ ನಯನಯುಗಮಿದಂ ನ್ಯಸ್ಯ ನಾಸಾಗ್ರದೇಶೇ
ಧೃತ್ವಾ ಮೌನಂ ಚ ಶಾಂತೌ ಸಮರಸಮಿಲಿತೌ ಚಂದ್ರಸೂರ್ಯಾಖ್ಯವಾತೌ ।
ಪಶ್ಯನ್ನಂತರ್ವಿಶುದ್ಧಂ ಕಿಮಪಿ ಚ ಪರಮಂ ಜ್ಯೋತಿರಾಕಾರಹೀನಂ
ಸೌಖ್ಯಾಂಭೋಧೌ ನಿಮಗ್ನಃ ದಿಶತು ಭವತಾಂ ಜ್ಞಾನಬೋಧಂ ಬುಧೋಽಯಂ ॥

ಪದ್ಮಾಸನದಲ್ಲಿ ಕುಳಿತು, ಎರಡೂ ಕಣ್ಣುಗಳನ್ನು ಮೂಗಿನ ತುದಿಯಲ್ಲಿ ಕೇಂದ್ರೀಕರಿಸಿ, ಚಂದ್ರ-ಸೂರ್ಯ ಎಂಬ (ಪ್ರಾಣ, ಅಪಾನ) ವಾಯುಗಳನ್ನು ಒಂದೇ ಸಮನಾಗಿ ಸಂಚರಿಸುವಂತೆ ಮಾಡಿ ಶಾಂತವಾಗಿರಿಸಿ, ಮೌನವನ್ನಾಧರಿಸಿರುವ; ಅಂತರಂಗದಲ್ಲಿ ಆಕಾರರಹಿತವಾದ ನಿರ್ಮಲ ಪರಮ ಜ್ಯೋತಿಯನ್ನು ಕಾಣುತ್ತಿರುವ, ಸುಖಸಾಗರದಲ್ಲಿ ಮುಳುಗಿರುವ, ಜ್ಞಾನಿಯಾದ ಈ ಬುದ್ಧದೇವನು ನಿಮಗೆ ಜ್ಞಾನಬೋಧೆಯನ್ನು ಉಂಟುಮಾಡಲಿ.

ಶ್ರೀ ಶಂಕರಾಚಾರ್ಯ ವಂದನಾ



ವೇದಾಂತಾರ್ಥವಿಭಾಸಕಾಯ ಗುರವೇ ಶಾಂತಾಯ ಸಂನ್ಯಾಸಿನೇ
ನಾನಾವಾದಿನಗೇಂದ್ರಸಂಘಪವಯೇ ಯೋಗೀಂದ್ರವಂದ್ಯಾಯ ಚ ।
ಮೋಹಧ್ವಾಂತದಿವಾಕರಾಯ ಭಗವತ್ಪಾದಾಭಿಧಾಂ ಬಿಭ್ರತೇ
ತಸ್ಮೈ ಭಾಷ್ಯಕೃತೇ ನಮೋಽಸ್ತು ಸತತಂ ಪೂರ್ಣಾಯ ಬೋಧಾತ್ಮನೇ ॥

ವೇದಾಂತದ ಅರ್ಥವನ್ನು ತೋರಿಸಿಕೊಟ್ಟ, ಗುರುವಾಗಿರುವ, ಸಂನ್ಯಾಸಿಯಾದ, ಶಾಂತನಾಗಿರುವ, ಅನೇಕ ಬಗೆಯ ವಾದಿಗಳೆಂಬ ಪರ್ವತಕ್ಕೆ ವಜ್ರಾಯುಧನಾದ (ವಾದಿಗಳನ್ನು ಜಯಿಸಿದ), ಯೋಗೀಂದ್ರರಿಂದ ನಮಸ್ಕರಿಸಲ್ಪಡುವ, ಮೋಹವೆಂಬ ಕತ್ತಲಿಗೆ ಸೂರ್ಯನಾದ (ಇತರರ ಮೋಹವನ್ನು ದೂರಮಾಡಿದ), ಭಗವತ್ಪಾದ ಎಂಬ ಹೆಸರನ್ನು ಹೊಂದಿರುವ, (ಬ್ರಹ್ಮಸೂತ್ರಾದಿಗಳಿಗೆ) ಭಾಷ್ಯಗಳನ್ನು ರಚಿಸಿರುವ ಪೂರ್ಣಜ್ಞಾನ ಸ್ವರೂಪಿಯಾದ ಆಚಾರ್ಯರನ್ನು ಸದಾ ನಮಸ್ಕರಿಸುತ್ತೇನೆ.

ಸೂಕ್ತಿಪ್ರಭ

ದಿವ್ಯಸೂಕ್ತಿಗಳು

ದಯೆಯಿಂದ ಕೂಡಿದ ಕರ್ಮಗಳನ್ನು ನಿರಂತರ ಮಾಡುವುದರಿಂದ ಮಾತ್ರ ಅಮರತ್ವವನ್ನು ಹೊಂದಬಹುದು. ಅನುಕಂಪ, ಸೇವೆ ಇವುಗಳಿಂದ ಪರಿಪೂರ್ಣತೆಯನ್ನು ಸಾಧಿಸಬಹುದು.

ಎಲ್ಲ ಜೀವಿಗಳ ಮೇಲೆ ದಯೆ — ಇದೇ ನಿಜವಾದ ಧರ್ಮ. ಇತರ ಜೀವಿಗಳ ಬಗ್ಗೆ ನಿನ್ನ ಹೃದಯದಲ್ಲಿ ಅಪರಿಮಿತ ಸದ್ಭಾವವನ್ನು ಬೆಳೆಸು.

ನಿನ್ನ ದುಃಖಕ್ಕೆ ಕಾರಣ ಏನೇ ಆಗಿರಲಿ, ಇತರರನ್ನು ಮಾತ್ರ ನೋಯಿಸಬೇಡ.

ಮಲ್ಲಿಗೆ ಹೂ ತನ್ನ ಬಾಡಿದ ಹೂಗಳನ್ನು ಉದುರಿಸುವಂತೆ, ಓ ಭಿಕ್ಷುಗಳೆ, ನೀವು ನಿಮ್ಮಲ್ಲಿರುವ ರಾಗ, ದ್ವೇಷಗಳನ್ನು ಸಂಪೂರ್ಣ ತ್ಯಜಿಸಬೇಕು.

— ಭಗವಾನ್ ಬುದ್ಧ

ಶ್ರದ್ಧೆ, ಭಕ್ತಿ, ಧ್ಯಾನಯೋಗ – ಇವುಗಳೇ ಮುಮುಕ್ಷುವಿನ ಮುಕ್ತಿಗೆ ಕಾರಣಗಳೆಂದು ಶ್ರುತಿವಾಕ್ಯವು ಹೇಳುತ್ತದೆ. ಯಾರು ಅವುಗಳಲ್ಲಿ ನೆಲೆಗೊಂಡಿರುವನೋ ಅವನಿಗೆ ಅವಿದ್ಯೆಯಿಂದ ಕಲ್ಪಿತವಾಗಿರುವ ದೇಹಬಂಧನದಿಂದ ಬಿಡುಗಡೆಯಾಗುವುದು.

ಬುದ್ಧಿಶಾಲಿಯಾದವನು ಯಾವಾಗಲೂ ತನ್ನ ಆತ್ಮವನ್ನು ಕುರಿತೇ ಧ್ಯಾನಿಸಬೇಕು. ಅದು ಅದೃಶ್ಯವಾಗಿದ್ದರೂ ಏಕೈಕ ಸತ್ಯವಾಗಿದೆ. ಬಾಹ್ಯ ಜಗತ್ತಾಗಿ ಅದು ವ್ಯಕ್ತವಾಗಿದ್ದರೂ, ಅದರ ಸ್ವರೂಪವು ವ್ಯಕ್ತಿನಿಷ್ಠ ಚೈತನ್ಯಾತ್ಮಕವಾಗಿದೆ.

ಬ್ರಹ್ಮವು ಶಾಶ್ವತವಾಗಿರುವುದರಿಂದ ಅವಿದ್ಯೆಯ ನಾಶದಿಂದಲ್ಲದೆ ಬೇರೆ ಯಾವ ಸಾಧನದಿಂದಲೂ ಅದನ್ನು ಹೊಂದಲಾಗದು.

— ಶ್ರೀ ಶಂಕರಾಚಾರ್ಯ





Ramakrishna Math (A Branch of Belur Math)

South Nada, Opp. Ashoka Petrol Pump, Haripad - 690514 Dist. Alleppey, Kerala.
Phone: 0479-2411700,0974 5325 834. Email: srkmathharipad@gmail.com,
viveka.vira@gmaiI.com Website: www.rkmathharipad.org

ಶ್ರೀರಾಮಕೃಷ್ಣರ ಮಠದ ಪುನರ್ನಿರ್ಮಾಣಕ್ಕಾಗಿ ಒಂದು ಮನವಿ



ಎರಡು ಕೊಠಡಿಗಳಿರುವ ಹಳೇ ಗೋಡೌನ್ (ಸಾಧುಗಳು ಈಗ ಇಲ್ಲಿಯೇ ತಂಗಿದ್ದಾರೆ)

ಪ್ರೀತಿಯ ಭಕ್ತರೆ, ಹಿತೈಷಿಗಳೆ ಮತ್ತು ಸ್ನೇಹಿತರೆ,

ಕೇರಳದ ಹರಿಪಾಡ್‌ನಲ್ಲಿರುವ ರಾಮಕೃಷ್ಣ ಮಠವನ್ನು ೧೯೧೨ರಲ್ಲಿ ಸ್ಥಾಪಿಸಲಾಯಿತು. ಶ್ರೀರಾಮಕೃಷ್ಣರ ನೇರಶಿಷ್ಯರೂ, ಅವರ ಮಾನಸಪುತ್ರರೂ ಆಗಿದ್ದ ಪರಮಪೂಜ್ಯ ಸ್ವಾಮಿ ಬ್ರಹ್ಮಾನಂದಜಿಯವರು ನೆಲೆಸಿದ್ದ ಪವಿತ್ರಸ್ಥಾನವಿದು. ಹಲವು ವರ್ಷಗಳ ಕಾಲ ಬಳಸದೆ ಉಳಿದದ್ದರಿಂದ ಆಶ್ರಮದ ಕಟ್ಟಡಗಳು ಈಗ ಜೀರ್ಣಾವಸ್ಥೆಯಲ್ಲಿವೆ. ಮತ್ತೆ ಇದರ ಪುನರ್‌ನಿರ್ಮಾಣ ಕಾರ್ಯವನ್ನು ನಾವು ಕೈಗೊಂಡಿದ್ದು, ಮೊದಲ ಹಂತದಲ್ಲಿ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರ, ಸಮಾಜ ಕಲ್ಯಾಣ ಚಟುವಟಿಕೆಗಳಿಗಾಗಿ ಕೊಠಡಿಗಳು, ಸಂನ್ಯಾಸಿಗಳು ಮತ್ತು ಅತಿಥಿಗಳಿಗೆ ನಿವಾಸದ ಕೊಠಡಿಗಳು, ಕಛೇರಿ ಕಟ್ಟಡ, ಗ್ರಂಥಾಲಯ ಮತ್ತು ಉಚಿತ ವಾಚನಾಲಯ – ಇವುಗಳನ್ನು ನಿರ್ಮಿಸುವ ಯೋಜನೆ ಹಾಕಿಕೊಂಡಿದ್ದೇವೆ. ಈ ಎಲ್ಲ ಕಟ್ಟಡಗಳನ್ನೂ ಸಂಪೂರ್ಣವಾಗಿ ನವೀಕರಿಸಬೇಕಾಗಿದೆ.



ಜೀರ್ಣಾವಸ್ಥೆಯಲ್ಲಿರುವ ಕಟ್ಟಡಗಳು

ಈ ಯೋಜನೆಗೆ ಸುಮಾರು 9 ಕೋಟಿ ರೂಪಾಯಿ ವೆಚ್ಚ ತಗಲಬಹುದಾಗಿದೆ.

ಉದಾರ ಹೃದಯಿಗಳಾದ ಎಲ್ಲ ದಾನಿಗಳು, ಅದರಲ್ಲೂ ಶ್ರೀರಾಮಕೃಷ್ಣರ ಭಕ್ತರು ಮುಂದೆ ಬಂದು ಶ್ರೀರಾಮಕೃಷ್ಣರ ಈ ಧಾಮವನ್ನು ನಿರ್ಮಿಸಲು ಮತ್ತು ಆ ಮೂಲಕ ಮಾನವ ಜನಾಂಗದ ಸೇವೆಯನ್ನು ಸಲ್ಲಿಸಲು ದೇಣಿಗೆಗಳನ್ನು ನೀಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇವೆ. ಈ ಸೇವಾಯಜ್ಞದಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬರೂ ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಆಶೀರ್ವಾದಗಳಿಗೆ ಖಂಡಿತವಾಗಿಯೂ ಪಾತ್ರರಾಗುತ್ತಾರೆ ಎಂಬುದು ನಮ್ಮ ನಂಬಿಕೆ.

ಇತಿ ಭಗವತ್ಸೇವೆಯಲ್ಲಿ ತಮ್ಮ,
ಸ್ವಾಮಿ ವೀರಭದ್ರಾನಂದ, ಅಧ್ಯಕ್ಷರು



೧೯೧೨ರ ಶಂಕುಸ್ಥಾಪನೆ ಶಿಲಾಫಲಕ

ದೇಣಿಗೆಗಳನ್ನು ಕಳುಹಿಸುವುದಕ್ಕೆ ಅಗತ್ಯವಾದ ವಿವರಗಳು

1) ದೇಣಿಗೆ – ಭಾರತದಲ್ಲಿ : 1) Go to-www.onlinesbi.com > Then Select- SBI Collect> State- Kerala >Institutions -Charitable Institutions >Ramakrishna Math Haripad.

2) ಚೆಕ್, ಡಿ.ಡಿ.ಗಳನ್ನು "Ramakrishna Math, Haripad" ಈ ಹೆಸರಿಗೆ ಕಳುಹಿಸಿ ಕೊಡಬೇಕು.

3) NEFT Transfer : AC Number : 30642551603, : State Bank of India. Haripad. RTGS/NEFT/IFSC code : SBIN0010596.

(ಒಂದು ವೇಳೆ NEFT ವರ್ಗಾವಣೆ ಮಾಡುವುದಾಗಿದ್ದರೆ, ದಯವಿಟ್ಟು ಇ-ಮೇಲ್ ಮೂಲಕ ನಿಮ್ಮ ಹೆಸರು, ಕಳುಹಿಸಿದ ಮೊತ್ತ, ಅಂಚೆ ವಿಳಾಸ, PAN ಸಂಖ್ಯೆ, ಫೋನ್ ಸಂಖ್ಯೆ ಹಾಗೂ ವರ್ಗಾವಣೆಯ ವಿವರಗಳನ್ನು ಈ ವಿಳಾಸಕ್ಕೆ ತಿಳಿಸಬೇಕು: srkmathharipad@gamil.com)

★ Donations from Foreign countries: Kindly draw a Cheque/ Draft in favour of "Ramakrishna Math" and send it to the General Secretary, Ramakrishna Math, Belur Math, Dt. Howrah (West Bengal), Pin -711 202, India. In the covering letter mention that it is a donation for Haripad Centre building fund. And inform all the details of the donation to e-mail: srkmathharipad@ gmail.com, viveka.vira@gmail.com

ರಾಮಕೃಷ್ಣ ಮಠಕ್ಕೆ ನೀಡುವ ದೇಣಿಗೆಗಳಿಗೆ ಸೆಕ್ಷನ್ 80G ಪ್ರಕಾರ, ಆದಾಯ ತೆರಿಗೆ ವಿನಾಯಿತಿ ಅನ್ವಯವಾಗುತ್ತದೆ.



ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕತೆ

ಆಧ್ಯಾತ್ಮಿಕ ಸಾಧನೆಯು ಮುಖ್ಯವಾಗಿ ವೈಯಕ್ತಿಕವಾದುದು. ಆದರೆ ನಮ್ಮ ವೈಯಕ್ತಿಕ ಜೀವನವು ಪ್ರಪಂಚದ ಹಲವು ಸಂಗತಿಗಳನ್ನು ಅವಲಂಬಿಸಿಕೊಂಡಿದೆ; ನಾವು ಸಂಪೂರ್ಣ ಸ್ವತಂತ್ರವಾಗಿ ಎಂದೂ ಬದುಕಲಾರೆವು. ನಮ್ಮ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಮಾಜ, ಸಂಸ್ಕೃತಿ, ಧರ್ಮಗಳು ಪ್ರಮುಖ ಪಾತ್ರ ವಹಿಸುತ್ತವೆ. ಆಧ್ಯಾತ್ಮಿಕ ಜೀವನವನ್ನು ನಡೆಸುವವನು ತನ್ನ ಸಮಾಜದೊಂದಿಗೆ ತಾನು ಹೊಂದಿರುವ ಸಂಬಂಧ, ಸಮಾಜವನ್ನು ಸಂಸ್ಕೃತಿ ಹಾಗೂ ಧರ್ಮ ಮುನ್ನಡೆಸುವ ಬಗೆ — ಇವನ್ನು ಅರಿತುಕೊಳ್ಳಬೇಕು.

ಸಮಾಜ ಮತ್ತು ಸಂಸ್ಕೃತಿ

ಸಾಮೂಹಿಕವಾಗಿ ಬದುಕುವುದು ಜೀವಿಗಳ ಸಹಜ ಸ್ವಭಾವ. ಕಾಡಿನಲ್ಲಿ ವಾಸಿಸುವ ಪ್ರಾಣಿಗಳಲ್ಲಿ, ಪಕ್ಷಿ-ಜಲಚರಗಳಲ್ಲಿ ಗುಂಪು ಗುಂಪಾಗಿ ಆಹಾರವನ್ನು ಹುಡುಕುವ, ಬೇಟೆಯಾಡುವ ಕ್ರಮವನ್ನು ನೋಡುತ್ತೇವೆ. ಮಾನವನೂ ಪ್ರಾಣಿಯೇ; ಗುಂಪಾಗಿ ಜೀವಿಸುವ ಅವನ ಸ್ವಭಾವ ಆದಿಮಾನವ ಯುಗದಿಂದಲೂ ಮುಂದುವರಿದುಕೊಂಡು ಬಂದಿದೆ. ಪ್ರಾಚೀನ ಕಾಲದಲ್ಲಿ ಮಾನವನು ಗುಂಪುಗುಂಪಾಗಿ ವಲಸೆ ಹೋಗುತ್ತ, ಅಲ್ಲಲ್ಲಿ ತಾತ್ಕಾಲಿಕವಾಗಿ ನೆಲೆನಿಂತು ಬದುಕುತ್ತಿದ್ದ; ಮುಂದೆ ಕೃಷಿ ಮುಂತಾದ ಕಸುಬುಗಳ ಆವಿಷ್ಕಾರವಾದಂತೆ, ಕೆಲವು ಅನುಕೂಲಕರ ಪ್ರದೇಶಗಳಲ್ಲಿ (ಹೆಚ್ಚಾಗಿ ನದೀತೀರಗಳಲ್ಲಿ) ವಾಸಿಸತೊಡಗಿದ.

ಹೀಗೆ ಗ್ರಾಮಜೀವನ, ಮುಂದೆ ನಾಗರಿಕತೆ ಬೆಳೆಯಿತು. ಮಾನವ ಕುಟುಂಬಗಳು ವೃದ್ಧಿ ಹೊಂದಿ ದೊಡ್ಡ ಸಮಾಜಗಳಾದವು. ತಮ್ಮ ವಲಸೆಯನ್ನು ವಿಸ್ತರಿಸುತ್ತ ವಿವಿಧ ಭೂಪ್ರದೇಶಗಳಲ್ಲಿ ಜನರು ಜೀವಿಸತೊಡಗಿದರು. ಆಯಾ ಭೂಪ್ರಕೃತಿ, ಹವಾಮಾನ, ವಿಶಿಷ್ಟ ಜೀವನಕ್ರಮಗಳಿಗನುಗುಣವಾಗಿ, ವಿವಿಧ ಸಮಾಜಗಳಲ್ಲಿ ವೈವಿಧ್ಯಮಯವಾದ ಸಾಂಸ್ಕೃತಿಕ ಬಗೆಗಳು ಕಾಣಿಸಿಕೊಂಡಿವೆ. 'ಸಂಸ್ಕೃತಿ' ಎನ್ನುವಾಗ ಒಂದು ಸಮಾಜವು ಬಹಳ ಕಾಲದಿಂದ ರೂಢಿಸಿಕೊಂಡು ಬಂದಿರುವ ರೀತಿನೀತಿಗಳು, ಸದ್ಯದಲ್ಲಿ ಹತ್ತಾರು ಕ್ಷೇತ್ರಗಳಲ್ಲಿ ಮಾಡುತ್ತಿರುವ ಕಾರ್ಯಗಳು, ಆಯಾ ಸಮಾಜಕ್ಕೆ ವಿಶಿಷ್ಟವಾದ ಜೀವನಕ್ರಮ — ಎಲ್ಲವೂ ಒಳಗೊಳ್ಳುತ್ತವೆ. ಒಂದರ್ಥದಲ್ಲಿ 'ಸಂಸ್ಕೃತಿ' ಎನ್ನುವಾಗ 'ಒಂದು ಸಮಾಜದ ಜನಜೀವನದಲ್ಲಿ ಕಂಡುಬರುವ ಎಲ್ಲ ವಿಶಿಷ್ಟ ಅಂಶಗಳು' ಎಂದು ತಿಳಿದುಕೊಳ್ಳಬೇಕು; ಆದರೆ ಸಂಸ್ಕೃತಿ ಎಂದರೆ 'ಸುಸಂಸ್ಕೃತ ಜೀವನದ ಎಲ್ಲ ಒಳ್ಳೆಯ ಸಂಗತಿಗಳು' ಎಂಬ ಭಾವನೆ ಕೂಡ ಅಲ್ಲಿ ಅನಿವಾರ್ಯವಾಗಿ ಮೂಡಿಬರುತ್ತದೆ.

ಸಂಸ್ಕೃತಿಯ ಪ್ರಧಾನ ಅಂಗವಾಗಿ ಧರ್ಮ

ವಿವಿಧ ದೇಶಗಳಲ್ಲಿ ಬದುಕುವ ವಿವಿಧ ಜನಾಂಗಗಳಲ್ಲಿ ಕಂಡುಬರುವ ಜೀವನಕ್ರಮದ ವಿಶಿಷ್ಟತೆಯನ್ನೇ ಸಂಸ್ಕೃತಿ ಎನ್ನುತ್ತೇವೆ. ವಿವಿಧ ಕಸುಬು, ವಾಣಿಜ್ಯ-ವ್ಯವಹಾರ, ಕಲೆ-ಸಾಹಿತ್ಯ, ವಿದ್ಯಾಭ್ಯಾಸ, ಧರ್ಮ, ಇತಿಹಾಸ, ಹಬ್ಬ-ಹರಿದಿನ, ಉಡುಗೆ-ತೊಡುಗೆ, ಅಡುಗೆ-ಆಹಾರ ಪದ್ಧತಿ ಇತ್ಯಾದಿ ವಿವಿಧ ನೆಲೆಗಳಲ್ಲಿ ಸಂಸ್ಕೃತಿಯ ವಿಶೇಷತೆಗಳನ್ನು ಗುರುತಿಸುತ್ತೇವೆ. ಇವುಗಳಲ್ಲಿ ಧರ್ಮ ಒಂದು ಪ್ರಧಾನ ಅಂಗವಾಗಿದೆ. ಉಳಿದ ಅಂಶಗಳೆಲ್ಲವೂ ಜನರ ದೈನಂದಿನ ಬದುಕನ್ನು ನೇರವಾಗಿ ಪ್ರಭಾವಿಸುತ್ತವೆ; ಅಥವಾ ಅವರ ಜೀವನ ಶೈಲಿಯೇ ಇಂಥ ಸಾಂಸ್ಕೃತಿಕ ಅಂಶಗಳನ್ನು ರೂಪಿಸುತ್ತವೆ. ಆದರೆ ಅವುಗಳಿಗಿಂತ ಧರ್ಮವೇಕೆ ಅಷ್ಟು ಪ್ರಧಾನವಾಗಿದೆ?

ಲೋಕೋತ್ತರವಾದ, ಅಥವಾ ಇಂದ್ರಿಯಾನುಭವಗಳನ್ನು ಮೀರಿದ 'ಅತೀತ ಸತ್ಯ'ದ ನಂಬಿಕೆಯೇ ಧರ್ಮಗಳಲ್ಲಿ ಪ್ರಧಾನ. ಅವತಾರ, ಪ್ರವಾದಿ, ಋಷಿ ಮುಂತಾದ ಮಹಾಪುರುಷರ ಅನುಭವಗಳನ್ನು ಹಾಗೂ ಉಪದೇಶಗಳನ್ನು ಅವಲಂಬಿಸಿದ ಧರ್ಮವು ಒಟ್ಟು ಸಮಾಜವನ್ನು ಅಸಾಧಾರಣ ರೀತಿಯಲ್ಲಿ ಪ್ರಭಾವಿಸುತ್ತದೆ. ಜನಸಾಮಾನ್ಯರ ನೆಲೆಯನ್ನು ಮೀರಿ ನಿಂತು, ಅತಿಶ್ರೇಷ್ಠ ಸತ್ಯ, ಮೌಲ್ಯ, ಆದರ್ಶಗಳನ್ನು ಎತ್ತಿಹಿಡಿಯುವ ಮಹಾತ್ಮರು ದೈವೀಶಕ್ತಿಯಿಂದ ಕೂಡಿದ್ದರಿಂದಲೇ ಅವರಿಗೆ ಇಡೀ ಸಮಾಜದ ಗತಿಯನ್ನು ನಿಯಂತ್ರಿಸುವುದು, ಅದನ್ನು ಅದ್ಭುತವಾದ ರೀತಿಯಲ್ಲಿ ಪ್ರಭಾವಿಸುವುದು ಸಾಧ್ಯವಾಯಿತು. ಸಮಾಜದ ನೀತಿ, ನಿಯಮಗಳನ್ನೂ ದೈನಂದಿನ ಜೀವನ ಪದ್ಧತಿಗಳನ್ನೂ, ಜನರ ನಂಬಿಕೆ-ಆಚರಣೆ-ನಡವಳಿಕೆಗಳನ್ನೂ ಧರ್ಮದಷ್ಟು ಪ್ರಭಾವಿಸಿದ ಇತರ ಅಂಶಗಳೇ ಇಲ್ಲವೆನ್ನಬಹುದು. ಕಸುಬು, ಆರ್ಥಿಕ ವ್ಯವಹಾರ, ಊಟೋಪಚಾರ, ಕಲೆ, ಸಂಸ್ಕೃತಿ ಹೀಗೆ ಎಲ್ಲ ಕ್ಷೇತ್ರಗಳ ಮೇಲೆ ಧರ್ಮ ಬೀರುವ ಪ್ರಭಾವ ದೀರ್ಘಕಾಲಿಕವೂ, ಅತ್ಯಂತ ದಟ್ಟವೂ

ವ್ಯಾಪಕವೂ ಆಗಿರುವುದನ್ನು ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿ ಕಾಣಬಹುದು.

ನಾಸ್ತಿಕತೆ, ಜಡವಾದ, ಮುಕ್ತ ಚಿಂತನೆ (free-thinking) ಮುಂತಾದ ವಿಚಾರಗಳು ಕೆಲವು ಸಮಾಜಗಳಲ್ಲಿ, ಕೆಲವು ವಲಯಗಳಲ್ಲಿ ತನ್ನ ಪ್ರಭಾವವನ್ನು ಬೀರಿದ್ದರೂ, ಪ್ರಪಂಚದ ಎಲ್ಲ ಸಂಸ್ಕೃತಿಗಳಲ್ಲಿ ಧರ್ಮವು ಬೀರಿರುವ ಪ್ರಭಾವಕ್ಕೆ ಹೋಲಿಸಿದರೆ ಅವುಗಳ ಪ್ರಭಾವ ನಗಣ್ಯವೆಂದೇ ಹೇಳಬೇಕು. ವೈಯಕ್ತಿಕ ನೆಲೆಯಲ್ಲಿ ಆಸ್ತಿಕ-ನಾಸ್ತಿಕವೆಂಬ ವಿಂಗಡನೆ ಮುಖ್ಯವಾಗಬಹುದು; ಒಟ್ಟು ಸಮಾಜವೆಂಬ ದೃಷ್ಟಿಯಲ್ಲಿ ನೋಡುವಾಗ ಅಲ್ಲಿನ ಧಾರ್ಮಿಕ ಸಂಬಂಧವು ಆ ಸಮಾಜದ ಮಟ್ಟಿಗೆ ಅವಿಭಾಜ್ಯವಾಗಿಯೇ ಇರುವುದು ಕಂಡುಬರುತ್ತದೆ.

ಆಧ್ಯಾತ್ಮಿಕತೆ-ಧರ್ಮದ ತಿರುಳು

ಪ್ರಪಂಚದ ಎಲ್ಲ ಸಮಾಜಗಳನ್ನೂ ಧರ್ಮದಷ್ಟು ಪ್ರಭಾವಿಸಿದ ಮತ್ತೊಂದು ಶಕ್ತಿ ಯಾವುದೂ ಇಲ್ಲವೆಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ವೈಜ್ಞಾನಿಕ ಆವಿಷ್ಕಾರ, ಕಂಪ್ಯೂಟರ್ ಜಗತ್ತಿನ ಈ ಯುಗದಲ್ಲೂ ಇದು ನಿಜ. ಧರ್ಮವು ಸಮಾಜದ ಮೇಲೆ ಇಷ್ಟೊಂದು ಪ್ರಭಾವ ಬೀರಲು ಕಾರಣವೇನು? ಅದೆಂದರೆ, ಧರ್ಮದ ತಿರುಳು ಆಧ್ಯಾತ್ಮಿಕತೆಯಾಗಿರುವುದು.

ಆಧ್ಯಾತ್ಮಿಕತೆಯೆಂದರೆ ಅದು ಕೇವಲ ತತ್ತ್ವವಲ್ಲ; ನೀತಿ, ನಿಯಮಗಳ ಸೂತ್ರಗಳಲ್ಲ. ಅದು ವಿಶಿಷ್ಟವಾದ ಒಂದು ರೀತಿಯ ಬದುಕು. ನಮಗೆ ಗೋಚರವಾಗುವ ಪ್ರಪಂಚವನ್ನು ಮೀರಿದ ಒಂದು ಸತ್ಯವನ್ನು ನಂಬಿ, ಅದನ್ನು ಅವಲಂಬಿಸಿಯೇ ತನ್ನೆಲ್ಲ ಬದುಕನ್ನೂ ಪರಿವರ್ತಿಸಿಕೊಳ್ಳುವ ಬದುಕು ಅದು. ಹಿಂದೆ ಆ ಸತ್ಯವನ್ನು ಕಂಡ ಮಹಾತ್ಮರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತ, ಜೀವನದುದ್ದಕ್ಕೂ ಆ ಸತ್ಯವನ್ನು (ಆ ಸತ್ಯಕ್ಕೆ ಯಾವುದೇ ಹೆಸರುಗಳಿರಲಿ : ದೇವರು, ಭಗವಂತ, ಆತ್ಮ, ಬ್ರಹ್ಮ ಇತ್ಯಾದಿ) ಕಾಣುವ ಗುರಿಯನ್ನು ಇಟ್ಟುಕೊಂಡವರ ಬದುಕೇ ಆಧ್ಯಾತ್ಮಿಕ ಬದುಕು. ಈ ಆದರ್ಶಕ್ಕನುಗುಣವಾಗಿ ಧಾರ್ಮಿಕ ತತ್ತ್ವ, ನಂಬಿಕೆ, ಶಾಸ್ತ್ರಗ್ರಂಥಗಳು, ಆಚಾರ-ವಿಚಾರಗಳು ರೂಪುಗೊಳ್ಳುತ್ತವೆ.

ಆಧ್ಯಾತ್ಮಿಕತೆಯೆಂಬುದು ವೈಯಕ್ತಿಕ; ಒಬ್ಬ ವ್ಯಕ್ತಿ ತನ್ನ ಸಾಧನೆಯನ್ನು ತಾನೇ ಮಾಡಬೇಕು. ಆದರೆ ಅವನು ಸಮಾಜದಿಂದ ಸಂಪೂರ್ಣ ಪ್ರತ್ಯೇಕಗೊಳ್ಳದವರೆಗೂ ಸಮಾಜದ ಜೊತೆಗೆ ಅವನ ಸಂಬಂಧ ಇದ್ದೇ ತೀರಬೇಕು. ಅಲ್ಲಿಯತನಕ ಅವನ ಮೇಲೆ ಸಮಾಜದ ಪ್ರಭಾವ, ಹಾಗೆಯೇ ಸಮಾಜದ ಮೇಲೆ ಅವನ ಪ್ರಭಾವ ಇದ್ದೇ ಇರುತ್ತದೆ. ಆದ್ದರಿಂದ ಆಧ್ಯಾತ್ಮಿಕತೆಯು ಧರ್ಮದ ಮೂಲಕ ಸಮಾಜದ ವಿವಿಧ ವಲಯಗಳನ್ನು ಪ್ರಭಾವಿಸುತ್ತದೆ. ಅದೇ ರೀತಿ, ಸಮಾಜದ ವಿವಿಧ ಸ್ತರಗಳಿಂದ ಆಧ್ಯಾತ್ಮಿಕ ಮಹಾವ್ಯಕ್ತಿಗಳು ಹುಟ್ಟಿಕೊಳ್ಳುತ್ತಾರೆ. ಧಾರ್ಮಿಕ ಪರಂಪರೆ, ಸಂಪ್ರದಾಯಗಳು ಸಮಾಜದ ವಿವಿಧ ನೈತಿಕ, ಕೌಟುಂಬಿಕ ನೀತಿನಿಯಮಗಳನ್ನು ರೂಪಿಸುವಲ್ಲೂ ಪ್ರಮುಖ ಪಾತ್ರ ವಹಿಸುತ್ತದೆ. ಹೀಗೆ ಆಧ್ಯಾತ್ಮಿಕತೆ ವೈಯಕ್ತಿಕವಾಗಿದ್ದದ್ದು, ಅಂತಿಮವಾಗಿ ಧರ್ಮದ ಮೂಲಕ ಸಾಮಾಜಿಕವಾಗಿ ವ್ಯಾಪಿಸಿಕೊಳ್ಳುತ್ತದೆ.

ಆಧ್ಯಾತ್ಮಿಕ ಬದುಕಿನಲ್ಲಿ ಧರ್ಮ, ಸಂಸ್ಕೃತಿಯ ಮಹತ್ವ

ಧರ್ಮ, ಸಂಸ್ಕೃತಿಗಳ ವಿಚಾರವಾಗಿ ನಾವು ಇಷ್ಟೆಲ್ಲ ಚಿಂತನೆ ನಡೆಸಿದರೂ, ಆಧ್ಯಾತ್ಮಿಕ ಜೀವನದಲ್ಲಿ ಅವುಗಳ ಉಪಯೋಗವೇನು? — ಈ ಪ್ರಶ್ನೆ ನಮ್ಮಲ್ಲಿ ಉಳಿಯುತ್ತದೆ. ಆಧ್ಯಾತ್ಮಿಕ ಜೀವನ ವೈಯಕ್ತಿಕ ನೆಲೆಯಲ್ಲಿಯೇ (ಅಂತಿಮವಾಗಿ) ಬೆಳೆಯುತ್ತ ಹೋಗುವ ಪ್ರಕ್ರಿಯೆ; ಆದ್ದರಿಂದ ಅದು ಅತ್ಯಂತ ಸೂಕ್ಷ್ಮವಾದದ್ದು, ಹಲವು ರೀತಿಯ ಏರುಪೇರುಗಳಿಂದ ಕೂಡಿದೆ. ಆದ್ದರಿಂದ ಒಬ್ಬ ವ್ಯಕ್ತಿ ಆಧ್ಯಾತ್ಮಿಕ ಜೀವನದಲ್ಲಿ ದೃಢವಾಗಿ ನೆಲೆಗೊಳ್ಳುವ ತನಕ ಅವನಿಗೆ ನೆಲೆನಿಲ್ಲಲು ಬಾಹ್ಯಪ್ರಪಂಚವೇ ಆಧಾರವಾಗಿರುತ್ತದೆ. ಸಮಾಜ, ಸಂಸ್ಕೃತಿ ಹೊತ್ತು ಸಾಗಿಸುವ ಆಧ್ಯಾತ್ಮಿಕ ಅಂಶಗಳನ್ನು ಅವಲಂಬಿಸಿಕೊಂಡೇ ಸಾಧಕನು ಮುಂದುವರಿಯಬೇಕು.

ಒಂದು ಉದಾಹರಣೆಯನ್ನು ನೋಡೋಣ: ಒಬ್ಬ ಯುವಕನಿಗೆ ಯಾವುದೋ ಕಾರಣದಿಂದ ವೈರಾಗ್ಯ ಮೂಡಿ ಬಂತು. ಭಗವತ್ ಸಾಕ್ಷಾತ್ಕಾರದ ಹಂಬಲ ಮೂಡಿತು. ಅದಕ್ಕಾಗಿ ಹೇಗೆ ಪ್ರಯತ್ನಿಸಬೇಕು? ಯಾವ ಮಾರ್ಗ ತುಳಿಯಬೇಕು? ಸ್ಪಷ್ಟವಾದ ಮಾಹಿತಿ ಸಿಗದೆ ತಡಕಾಡುತ್ತಿದ್ದ. ಹತ್ತಾರು ಜನರ ಬಳಿ ವಿಚಾರಿಸಿದಾಗ ಒಬ್ಬೊಬ್ಬರು ಒಂದೊಂದು ರೀತಿಯ ಉತ್ತರ ಕೊಟ್ಟರು. ಅವನಿಗೆ ಗೊಂದಲವುಂಟಾಯಿತು. ಹಲವಾರು ಗ್ರಂಥಗಳನ್ನೋದಿದ, ಅಲ್ಲೆಲ್ಲೂ 'ಒಂದು' ಮಾರ್ಗ ಕಾಣಿಸದೆ, ಹಲವು ವಿಚಾರಗಳ ಕಲಸುಮೇಲೋಗರ ಕಂಡುಬಂತು. ಇನ್ನೆಲ್ಲಿಗೆ ಹೋಗಲಿ? ಸ್ವಲ್ಪ ಸಮಯದಲ್ಲೇ ಅವನು ಸಾಕ್ಷಾತ್ಕಾರದ ಆಲೋಚನೆಯನ್ನೇ ಬಿಟ್ಟ.

ಆದರೆ ಆಶ್ಚರ್ಯಕರವಾದ ಸಂಗತಿಯೇ ಇದು: ಈ ಸಾಕ್ಷಾತ್ಕಾರದ ಹಂಬಲವೆಂಬುದು ಬಡಪೆಟ್ಟಿಗೆ ಬತ್ತಿಹೋಗುವ ಒರತೆಯಲ್ಲ. ಒಂದೆಡೆ ಬತ್ತಿಹೋದಂತೆ ಕಂಡುಬಂದರೂ, ಇನ್ನೊಂದು ಮೂಲೆಯಿಂದ ಉಕ್ಕಿಬರುತ್ತದೆ. ಯುವಕನ ಹುಡುಕಾಟ ಮುಂದುವರಿಯಿತು. ಕ್ರಮೇಣ ಅವನಿಗರ್ಥವಾಯಿತು, ತಾನು ಅರಸುತ್ತಿದ್ದ ಸಾಕ್ಷಾತ್ಕಾರದ ಮಾರ್ಗ ತನ್ನ ಕೌಟುಂಬಿಕ ಜೀವನದಲ್ಲೇ ಇದೆ. ಪೂಜೆ, ಸಂಧ್ಯಾವಂದನೆ, ದೇವಸ್ಥಾನ, ಧಾರ್ಮಿಕ ಗ್ರಂಥವಾಚನ, ಪಾರಾಯಣ, ವ್ರತ, ಜಪ ಹಾಗೂ ಧ್ಯಾನ — ಇವನ್ನೆಲ್ಲ ಅವನ ಪೂರ್ವಿಕರ ಕಾಲದಿಂದಲೂ ಮಾಡುತ್ತ ಬಂದಿದ್ದರು. ಇವೆಲ್ಲ ದೈವೀಕೇಂದ್ರಿತವಾದ ಆಧ್ಯಾತ್ಮಿಕ ಆಚರಣೆಗಳಲ್ಲವೆ? ಇವುಗಳ ಹಿಂದಿರುವ ತತ್ತ್ವ, ಉದ್ದೇಶ, ಗುರಿ — ಇವು ಅವನಿಗೆ ಗೊತ್ತಿರಲಿಲ್ಲ. ಈಗ ತನ್ನ ಹುಡುಕಾಟದಿಂದಾಗಿ ಹೊಸ ಬೆಳಕು ಮೂಡಿ ಬಂತು. ಎಲ್ಲ ಧಾರ್ಮಿಕ ಕ್ರಿಯೆಗಳನ್ನೂ ಬಿಟ್ಟಿದ್ದವನು ಹೊಸ ಉತ್ಸಾಹದಿಂದ ಮತ್ತೆ ಅವೆಲ್ಲವನ್ನೂ ಆರಂಭಿಸಿದ. ಹೊಸ ದಿಕ್ಕಿನಲ್ಲಿ ನಡೆಯತೊಡಗಿದ.

ಸಮಾಜದಲ್ಲಿ ಬೆಳೆದುಕೊಂಡು ಬಂದಿರುವ ಸಂಸ್ಕೃತಿ ನಮಗರಿವಿಲ್ಲದೆ ನಮ್ಮನ್ನು ಧಾರ್ಮಿಕ ಕ್ರಿಯೆ, ಆಚರಣೆಗಳಲ್ಲಿ ತೊಡಗಿ

ಸುತ್ತ ನಮ್ಮನ್ನು ಆಧ್ಯಾತ್ಮಿಕತೆಯತ್ತ ಕರೆದೊಯ್ಯುತ್ತದೆ. ಇದನ್ನು ನಾವು ಅರಿವಿನೊಂದಿಗೆ ಪ್ರಜ್ಞಾಪೂರ್ವಕವಾಗಿ ಮಾಡಿದಾಗಲೇ ಅದು ಆಧ್ಯಾತ್ಮಿಕ ಜೀವನವಾಗುವುದು. ಎಳೆಯ ವಯಸ್ಸಿನಲ್ಲೇ ಇದನ್ನು ಸ್ಪಷ್ಟವಾಗಿ ಅರಿತುಕೊಳ್ಳುವ ಸಾಮರ್ಥ್ಯವಿಲ್ಲದ ಯುವಕರು, ಆಧುನಿಕ ಜೀವನದ ಪ್ರಭಾವಕ್ಕೆ ಒಳಗಾಗಿ 'ಇವೆಲ್ಲ ಕೆಲಸಕ್ಕೆ ಬಾರದ ಗೊಡ್ಡು ಆಚರಣೆಗಳು' ಎಂದು ಅವನ್ನೆಲ್ಲ ಅಸಡ್ಡೆಯಿಂದ ಬಿಟ್ಟುಬಿಡುವ ಸಂಭವವೇ ಹೆಚ್ಚು. ಹಾಗಾಗದಂತೆ ಅವರನ್ನು ರಕ್ಷಿಸುವ, ಅವರಿಗೆ ನಿಜವಾದ ಧರ್ಮ-ಆಧ್ಯಾತ್ಮಿಕತೆಯ ಅರಿವನ್ನು ಕಲಿಸಿಕೊಡುವ ಜವಾಬ್ದಾರಿ ಹಿರಿಯರದಾಗಬೇಕು.

ಈಶಾವಾಸ್ಯಮಿದಂ ಸರ್ವಂ

ಅತೀತ ಸತ್ಯದ ಬೆಳಕಿನಂದ ಹೊರಹೊಮ್ಮಿದ ಹೊಸ ದೃಷ್ಟಿ ಆಧ್ಯಾತ್ಮಿಕ ತತ್ತ್ವಗಳಾಗಿಯೂ, ಸಮಾಜದಲ್ಲಿ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಯಾಗಿಯೂ ಪ್ರವಹಿಸುತ್ತ ಬಂತು. ಈ ಪರಂಪರೆಯ ಪೋಷಣೆ, ಆರೈಕೆಗಳಿಂದ ಆಧ್ಯಾತ್ಮಿಕ ಪ್ರೇರಣೆ ಹೊಂದಿ ವಿವೇಕ, ವೈರಾಗ್ಯ, ಭಕ್ತಿಸಂಪನ್ನನಾದ ಒಬ್ಬ ವ್ಯಕ್ತಿ ಏಕಾಂತವನ್ನರಸಿ ಹೋಗುವುದು, ತಪಸ್ಸು-ಧ್ಯಾನ-ಸಾಧನೆಗಳಲ್ಲಿ ನಿರತನಾಗಿ ಆತ್ಮಸಾಕ್ಷಾತ್ಕಾರಕ್ಕಾಗಿ ನಿರಂತರ ಯತ್ನಿಸುವುದು ಭಾರತ ದೇಶದಲ್ಲಿ ಅತಿ ಸಹಜವಾದ ಸಂಗತಿಯೆನಿಸಿತು. ಇದರ ಫಲವಾಗಿ ಸುದೀರ್ಘ ಕಾಲ ಸಾಧನೆ ಮಾಡಿದ ವ್ಯಕ್ತಿ ಇಡೀ ಜಗತ್ತನ್ನೇ ಪ್ರೀತಿಸಬೇಕು, ಪ್ರತಿಯೊಬ್ಬ ಮಾನವನನ್ನು, ಪಶು ಪಕ್ಷಿ ಪ್ರಾಣಿ ಕ್ರಿಮಿಕೀಟಾದಿಗಳನ್ನು ಕರುಣೆ-ಸಮತ್ವ-ಆತ್ಮೀಯತೆಗಳಿಂದ ಕಾಣಬೇಕು; ಇದು ಆದರ್ಶ. ಏಕೆಂದರೆ ಸಮಸ್ತ ಜೀವಿಗಳಲ್ಲೂ, ಪ್ರಪಂಚದ ಕಣಕಣದಲ್ಲೂ ಭಗವಂತನ ಚಿದಂಶದ ಕಿಡಿಯನ್ನೇ ಅವನು ಕಾಣಬೇಕು — ಇದು ಆಧ್ಯಾತ್ಮಿಕ ವ್ಯಕ್ತಿಯ ಆದರ್ಶ.

ಆದರೆ ಇದಕ್ಕೆ ವ್ಯತಿರಿಕ್ತವಾಗಿ, ಇಂತಹ ಸಾಧಕನಲ್ಲಿ ವೈಯಕ್ತಿಕತೆ, ಕೇವಲ ತನ್ನ ಉನ್ನತಿಯ ಬಯಕೆ, ಪ್ರಪಂಚ ವಿಮುಖತೆ, ಸಮಾಜದ ಮೇಲೆ ಉಪೇಕ್ಷೆ ಕಂಡುಬರುವುದುಂಟು. ಆಧ್ಯಾತ್ಮಿಕ ಉನ್ನತಿಯಾದಂತೆ ವ್ಯಕ್ತಿಯ ಹೃದಯ ವಿಶಾಲವಾಗಬೇಕು; ಅಲ್ಲಿ ಇಂತಹ ಸಂಕುಚಿತ ಭಾವಕ್ಕೆ, ಸ್ವಾರ್ಥಬುದ್ಧಿಗೆ ಅವಕಾಶವೆಲ್ಲಿ? ಪ್ರಪಂಚದ ಮೇಲೆ ವೈರಾಗ್ಯದ ನೆಪದಲ್ಲಿ ಪ್ರಪಂಚವನ್ನು ದ್ವೇಷಿಸುವ ಭಾವನೆ ಬೆಳೆಸಿಕೊಂಡಾಗ ಇಂಥ ಸ್ವಾರ್ಥಭಾವ ಬೆಳೆಯುವ ಸಾಧ್ಯತೆಯಿದೆ. 'ತನ್ನೊಳಗೆ ತಾನು ದೇವರನ್ನು ಕಂಡ ಬಳಿಕ ಎಲ್ಲೆಡೆ ದೇವರನ್ನು ನೋಡುತ್ತೇನೆ' ಎಂದು ಹೊರಟವನು, ಪ್ರಪಂಚದಲ್ಲಿ ಭಗವಂತನ ಅಸ್ತಿತ್ವವನ್ನು ಕಾಣದೆ, ಸಂಕುಚಿತಭಾವದಿಂದ ಸ್ವಕೇಂದ್ರಿತ ವ್ಯಕ್ತಿಯಾಗುವ ಅಪಾಯವಿದೆ. ಈ ತೊಂದರೆಯನ್ನು ನಿವಾರಿಸಲು ಅತ್ಯುತ್ತಮ ದೃಷ್ಟಿಕೋನವೇ ಉಪನಿಷತ್ತುಗಳಲ್ಲಿ ಕಂಡುಬರುವ ಆತ್ಮನ ಸರ್ವವ್ಯಾಪಕ ಭಾವ. '**ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್**' — ಈ ಸಮಸ್ತ ವಿಶ್ವವು ಭಗವಂತನ ಆವಾಸಸ್ಥಾನವಾಗಿದೆ; ಅಂತಹ ಈಶನ ಭಾವದಿಂದ ಇಡೀ ಜಗತ್ತನ್ನು ವ್ಯಾಪಿಸಬೇಕು ಎಂಬ ಆದರ್ಶ ಇಲ್ಲಿನದು. ಅಂತೆಯೇ, ಛಾಂದೋಗ್ಯೋಪನಿಷತ್ತಿನಲ್ಲಿ ಬರುವ '**ಸರ್ವಂ ಖಲ್ವಿದಂ ಬ್ರಹ್ಮ**' (ಇದೆಲ್ಲವೂ ಬ್ರಹ್ಮವೇ) ಎಂಬ ಮಾತಿನಲ್ಲಿಯೂ ಪ್ರಪಂಚವನ್ನು ದೈವೀಭಾವದಿಂದ ಕಾಣಬೇಕೆಂಬ ಆದರ್ಶವಿದೆ. ಸಾಧಕನಲ್ಲಿ ಸಮದೃಷ್ಟಿ, ಸಮಗ್ರ ಮನೋಭಾವ ವಿಕಾಸ ಹೊಂದಿದಾಗಲೇ ಅವನ ಹೃದಯ ಸಂಕುಚಿತ ಭಾವವನ್ನು ತೊರೆದು, ವಿಶ್ವವನ್ನೆಲ್ಲ ತುಂಬಿರುವ ಭಗವಂತನ ಅಸ್ತಿತ್ವವನ್ನು ಗ್ರಹಿಸಲು ಸಮರ್ಥವಾಗುವುದು. ಆಗ ಸಾಕ್ಷಾತ್ಕಾರಕ್ಕೆ ಮೊದಲು ಅಥವಾ ಸಾಕ್ಷಾತ್ಕಾರವಾದ ನಂತರ ಸಾಧಕನ ಭಾವ, '**ಸರ್ವತ್ರ ಸಮದರ್ಶನಃ**' ಹಾಗೂ '**ಯೋ ಮಾಂ ಪಶ್ಯತಿ ಸರ್ವತ್ರ ಸರ್ವಂ ಚ ಮಯಿ ಪಶ್ಯತಿ**' *(ಗೀತಾ, ೬.೨೯-೩೦)* ಎಂದಾಗುವುದು.

ಶ್ರೀರಾಮಕೃಷ್ಣರು ತೋರಿದ ಮಾರ್ಗ

ಬಾಲಕ ನರೇಂದ್ರನಿಗೆ ತೀವ್ರ ವೈರಾಗ್ಯವುಂಟಾಗಿ, ಇಡೀದಿನ ತಾನು ಧ್ಯಾನ, ಸಮಾಧಿಯಲ್ಲಿ ಮುಳುಗಿರಬೇಕು, ಕೇವಲ ಆಹಾರ ಸೇವನೆಗಾಗಿ ಮಾತ್ರ ಬಹಿರ್ಮುಖನಾಗಬೇಕು ಎಂಬ ಹಂಬಲವುಂಟಾಯಿತು. ತನ್ನ ಬಯಕೆಯನ್ನು ಗುರು ಶ್ರೀರಾಮಕೃಷ್ಣರಿಗೆ ತಿಳಿಸಿದಾಗ, ಅವರು ನರೇಂದ್ರನನ್ನು ಬಯ್ಯುತ್ತ, "ಛಿ! ನಾಚಿಕೆಯಾಗಬೇಕು ನಿನಗೆ! ಅದಕ್ಕಿಂತಲೂ ಉನ್ನತವಾದ ಅವಸ್ಥೆಯಿದೆ. ಆಲದ ಮರದಂತೆ ಹಲವು ಜೀವಿಗಳಿಗೆ ಆಶ್ರಯ ನೀಡಿ, ಅವುಗಳನ್ನು ಉದ್ಧರಿಸುವ ಮಹಾತ್ಮ ನೀನಾಗುವೆ ಎಂದುಕೊಂಡಿದ್ದೆ" ಎಂದರು.

ಇಡೀ ಸಮಾಜದ ಹಿತವನ್ನು ಬಯಸಿ, ಜೀವಸೇವೆ ಮಾಡುವ ಮೂಲಕ ತನ್ನ ಸಾಕ್ಷಾತ್ಕಾರಕ್ಕಾಗಿ ಸಾಧನೆ ಮಾಡುವ ಹೊಸ ಆದರ್ಶ ಶ್ರೀರಾಮಕೃಷ್ಣರಿಂದ ಮೂಡಿಬಂದುದು ಹೀಗೆ. ಆತ್ಮಸಾಕ್ಷಾತ್ಕಾರವಿಲ್ಲದೆ ಆಧ್ಯಾತ್ಮಿಕತೆಯಿಲ್ಲ; ಸರ್ವತ್ರ ಸಮದರ್ಶನವಿಲ್ಲದೆ ಜಗತ್ತಿನ ಕಲ್ಯಾಣವಿಲ್ಲ. ಇವೆರಡನ್ನೂ ಮೇಳೈಸಿ '**ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ**' (ತನ್ನ ಮೋಕ್ಷಕ್ಕಾಗಿ ಹಾಗೂ ಜಗತ್ತಿನ ಹಿತಕ್ಕಾಗಿ) ಎಂಬ ಅವಳಿ ಆದರ್ಶವನ್ನು ಮುಂದಿಟ್ಟುಕೊಂಡು ಸ್ವಾಮೀಜಿ ರಾಮಕೃಷ್ಣ ಮಠ ಮತ್ತು ಮಿಷನ್ನನ್ನು ಸ್ಥಾಪಿಸಿದರು. ಧರ್ಮ, ಸಂಸ್ಕೃತಿ, ಆಧ್ಯಾತ್ಮಿಕತೆ ಇವುಗಳ ಸಮತೋಲನದೊಂದಿಗೆ ಸಾಧನೆ ಮಾಡುತ್ತ, ಸಮಾಜದ ಹಿತಕ್ಕಾಗಿ ದುಡಿಯುವ, ಜೀವಸೇವೆಯೇ ಆತ್ಮಪೂಜೆಯೆಂಬುದನ್ನು ನಿತ್ಯಜೀವನದಲ್ಲಿ ಆಚರಣೆಗೆ ತರುವ ಕಾರ್ಯ ಇಂದಿಗೂ ಈ ಸಂಸ್ಥೆಗಳ ಮೂಲಕ ನಡೆಯುತ್ತಿದೆ.

ಮೇ ತಿಂಗಳ ಕಾರ್ಯಕ್ರಮಗಳು

೭	ಮಂಗಳವಾರ	ಶ್ರೀ ಬಸವ ಜಯಂತಿ
೯	ಗುರುವಾರ	ಶ್ರೀ ಶಂಕರ ಜಯಂತಿ
೯	ಗುರುವಾರ	ಶ್ರೀ ರಾಮಾನುಜ ಜಯಂತಿ
೧೫	ಬುಧವಾರ	ಏಕಾದಶಿ
೧೮	ಶನಿವಾರ	ಬುದ್ಧಪೂರ್ಣಿಮೆ
೩೦	ಗುರುವಾರ	ಏಕಾದಶಿ

* *ವಿ.ಸೂ : ಏಪ್ರಿಲ್ ತಿಂಗಳ ಕಾರ್ಯಕ್ರಮಗಳು ತಪ್ಪಾಗಿ ಮುದ್ರಿತವಾಗಿವೆ. ಅಲ್ಲಿನ ಹಲವು ಕಾರ್ಯಕ್ರಮಗಳು ನಿಜವಾಗಿ ಈ ತಿಂಗಳು ಬರುತ್ತವೆ. ತಪ್ಪಿಗಾಗಿ ವಿಷಾದಿಸುತ್ತೇವೆ.*

ಸ್ವ-ಪ್ರಯತ್ನ



❁ ಮೊದಲು ಸ್ವಲ್ಪ ಕಾಲ ಸೊಂಟ ಕಟ್ಟ ಬೇಕಾಗುತ್ತದೆ. ಬಳಿಕ ಅಷ್ಟು ಶ್ರಮ ತೆಗೆದುಕೊಳ್ಳ ಬೇಕಾಗಿಲ್ಲ. ಎಲ್ಲಿಯವರೆಗೆ ದೋಣಿ ಅಲೆ, ಬಿರುಮಳೆ, ಬಿರುಗಾಳಿ ಇವುಗಳ ಮೂಲಕ ಅಥವಾ ನದಿಯ ತಿರುವಿನ ಮೂಲಕ ಹಾದು ಹೋಗಬೇಕಾಗಿರುವುದೊ ಅಲ್ಲಿಯವರೆಗೆ ದೋಣಿ ನಡೆಸುವವ ಎದ್ದು ನಿಂತು ಚುಕ್ಕಾಣಿ ಹಲಗೆಯನ್ನು ಬಿಗಿಯಾಗಿ ಹಿಡಿದುಕೊಂಡಿರ ಬೇಕಾಗುತ್ತದೆ. ಆದರೆ ಅದನ್ನು ದಾಟಿಯಾದ ನಂತರ ಅಷ್ಟು ಶ್ರಮ ತೆಗೆದುಕೊಳ್ಳಬೇಕಾಗಿಲ್ಲ. ಅದು ತಿರುವನ್ನು ಹಾದ ನಂತರ ಅನುಕೂಲವಾದ ಗಾಳಿ ಬೀಸ ಲಾರಂಭಿಸಿದರೆ, ಚುಕ್ಕಾಣಿ ಹಲಗೆಯನ್ನು ಸುಮ್ಮನೆ ಕೈಯಲ್ಲಿ ಹಿಡಿದುಕೊಂಡು ಹಾಯಾಗಿ ಕುಳಿತುಕೊಳ್ಳುತ್ತಾನೆ. ಬಳಿಕ ಪಟ ಕಟ್ಟಲು ವ್ಯವಸ್ಥೆ ಮಾಡಿ ತಂಬಾಕು ಸೇದಲು ಸಿದ್ಧನಾಗುತ್ತಾನೆ. ಹಾಗೇನೆ ಸಾಧಕ ಕಾಮ-ಕಾಂಚನಗಳ ಬಿರುಗಾಳಿ, ಬಿರುಮಳೆ ಇವನ್ನೆಲ್ಲಾ ದಾಟಿಬಿಟ್ಟ ಅಂದರೆ ಆಗ ಆತನಿಗೆ ಶಾಂತಿ.

❁ ಉದಾಹರಣೆಗೆ ತೂಗುವ ಕಡ್ಡಿ ತೆಗೆದುಕೊ. ಒಂದು ತಟ್ಟೆಗೆ ಭಾರ ಹಾಕಿದರೆ ಕೆಳಗಿನ ಮತ್ತು ಮೇಲಿನ ಮುಳ್ಳು ಒಂದು ಮುಖವಾಗಿರುವುದಿಲ್ಲ. ಕೆಳಗಿನ ಮುಳ್ಳೇ ಮನಸ್ಸು-ಮೇಲಿನ ಮುಳ್ಳೇ ಭಗವಂತ. ಎರಡು ಮುಳ್ಳೂ ಒಂದೇ ಮುಖ ವಾಗುವುದಕ್ಕೆ ಯೋಗ ಅಂತ ಹೆಸರು.

❁ ಮನಸ್ಸು ಸ್ಥಿರವಾಗದ ಹೊರತು ಯೋಗಾವಸ್ಥೆ ಬಾರದು. ಸಂಸಾರದ ಗಾಳಿ ಮನಸ್ಸೆಂಬ ದೀಪವನ್ನು ಸರ್ವದಾ ಅಲ್ಲಾಡಿಸು ತ್ತಿರುತ್ತದೆ. ಆ ದೀಪ ಸಂಪೂರ್ಣವಾಗಿ ಅಲ್ಲಾಡದೆ ಇತ್ತು ಅಂದರೆ ಆಗ ಅದಕ್ಕೆ ಯೋಗಾವಸ್ಥೆ ಬಂದುಬಿಡುತ್ತದೆ.

❁ ಯೋಗಿಗಳ ಮನಸ್ಸು ಸರ್ವದಾ ಭಗವಂತನ ಅಡಿದಾವರೆ ಗಳಲ್ಲಿ ನೆಲಸಿರುತ್ತದೆ — ಸರ್ವದಾ ಆತ್ಮಸ್ಥವಾಗಿರುತ್ತದೆ. ಮುಖ ನೋಡಿದರೇ ಗೊತ್ತಾಗಿಬಿಡುತ್ತದೆ. ಕಣ್ಣೇನೋ ತೆರೆದಿರುತ್ತದೆ, ದೃಷ್ಟಿ ಮಾತ್ರ ಬಹಿರ್ಜಗತ್ತಿನ ಕಡೆಗೇ ಇರುವುದಿಲ್ಲ. ಹಕ್ಕಿ ಕಾವಿಗೆ ಕುಳಿತಿರುವಾಗ ಅದರ ಇಡೀ ಮನಸ್ಸು ಮೊಟ್ಟೆಯ ಮೇಲೆ ನೆಲೆಸಿ, ಅದರ ಕಣ್ಣು ಮಾತ್ರ ಸುಮ್ಮನೆ ಮೇಲಕ್ಕೆ ನೋಡುತ್ತಿರುವ ಹಾಗೆ ಕಾಣಿಸುತ್ತದೆ.

❁ ಕಿರುಮನೆಯೊಳಗಿಟ್ಟಿರುವ ರತ್ನ ನೋಡಬೇಕಾಗಿದ್ದರೆ, ಅದನ್ನು ಸ್ವಾಧೀನ ಪಡಿಸಕೊಳ್ಳಬೇಕಾಗಿದ್ದರೆ, ಶ್ರಮವಹಿಸಿ ಬೀಗದ ಕೈ ವಿಚಾರಿಸಿ ತಂದು ಬಾಗಿಲು ತೆರೆಯಬೇಕಾಗುತ್ತದೆ. ಬಳಿಕ ರತ್ನವನ್ನು ಹೊರಕ್ಕೆ ತೆಗೆದುಕೊಂಡು ಬರಬೇಕಾಗುತ್ತದೆ. ಹಾಗೆ ಮಾಡದೆ, ಬೀಗ ಹಾಕಿದ ಬಾಗಿಲಿನ ಮುಂದೆ ಸುಮ್ಮನೆ ನಿಂತು ಕೊಂಡು 'ಈಗ ಬೀಗ ತೆಗೆದಿದ್ದೇನೆ. ಸಂದೂಕದ ಬೀಗವನ್ನು ಮುರಿದಿದ್ದಾಯಿತು. ಈಗ ರತ್ನ ಹೊರಕ್ಕೆ ತೆಗೆದಿದ್ದೇನೆ' ಎಂಬುದಾಗಿ ಭಾವಿಸಿದರೆ ಅದರಿಂದ ಏನು ತಾನೆ ದೊರೆತೀತು? ಸಾಧನೆ ಮಾಡಬೇಕು.

❁ ಚಿತ್ತಶುದ್ಧಿ ಆಗದೆ ಇತ್ತು ಎಂದರೆ, ಭಗವಂತನ ದರ್ಶನ ಪಡೆಯಲಾಗುವುದಿಲ್ಲ. ಕಾಮ, ಕಾಂಚನಾಸಕ್ತಿಯಿಂದ ಮನಸ್ಸು ಮಲಿನ ವಾಗಿಬಿಟ್ಟಿದೆ-ಕೊಳೆಯಿಂದ ತುಂಬಿದೆ. ಸೂಜಿ ಮಣ್ಣಿನಿಂದ ಆವೃತವಾಗಿದ್ದರೆ ಆಗ ಸೂಜಿಗಲ್ಲು ಅದನ್ನು ಎಳೆಯಲಾರದು. ಆ ಮಣ್ಣನ್ನು ತೊಳೆದುಬಿಟ್ಟದ್ದೇ ಆದರೆ ಒಡನೆ ಸೂಜಿಗಲ್ಲು ಅದನ್ನು ಎಳೆದುಬಿಡುತ್ತದೆ. ಅದೇ ರೀತಿ ಮನಸ್ಸಿನ ಕೊಳಕನ್ನು ಕಣ್ಣೀರಿನಿಂದ ತೊಳೆದುಬಿಡಬಹುದು. ಯಾರೇ ಆಗಲಿ, 'ಹೇ ಭಗವಂತ, ಮತ್ತೆ ನಾನು ಅಂಥ ಕಾರ್ಯ ಗಳನ್ನು ಮಾಡುವುದಿಲ್ಲ' ಅಂತ ಹೇಳಿ ಅನುತಾಪದಿಂದ ಅತ್ತುದೇ ಆದರೆ, ಕೊಳೆ ತೊಳೆದುಹೋಗುತ್ತದೆ. ಆಗ ಭಗವದ್ರೂಪದ ಸೂಜಿ ಗಲ್ಲು ಮನಸ್ಸೆಂಬ ಸೂಜಿಯನ್ನು ಎಳೆದುಕೊಂಡುಬಿಡುತ್ತದೆ. ಆಗ ಸಮಾಧಿಯುಂಟಾಗುತ್ತದೆ. ಭಗವಂತನ ದರ್ಶನ ದೊರೆಯುತ್ತದೆ.

❁ ಅಭ್ಯಾಸಯೋಗದಿಂದ ಕಾಮಕಾಂಚನಾಸಕ್ತಿಯನ್ನು ತ್ಯಾಗ ಮಾಡಲು ಸಾಧ್ಯ. ಗೀತೆಯಲ್ಲಿ ಹೀಗೆಂದು ಹೇಳಿದೆ: ಅಭ್ಯಾಸದಿಂದ ಮನಸ್ಸು ಅಸಾಧಾರಣ ಶಕ್ತಿಯನ್ನು ಗಳಿಸಿಕೊಳ್ಳು ತ್ತದೆ. ಆಗ ಇಂದ್ರಿಯ ಸಂಯಮ ಮಾಡಲು — ಕಾಮ ಕ್ರೋಧಾದಿಗಳನ್ನು ವಶಪಡಿಸಿಕೊಳ್ಳಲು ಕಷ್ಟವಾಗುವುದಿಲ್ಲ. ಅಂಥ ಮನುಷ್ಯ ಆಮೆಯಂತೆ ವರ್ತಿಸುತ್ತಾನೆ. ಆಮೆ ಒಮ್ಮೆ ತನ್ನ ಕೈ ಕಾಲುಗಳನ್ನು ಒಳಕ್ಕೆ ಸೆಳೆದುಕೊಂಡಿತೆಂದರೆ ಮತ್ತೆ ಅದು ಹೊರಕ್ಕೆ ಬಿಡದು. ಕೊಡಲಿ ತೆಗೆದುಕೊಂಡು ಅದನ್ನು ಚೂರು ಚೂರು ಮಾಡಿದರೂ ಅದು ಅವನ್ನು ಹೊರಕ್ಕೆ ಬಿಡದು.

❁ ಸದಸದ್ವಿಚಾರಕ್ಕೇ 'ವಿವೇಕ' ಅಂತ ಹೆಸರು. ವೈರಾಗ್ಯ ವೆಂದರೆ ಪ್ರಾಪಂಚಿಕ ವಸ್ತುಗಳ ಕಡೆಗೆ ವಿರಕ್ತಿ. ಇವು ಒಮ್ಮೆಗೇ ದೊರೆತುಬಿಡುವುದಿಲ್ಲ — ದಿನವೂ ಅಭ್ಯಾಸ ಮಾಡಬೇಕು. ಮೊದಲು ಕಾಮಕಾಂಚನ ತ್ಯಾಗವನ್ನು ಮಾನಸಿಕವಾಗಿ ಮಾಡ ಬೇಕು. ಬಳಿಕ ಭಗವತ್ ಕೃಪೆಯಿಂದ ಮಾನಸಿಕವಾಗಿಯೂ ಬಾಹ್ಯಿಕವಾಗಿಯೂ ತ್ಯಾಗ ಮಾಡಲು ಆಗುತ್ತದೆ.

❁ ವ್ಯಾಕುಲತೆಯಿಂದ ಭಗವಂತನನ್ನು ಕರೆದರೆ ಆತನ ದರ್ಶನ ಪಡೆಯಬಹುದು. ಅನೇಕ ವಿಷಯಗಳನ್ನು ತಿಳಿದು ಕೊಳ್ಳುವುದರ ಆವಶ್ಯಕತೆಯೇನಿಲ್ಲ.

ಶ್ರೀರಾಮಕೃಷ್ಣ ವಚನವೇದದಿಂದ

ಶ್ರೀಮಾತೆಯವರೊಂದಿಗೆ

ಮೂಲ ಬಂಗಾಳಿ : **ಸ್ವಾಮಿ ಶಾರದೇಶಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

ಭಾಗ ೩

ಜಯರಾಮಬಾಟಿಯಲ್ಲಿ ಒಬ್ಬಳು ಬಾಲವಿಧವೆಯಿದ್ದಳು. ಅವಳು ತುಂಬ ಬಡವಿ. ತುಂಬ ಕಷ್ಟಪಟ್ಟು ಕೆಲಸ ಮಾಡುತ್ತ ಅವಳು ದಿನ ಕಳೆಯುತ್ತಿದ್ದಳು. ಯಾವಾಗ ಅವಳ ಮದುವೆಯಾಗಿತ್ತು, ಗಂಡ ಹೇಗಿದ್ದ, ಹೇಗೆ ಅವಳು ವಿಧವೆಯಾದಳು, ಏನೂ ಅವಳಿಗೆ ಗೊತ್ತಿರಲಿಲ್ಲ. ತುಸು ವಯಸ್ಸಿಗೆ ಬಂದಾಗ ಅವಳಿಗೆ ತಿಳಿದು ಬಂತು, ತಾನು ವಿಧವೆ; ತನಗೆ ಇನ್ನು ಮದುವೆಯಾಗುವಂತಿಲ್ಲ , ಸಂಸಾರದ ಸುಖಭೋಗಗಳೆಲ್ಲ ತನಗೆ ಇನ್ನು ಸಿಗುವಂತಿಲ್ಲ ಎಂದು. ಭಕ್ತರ ಸಾಮಾನು, ಹೊರೆಗಳನ್ನು ಸಾಗಿಸಲು ಆಕೆ ಶ್ರೀಮಾತೆಯವರ ಮನೆಗೆ ಬರುತ್ತಿದ್ದಳು. ಶ್ರೀಮಾತೆಗೆ ಅವಳ ಮೇಲೆ ಪ್ರೀತಿಯಿತ್ತು. ಕ್ರಮೇಣ ಅವಳು ತಾರುಣ್ಯಕ್ಕೆ ಬಂದಳು. ಒಬ್ಬ ಯುವಕನೊಂದಿಗೆ ಅವಳು ಅನೈತಿಕ ಸಂಬಂಧ ಹೊಂದಿದ ವಿಚಾರ ಎಲ್ಲೆಡೆ ಹರಡಿತು. ಹೃದಯವಿಹೀನರಾದ ಸಮಾಜದ ದೊಡ್ಡ ದೊಡ್ಡ ವ್ಯಕ್ತಿಗಳು ಇಲ್ಲಿಯ ತನಕ ಈ ಅನಾಥೆಯ ಬಗ್ಗೆ ಸ್ವಲ್ಪವೂ ತಲೆಕೆಡಿಸಿಕೊಂಡಿರಲಿಲ್ಲ. ಅವಳಿಗೆ ಒಳ್ಳೆಯ ಶಿಕ್ಷಣ ಕೊಡಿಸಲು ಯಾವುದೇ ವ್ಯವಸ್ಥೆ ಮಾಡಲಿಲ್ಲ. ಈಗ ಅವರ ತೀಕ್ಷ್ಣ ದೃಷ್ಟಿ ಈ ದುಃಖಿನಿಯ ಮೇಲೆ ಬಿದ್ದಿತು. ಆ ದೌರ್ಭಾಗ್ಯೆ ಅಪಮಾನ, ನಿಂದೆಗಳಿಗೆ ಒಳಗಾದಳು. ಶ್ರೀಮಾತೆ ಆ ಎಲ್ಲ ವಾರ್ತೆಯನ್ನು ಕೇಳಿ, ಆ ಹೆಣ್ಣುಮಗಳ ಭವಿಷ್ಯದ ಬಗ್ಗೆ ತುಂಬ ಚಿಂತಿಸತೊಡಗಿದರು ಹಾಗೂ ಅತ್ಯಂತ ದುಃಖಿತರಾದರು. ಆದರೆ ಭಗವಂತನ ಬಳಿ ಪ್ರಾರ್ಥಿಸುವುದನ್ನು ಬಿಟ್ಟು ಅವರು ಬೇರೆ ಏನು ತಾನೆ ಮಾಡಬಲ್ಲರು!

ಭಗವಂತನಿಗೆ ಕೊನೆಗೂ ಕರುಣೆಯುಂಟಾಯಿತು. ಶ್ರೀಮಾತೆಯವರ ಕೃಪೆಗೆ ಪಾತ್ರನಾದ, ಅವರ ಶಿಷ್ಯನ ಸ್ಥಾನದಲ್ಲಿದ್ದ ಒಬ್ಬಾತ ಜಮೀನ್ದಾರ ಅಲ್ಲಿ ಹಸ್ತಕ್ಷೇಪ ಮಾಡಿ ಅಲ್ಲಿ ನಡೆಯುತ್ತಿದ್ದ ಸಾಮಾಜಿಕ ಗೊಂದಲವನ್ನು ನಿಲ್ಲಿಸಿದ. ಅದನ್ನು ಕೇಳಿದ ಶ್ರೀಮಾತೆ ಸಮಾಧಾನ ಹೊಂದಿದರು. ಸ್ವಲ್ಪ ದಿನಗಳ ನಂತರ ಆ ಜಮೀನ್ದಾರ ಶಿಷ್ಯ ಶ್ರೀಮಾತೆಗೆ ಪ್ರಣಾಮ ಮಾಡಲು ಬಂದಾಗ, ಶ್ರೀಮಾತೆ ಸಂತಸಗೊಂಡು ಅವನನ್ನು ಆಶೀರ್ವಾದಿಸುತ್ತ ಹೇಳಿದರು, ''ಮಗೂ, ಆ ದೀನ ಹೆಣ್ಣುಮಗಳನ್ನು ಬದುಕಿಸಿಬಿಟ್ಟೆ; ಅವಳಿಗೆ ರಕ್ಷಣೆ ನೀಡಿದೆ. ಅದನ್ನು ಕೇಳಿ ನನ್ನ ಜೀವ ತಂಪಾಯಿತು ನೋಡು. ಭಗವಂತ ನಿನಗೆ ಮಂಗಳವನ್ನುಂಟುಮಾಡುತ್ತಾನೆ.''

ನಾವು ಯಾರನ್ನು ಅತ್ಯಂತ ಅಧಮರೆಂದು ತುಚ್ಛೀಕರಿಸುತ್ತೇವೋ, ಅವರನ್ನೂ ಪ್ರೀತಿಸಿ, ಅವರಿಗೆ ವಿಪತ್ತು ಬಂದೊದಗಿದಾಗ ಇಂತಹ ಸಹಾನುಭೂತಿ, ಇಂತಹ ಸ್ನೇಹವನ್ನು ಜಗಜ್ಜನನಿಯಲ್ಲದೆ, 'ಜನ್ಮ ಜನ್ಮಾಂತರಗಳ ಮಾತೆ'ಯಲ್ಲದೆ 'ಸತ್ಯವಂತರ ತಾಯಿ, ಅಸತ್ಯವಂತರ ತಾಯಿ' ಯಲ್ಲದೆ ಇನ್ನು ಯಾರಲ್ಲಿ ಕಾಣಬಹುದು!

ಗೃಹಸ್ಥ ಭಕ್ತರು ಸಂಸಾರದಲ್ಲಿ ನಿರಾಸಕ್ತಿ ಅಥವಾ ಅಸಡ್ಡೆ ತೋರಿಸುವುದು ಶ್ರೀಮಾತೆಗೆ ಇಷ್ಟವಾಗುತ್ತಿರಲಿಲ್ಲ. ಈ ಸಂಸಾರವೆಲ್ಲ ಭಗವಂತನದೇ; ಅವನು ನಮ್ಮನ್ನು ಎಲ್ಲಿ, ಯಾವ ಕೆಲಸದಲ್ಲಿ ನಿಯೋಜಿಸಿದ್ದಾನೋ, ಅಲ್ಲಿ ಅವನನ್ನೇ ಅವಲಂಬಿಸಿ, ಎಷ್ಟು ಸಾಧ್ಯವೋ ಅಷ್ಟು ಚೆನ್ನಾಗಿ ಕೆಲಸ ಮಾಡಲು ಪ್ರಯತ್ನಿಸುವುದೇ ನಮಗೆ ಎಂದೆಂದಿಗೂ ಶ್ರೇಯಸ್ಕರ ಎಂದು ಶ್ರೀಮಾತೆ ತಮ್ಮ ಶಿಷ್ಯಂದಿರಿಗೆಲ್ಲ ಕಲಿಸುತ್ತಿದ್ದರು. ತಮ್ಮ ಕರ್ತವ್ಯ ಪಾಲನೆಯಲ್ಲಿ ಆಸಕ್ತಿಯಿಲ್ಲದ ವ್ಯಕ್ತಿಗಳ ಬಗ್ಗೆ ಶ್ರೀಮಾತೆ ಅಸಮಾಧಾನ ವ್ಯಕ್ತಪಡಿಸುತ್ತ ಹೇಳುತ್ತಿದ್ದರು, ''ಠಾಕುರ್.. ಯಾವ ಶ್ರೀರಾಮಕೃಷ್ಣರಿಗೆ ತಮ್ಮ ಉಟ್ಟ ಬಟ್ಟೆಬರೆಯನ್ನು ಸರಿಯಾಗಿ ಇಟ್ಟುಕೊಳ್ಳಲಾಗುತ್ತಿರಲಿಲ್ಲವೋ, ಅವರಿಗೇ ನಮ್ಮ ಬಗ್ಗೆ ಎಷ್ಟೊಂದು ಚಿಂತೆ!''

ಒಂದು ಸಲ ಒಬ್ಬ ಭಕ್ತ ಶಿಷ್ಯ ಶ್ರೀಮಾತೆಗೆ ತುಂಬಾ ಬೆಲೆ ಬಾಳುವ ವಸ್ತ್ರವನ್ನು ಖರೀದಿಸಿ ಕೊಡಲು ವಿಶೇಷವಾಗಿ ಒತ್ತಾಯಿಸಿದಾಗ ಶ್ರೀಮಾತೆ ಅದಕ್ಕೊಪ್ಪದೆ, ''ನಿನಗೆ ಹಣ ಖರ್ಚು ಮಾಡಲೇಬೇಕೆಂಬ ಒತ್ತಾಯವಿದ್ದರೆ, ಒಂದಳತೆಯ ಧಾನ್ಯ ಬೆಳೆಯುವ ಜಮೀನು ಖರೀದಿ ಮಾಡಿಕೊಡು. ಅದು ಸಾಧುಗಳ, ಭಕ್ತರ ಸೇವೆಗೆ ವಿನಿಯೋಗವಾದೀತು'' ಎಂದರು. ಆ ಭಕ್ತ ಹಣ ಕೊಟ್ಟಾಗ ಒಂದು ತುಂಡು ಜಮೀನು ಕೊಂಡುಕೊಳ್ಳುವ ಮಾತುಕತೆ ಬಂತಾದರೂ, ಅದರ ಮಾಲೀಕ ಮನಸ್ಸು ಬದಲಾಯಿಸಿದ್ದರಿಂದ ಆ ಜಮೀನನ್ನು ಕೊಂಡುಕೊಳ್ಳಲಾಗಲಿಲ್ಲ. ಶ್ರೀಮಾತೆ ಈ ವಿಷಯವಾಗಿ ಒಬ್ಬ ಶಿಷ್ಯನಿಗೆ ಹೇಳಿದರು: ''ಮಗೂ, ಈಗಂತೂ ಜಮೀನು ಕೊಂಡುಕೊಳ್ಳಲಾಗಲಿಲ್ಲ. ಹಣವನ್ನು ಇಟ್ಟುಕೊಂಡರೆ ಎಲ್ಲವೂ ಖರ್ಚಾಗಿಹೋಗುವುದು. ಅದಕ್ಕಾಗಿ ಹಣವನ್ನೆಲ್ಲ ಕೋಯಲ್‌ಪಾರಾ ಕೇದಾರನ ಬಳಿಗೆ ಕಳುಹಿಸಿಕೊಟ್ಟಿದ್ದೇನೆ — ಅವನು ಧಾನ್ಯ ಖರೀದಿಸಿ ಇಟ್ಟುಕೊಳ್ಳಲಿ ಅಂತ. ಈಗ ಧಾನ್ಯ ತುಂಬ ಅಗ್ಗ. ಅಗತ್ಯಬಿದ್ದಾಗ ಧಾನ್ಯ ಮಾರಿದರೆ, ಅದರಿಂದ ಹಣ ಬೇಕಾದರೂ ಬರಬಹುದು.'' ಜಮೀನು ಬೇಕಾದ ರೀತಿಯಲ್ಲಿ ಸಿಗಲಿಲ್ಲ ; ಹಾಗಾಗಿ ಖರೀದಿಮಾಡಲಾಗಲಿಲ್ಲ. ಆದರೆ ಸ್ವಲ್ಪ ಸಮಯದ ನಂತರ, ಖರೀದಿಸಿದ ಧಾನ್ಯವನ್ನು ಉಪಯೋಗಿಸುವ ಕಾಲಕ್ಕೆ ಅದರ ಬೆಲೆ ನಾಲ್ಕು ಪಟ್ಟು ಹೆಚ್ಚಾಗಿಬಿಟ್ಟಿತ್ತು.

ಜಯರಾಮಬಾಟಿಯಲ್ಲಿ ಹೊಸ ಮನೆ ಕಟ್ಟಿದ ಮೇಲೆ, ಗ್ರಾಮ ಪಂಚಾಯತು ಅದರ ಮೇಲೆ ಚೌಕೀದಾರನ ತೆರಿಗೆಯನ್ನು ವಿಧಿಸಿತು. ಮೊದಲ ವರ್ಷ ಶ್ರೀಮಾತೆಯವರ ಅನುಪಸ್ಥಿತಿಯಲ್ಲಿ ಅಲ್ಲಿದ್ದ ಸೇವಕ, ಬ್ರಹ್ಮಚಾರಿ ಜ್ಞಾನಾನಂದ ವಾರ್ಷಿಕ ತೆರಿಗೆ ನಾಲ್ಕು ರೂಪಾಯಿ ಕೊಟ್ಟಿದ್ದ. ಮುಂದಿನ ವರ್ಷ ಶ್ರೀಮಾತೆ ಜಯರಾಮಬಾಟಿಯಲ್ಲಿದ್ದರು. ತೆರಿಗೆ ಸಂಗ್ರಹ ಮಾಡಲು ಬಂದಾಗ ತೆರಿಗೆಯನ್ನು ರದ್ದುಗೊಳಿಸಲು ಪ್ರಯತ್ನಿಸುವಂತೆ

ಅಲ್ಲಿದ್ದ ಸೇವಕನಿಗೆ[೧] ಶ್ರೀಮಾತೆ ಆದೇಶಿಸಿದರು. ಅವರು ಹೇಳಿದರು, ''ಈಗಂತೂ ನಾನು ಇಲ್ಲಿದ್ದೇನೆ. ತೆರಿಗೆಯ ಹಣವನ್ನು ಕೊಟ್ಟುಬಿಡುತ್ತಿದ್ದೆ. ಆದರೆ ಮುಂದೆ ಇಲ್ಲಿ ಸಾಧು ಬ್ರಹ್ಮಚಾರಿಗಳು ವಾಸವಾಗಿರುತ್ತಾರೆ; ಅವರಿಗೆ ಬಹುಶಃ ಭಿಕ್ಷೆ ಬೇಡಿ ಊಟ ಮಾಡಬೇಕಾಗಿ ಬಂದೀತು. ಅವರಿಗೆ ಎಲ್ಲಿಂದ ಹಣ ಸಿಗುತ್ತದೆ? ತೆರಿಗೆ ರದ್ದು ಮಾಡಲಾಗುತ್ತದೋ ಪ್ರಯತ್ನ ಮಾಡಿನೋಡು.'' ಅದಕ್ಕಾಗಿ ಶ್ರೀಮಾತೆ ತುಂಬ ಒತ್ತಾಯದಿಂದ ತಮ್ಮ ಹೆಸರಲ್ಲೇ ಒಂದು ಪತ್ರ[೨] ಬರೆದು, ತಮ್ಮ ಶಿಷ್ಯನನ್ನು ಯೂನಿಯನ್ ವಾರ್ಡ್‌ನ ಅಧ್ಯಕ್ಷರ ಬಳಿಗೆ ಕಳುಹಿಸಿದರು. ಆ ವರ್ಷ ತೆರಿಗೆ ಕೊಡಬೇಕಾಗಿ ಬಂದಿತ್ತಾದರೂ, ಮುಂದಿನ ವರ್ಷಕ್ಕೆ ತೆರಿಗೆ ವಿನಾಯತಿಯ ಭರವಸೆ ಲಭಿಸಿತು. ಮುಂದಿನ ಬಾರಿ ಶ್ರೀಮಾತೆ ಸರಿಯಾದ ಸಮಯದಲ್ಲಿ ತಮ್ಮ ಒಬ್ಬ ಶಿಷ್ಯನನ್ನು ಕಳುಹಿಸಿ ಎಲ್ಲವನ್ನು ಅನ್ವೇಷಣೆ ಮಾಡಿಸಿದರು. ಹೀಗೆ ತೆರಿಗೆ ರದ್ದುಗೊಂಡಿತು

ಜಯರಾಮಬಾಟಿಯಲ್ಲಿ ಅಂಚೆನೌಕರ ಮನಿ ಆರ್ಡರನ್ನು ತಂದುಕೊಡುತ್ತಿದ್ದ. ಶ್ರೀಮಾತೆ ಹೆಬ್ಬೆಟ್ಟು ಸಹಿ ಹಾಕುತ್ತಿದ್ದರು. ಬೇರೆ ಯಾರಾದರೂ ಬರೆದು ಕೊಡುತ್ತಿದ್ದರು — 'ಶ್ರೀಶಾರದಾ ದೇವಿಯವರ ಹೆಬ್ಬೆಟ್ಟು ಗುರುತು....' ಅಂಚೆ ನೌಕರ ಹಣವನ್ನು ಎಣಿಸಿ ಕೊಡುತ್ತಿದ್ದ. ಶ್ರೀಮಾತೆ ಹಣವನ್ನು ಮುಷ್ಟಿಯೊಳಗಿಟ್ಟುಕೊಂಡು ತಮ್ಮ ಕೋಣೆಗೆ ತೆಗೆದುಕೊಂಡು ಹೋಗಿ ಅಲ್ಲಿ ಇಡುತ್ತಿದ್ದರು. ನೌಕರನಿಗೆ ಅವರು ಪ್ರಸಾದ ಕೊಟ್ಟು , ಮೃದುವಾದ ಮಾತುಗಳನ್ನಾಡಿ ಕಳುಹಿಸಿಕೊಡುತ್ತಿದ್ದರು. ಎಷ್ಟು ಹಣ ಬಂತು, ಯಾರು ಕಳುಹಿಸಿಕೊಟ್ಟಿದ್ದಾರೆ ಎಂದು ಯಾರಿಗೂ ತಿಳಿಯುತ್ತಿರಲಿಲ್ಲ. ಅನಂತರ ಸಮಯ ಸಿಕ್ಕಿದಾಗ ಯಾರಿಂದಲಾದರೂ ಶ್ರೀಮಾತೆ ಪತ್ರ ಬರೆಸಿ, ಹಣ ತಲುಪಿದ ವಿಷಯವಾಗಿ ಬರೆದು, ತಮ್ಮ ಆಶೀರ್ವಾದವನ್ನು ತಿಳಿಸುತ್ತಿದ್ದರು. ಸೇವಕರು ಯಾರಾದರೂ ಇದ್ದರೂ ಕೂಡ, ಮನಿ ಆರ್ಡರ್ ಸ್ವೀಕಾರ ಮಾಡಿದ ನಂತರ ಹಣವನ್ನು ಎಣಿಸುವುದು, ಕೈಯಲ್ಲಿಟ್ಟುಕೊಂಡು ಸದ್ದು ಮಾಡುವುದು ಇವನ್ನೆಲ್ಲ ಶ್ರೀಮಾತೆ ನಿಷೇಧಿಸುತ್ತ ಹೇಳುತ್ತಿದ್ದರು, ''ಮಗೂ, ಹಣದ ಸದ್ದು ಕೇಳಿದರೂ ಕೂಡ ಬಡವನ ಮನಸ್ಸಿನಲ್ಲಿ ಆಸೆ ಹುಟ್ಟುವುದು. ಹಣ ಎಂಥ ವಸ್ತುವೆಂದರೆ, ಅದನ್ನು ನೋಡಿದರೆ ಸಾಕು, ಮರದ ಬೊಂಬೆ ಕೂಡ 'ಹಾಂ' ಎನ್ನುವುದು.''

ಸ್ವಾಮೀಜಿ ರಾಮಕೃಷ್ಣ ಮಿಷನ್ ಆರಂಭಿಸಿ ಸಂನ್ಯಾಸಿಗಳು ಸೇವಾಕಾರ್ಯಗಳನ್ನು ಆರಂಭಿಸಿದ್ದು ಶ್ರೀರಾಮಕೃಷ್ಣರ ಆದರ್ಶಗಳಿಗೆ ಅನುಗುಣವಾಗಿದೆಯೇ ಇಲ್ಲವೇ ಎಂಬ ಸಂಶಯ ಆರಂಭದಲ್ಲಿ ಹಲವರಿಗೆ ಎದ್ದಿತ್ತು. ಕೆಲವರಂತೂ ಶ್ರೀಮಾತೆಯವರಲ್ಲಿ ಈ ಸಂಬಂಧವಾಗಿ ಹಲವು ಬಾರಿ ಪ್ರಶ್ನಿಸಿದ್ದರು. ಶ್ರೀಮಾತೆ ಯಾವಾಗಲೋ ಒಮ್ಮೆ ಹೇಳಿದ್ದರು: ''ಇದೆಲ್ಲವೂ ಶ್ರೀರಾಮಕೃಷ್ಣರ ಕೆಲಸವೇ.'' ಅಂತೆಯೇ ಇನ್ನೊಂದು ಬಾರಿ ಹೇಳಿದ್ದರು: ''ಮಗೂ, ನೀವೆಲ್ಲ ಕೆಲಸ ಮಾಡಿ ಊಟ ಮಾಡಬೇಕು. ಕೆಲಸ ಮಾಡದಿದ್ದರೆ ಯಾರು ಊಟ ಹಾಕುತ್ತಾರೆ? ಬಿಸಿಲಲ್ಲಿ ಭಿಕ್ಷೆಗಾಗಿ ಅಲೆದಾಡುತ್ತ ತಲೆತಿರುಗಬಹುದು. ಚೆನ್ನಾಗಿ ಊಟ ಮಾಡಲು ಆಹಾರ ಸಿಗದೆ ಹೋದರೆ ದೇಹ ಅನಾರೋಗ್ಯಕ್ಕೆ ಈಡಾಗುವುದು. ನೀವು ಆ ಮಾತುಗಳನ್ನೆಲ್ಲ ಕೇಳಬೇಡಿ, ಕೆಲಸ ಮಾಡಿ, ಚೆನ್ನಾಗಿ ಊಟ ಮಾಡಿ, ಭಗವಂತನ ಸಾಧನೆ, ಭಜನೆ ಮಾಡಿ.''

ಶ್ರೀಮಾತೆ ಜಪಧ್ಯಾನ ಮಾಡಲು ಎಷ್ಟೊಂದು ಪ್ರೋತ್ಸಾಹ ನೀಡುತ್ತಿದ್ದರೋ, ಅದೇ ರೀತಿ ಮಿತಿಮೀರಿ ಜಪ, ಧ್ಯಾನ ಮಾಡಿ

---

೧ ಸ್ವತಃ ಲೇಖಕರು.

೨ ಈ ಸಂಬಂಧವಾಗಿ ಪ್ರಬೋಧಚಂದ್ರ ಚಟ್ಟೋಪಾಧ್ಯಾಯನಿಗೆ ಶ್ರೀಮಾತೆ ಬರೆದ ಒಂದು ಪತ್ರ ಹೀಗಿದೆ:

ಜಯರಾಮಬಾಟಿ

೧೩೨೪(ಬಂಗಾಳಿ ವರ್ಷ), ಚೈತ್ರ ೫ನೇ ದಿನ

ಶ್ರೀ ಶ್ರೀ ಗುರುದೇವ

ಆಶೀರ್ವಾದಗಳ ನಂತರ ಸಮಾಚಾರವೇನೆಂದರೆ,

ಮಗೂ, ನಿನಗೆ ಬಹುಶಃ ಈ ವಿಷಯ ತಿಳಿದಿರಬಹುದು — ನಮ್ಮ ಮನೆಗೋಸ್ಕರ ೪ (ನಾಲ್ಕು) ರೂಪಾಯಿ ಚೌಕೀದಾರಿ ಟ್ಯಾಕ್ಸ್ ವಿಧಿಸಲ್ಪಟ್ಟಿದೆ. ಇದು ಅತ್ಯಂತ ಹೆಚ್ಚಿನದು ಎಂದು ನಮಗನ್ನಿಸಿದ್ದರಿಂದ, ನಿನ್ನೆ ಒಂದು ಪತ್ರದೊಂದಿಗೆ ಶ್ರೀಮಾನ್ ಗೋಪೇಶ್‌ನನ್ನು (ಈ ಸ್ಮೃತಿಚಿತ್ರದ ಲೇಖಕರು) ಶ್ರೀಯುತ ಶಂಭುಬಾಬುವಿನ ಬಳಿಗೆ ಕಳುಹಿಸಿದ್ದೆ. ಪತ್ರದಲ್ಲಿ ಬರೆದಿದ್ದೆ, ಈ ಮನೆಯನ್ನು ದೇವರ ಆಸ್ತಿಯೆಂದು ಪರಿಗಣಿಸಿದ್ದರಿಂದ ಅದರೊಂದಿಗೆ ನನಗೆ ವಿಶೇಷ ಸಂಬಂಧವೇನೂ ಇಲ್ಲ. ನಾನು ಇಲ್ಲಿ ಸ್ಥಿರವಾಗಿ ವಾಸವಾಗಿರುವ ವ್ಯಕ್ತಿಯಲ್ಲ. ಮನೆಗಾದರೂ ಸ್ವಲ್ಪವೂ ವರಮಾನವಿಲ್ಲ. ಇಲ್ಲಿ ವಾಸ ಮಾಡುವ ಸಂನ್ಯಾಸಿ, ಬ್ರಹ್ಮಚಾರಿ, ಸೇವಕರೆಲ್ಲ ಇಲ್ಲಿದ್ದುಕೊಂಡು ತಮ್ಮ ಜೀವನ ನಿರ್ವಹಣೆ ಮಾಡುವುದು ಅಸಾಧ್ಯವಾದೀತು. ಈ ಪರಿಸ್ಥಿತಿಯಲ್ಲಿ ಈ ರೀತಿಯ ದೊಡ್ಡ ಹೊರೆಯನ್ನು ಶಾಶ್ವತವಾಗಿ ಭರಿಸುವುದು ನಮಗೆ ಅಸಾಧ್ಯ. ನಮ್ಮ ಭಕ್ತರುಗಳು ಯಾವಾಗ ಏನನ್ನಾದರೂ ನೀಡುತ್ತಾರೋ, ಅದರಿಂದ ಭಗವಂತನ ಇಚ್ಛೆಯಂತೆ ಯಾವುದೋ ರೀತಿಯಲ್ಲಿ ನಮ್ಮ ಜೀವನ ನಡೆಯುತ್ತ ಹೋಗುವುದಷ್ಟೆ. ಆದರೆ ನಮಗೆ ಯಾವುದೇ ರೀತಿಯ ವರಮಾನವಿಲ್ಲ — ಇತ್ಯಾದಿ ಬರೆದಿದ್ದೆ.

ಶಂಭುಬಾಬು ಇದಕ್ಕೆ ಉತ್ತರವಾಗಿ ಹೇಳಿದ್ದೇನೆಂದರೆ, ಈ ವಿಷಯಕ್ಕೆ ಸಂಬಂಧಿಸಿದಂತೆ ಅವನು ನಿನಗೆ ಹೇಳಿದ್ದಾನೆ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಒಂದು ದರಖಾಸ್ತು ದೂರು ಸಲ್ಲಿಸುವುದಕ್ಕಾಗಿ. ಈ ಸಂಬಂಧವಾಗಿ ನೀನು ಏನಾದರೂ ಮಾಡಿದ್ದೀಯೋ ಇಲ್ಲವೋ ಗೊತ್ತಿಲ್ಲ. ಈ ಪತ್ರವನ್ನೋದಿ ನಿನಗೆ ಇದು ಮನವರಿಕೆಯಾಗುವುದು ಎಂದು ಭಾವಿಸಿದ್ದೇನೆ. ಅದರಿಂದ ನೀನು ಅದನ್ನು ನೆನಪಿನಲ್ಲಿಟ್ಟುಕೊಂಡು ತಕ್ಕುದಾದದ್ದನ್ನು ಮಾಡಬೇಕು. ಶಂಭು ರಾಯ್ ಹೇಳಿದ್ದ, ದೂರಿನಲ್ಲಿ ಉಲ್ಲೇಖವಿರಬೇಕು — ಇದು ಒಂದು Religious Institution — ಇದಕ್ಕೆ ಸ್ವಲ್ಪವೂ ವರಮಾನವಿಲ್ಲ ಎಂದು. ಸಹೃದಯರಾದ ಜನರು ನೀಡಿದ ಸಹಾಯದಿಂದ ಅದು ನಡೆದುಕೊಂಡು ಹೋಗುತ್ತಿದೆ. ಇಲ್ಲಿ ಎಲ್ಲರ ಕುಶಲವಾರ್ತೆಯೊಂದಿಗೆ ನನ್ನ ಆಶೀರ್ವಾದವನ್ನು ತಿಳಿಸುತ್ತಿದ್ದೇನೆ.

ಆಶೀರ್ವಾದಗಳೊಂದಿಗೆ, ನಿನ್ನ ಮಾತಾ ಠಾಕೂರಾಣಿ

('ಉದ್ಬೋಧನ', ೪೦ನೇ ವರ್ಷ, ಪು.೨೨೮)

ಪತ್ರದ ಇನ್ನೊಂದು ಪುಟದಲ್ಲಿ ಸ್ವಾಮಿ ಶಾರದೇಶಾನಂದರು ಶ್ರೀಮಾತೆಯವರ ಸೂಚನೆಯಂತೆ ಪ್ರಬೋಧ ಬಾಬುವಿಗೆ ಬರೆದಿದ್ದರು: ''ಪತ್ರವನ್ನು ಬರೆದು ಶ್ರೀಮಾತೆಗೆ ಓದಿ ಹೇಳುವಾಗ (ಶ್ರೀಮಾತೆ) ಹೇಳಿದರು — ಏನು ಮಾಡಿದರೆ ಟ್ಯಾಕ್ಸನ್ನು ರದ್ದುಗೊಳಿಸಲಾಗುವುದೋ ಅದನ್ನು ನೀನು ಮಾಡಲೇಬೇಕಾಗುವುದು.''

('ಉದ್ಬೋಧನ', ೮೩ ನೇ ವರ್ಷ,ಪು.೫೯೧) –ಸಂ

ತಲೆ ಬಿಸಿಯಾಗದಂತೆ ಕೂಡ ಎಚ್ಚರಿಕೆ ವಹಿಸಿ, ಎಷ್ಟು ಬೇಕೋ ಅಷ್ಟು ಮಾತ್ರ ಸಾಧನೆ ಮಾಡುವಂತೆ ಜಾಗರೂಕತೆ ವಹಿಸಲೂ ಹೇಳುತ್ತಿದ್ದರು. ಆಧ್ಯಾತ್ಮಿಕವಾಗಿ ಕಠೋರ ಸಾಧನೆ ಮಾಡುವುದನ್ನು ಅವರು ನಿಷೇಧಿಸಿದ್ದರು. ಅದೇ ರೀತಿ ಆಹಾರ, ಉಡುಗೆ ತೊಡುಗೆಗಳಲ್ಲೂ ಸಂಯಮವಿಲ್ಲದೆ ಸೊಗಸು ಮಾಡುವುದನ್ನು ಅವರು ಇಷ್ಟಪಡುತ್ತಿರಲಿಲ್ಲ. ಶ್ರೀರಾಮಕೃಷ್ಣರ ದೇಹತ್ಯಾಗವಾದ ನಂತರ ಅವರ ಸಂನ್ಯಾಸೀ ಶಿಷ್ಯಂದಿರು ಊಟ, ವಸತಿಗಳಿಗಾಗಿ ಪಡಬೇಕಾಗಿ ಬಂದ ಕಷ್ಟ, ಬಡತನ, ಅಭಾವ ಇವನ್ನೆಲ್ಲ ಕಂಡು ಶ್ರೀಮಾತೆ ಅತ್ಯಂತ ಸಂಕಟಪಟ್ಟರು.

ಬೋಧಗಯೆಯ ಬೌದ್ಧಮಠದ ಸಂಪತ್ತು, ಸಾಧುಗಳ ಸುಖ, ಅನುಕೂಲತೆಗಳನ್ನೆಲ್ಲ ಕಂಡು, ತಮ್ಮ ಭಿಕಾರಿ ಪರಿವ್ರಾಜಕ ಶಿಷ್ಯಂದಿರ ಚಿತ್ರ ಶ್ರೀಮಾತೆಯವರ ಕಣ್ಣ ಮುಂದೆ ಬಂದು, ಅವರು ಅಳುತ್ತ ದುಃಖಿಸತೊಡಗಿದರು. ಶ್ರೀರಾಮಕೃಷ್ಣರಲ್ಲಿ ಅವರ ಶಿಷ್ಯಂದಿರಿಗಾಗಿ ಶ್ರೀಮಾತೆ ಅತ್ತು ಪ್ರಾರ್ಥಿಸಿದರು. ಪೂಜನೀಯ ಯೋಗಿನ್ ಮಾ ಒಂದು ದಿನ ಇದನ್ನು ಕುರಿತು ನನಗೆ ಹೇಳಿದರು: ''(ಮಠ-ಆಶ್ರಮ ಇತ್ಯಾದಿ) ಈಗ ಏನನ್ನು ನೋಡುತ್ತಿದ್ದೀವೋ ಅದೆಲ್ಲವೂ ಅವರ (ಶ್ರೀಮಾತೆಯವರ) ಕೃಪೆಯಿಂದಾಗಿಯೇ ಆದದ್ದು. ಎಲ್ಲಿ ಏನು ನೋಡಿದರೂ ಸರಿ — ಅದು ಕಲ್ಲಿನ ವಿಗ್ರಹವಾಗಿರಲಿ, ದೇವತೆಯ ಮೂರ್ತಿಯಾಗಿರಲಿ, ಅವರು ಅಳುತ್ತ, 'ಪ್ರಭು! ನನ್ನ ಮಕ್ಕಳಿಗೆ ಮಲಗಿಕೊಳ್ಳುವುದಕ್ಕಾಗಿ ಒಂದು ಜಾಗ ದೊರಕಿಸಿಕೊಡು, ಎರಡು ಹೊತ್ತು ಊಟ ಮಾಡುವುದಕ್ಕಾಗಿ ಒಂದು ವ್ಯವಸ್ಥೆ ಮಾಡು' ಅಂತ ಪ್ರಾರ್ಥಿಸುತ್ತಿದ್ದರು, ಶ್ರೀಮಾತೆಯವರ ಈ ಹಂಬಲ ಪೂರೈಸಿತು.''

ಜಯರಾಮಬಾಟಿಯಲ್ಲಿ ಶ್ರೀಮಾತೆ ಅನೇಕ ಮಂದಿ ಶಿಷ್ಯಂದಿರಿಗೆ ತಮ್ಮ ಕೈಯಿಂದಲೇ ಕಾವಿ ಬಟ್ಟೆ ನೀಡಿ ಸಂನ್ಯಾಸದೀಕ್ಷೆ ನೀಡಿದ್ದನ್ನು ಕಂಡು ಅನೇಕ ಮಂದಿ ಹೆಣ್ಣುಮಕ್ಕಳ ಹೃದಯ ಆತಂಕ, ಶೋಕಗಳಿಂದ ವಿಹ್ವಲಗೊಳ್ಳುತ್ತಿತ್ತು. ಶ್ರೀಮಾತೆಯವರ ಹೃದಯ ಅರಳಿ ಅವರು ನಗುತ್ತಿದ್ದರು — ತಮ್ಮ ಒಬ್ಬ ಶಿಷ್ಯ ಸಂಸಾರದ ಭೀಕರ ಜ್ವಾಲೆಯಿಂದ ಪಾರಾದ ಎಂದು ಭಾವಿಸಿ. ಶ್ರೀಮಾತೆ ತಮ್ಮ ಸಂಸಾರಿ ಶಿಷ್ಯಂದಿರನ್ನು ಹಣಗಳಿಕೆ, ವಿವಾಹ ಹಾಗೂ ಗೃಹಸ್ಥ ಜೀವನ ನಿರ್ವಹಣೆಗಳ ವಿಷಯದಲ್ಲಿ ನಿರುತ್ಸಾಹಗೊಳಿಸದಿದ್ದರೂ, ತಮ್ಮ ಸಂನ್ಯಾಸಿ ಶಿಷ್ಯಂದಿರಿಗೆ ತ್ಯಾಗ ಜೀವನದ ದಾರಿಯನ್ನು ಅತ್ಯಂತ ಉತ್ಸಾಹದಿಂದ ತೋರಿಸಿಕೊಡುತ್ತಿದ್ದರು.

ಶ್ರೀಮಾತೆಯವರ ಶಿಷ್ಯರೊಬ್ಬರು ಹೀಗೆ ಬರೆದಿದ್ದಾರೆ: ''ಅವರು (ಶ್ರೀಮಾತೆಯವರ ಒಬ್ಬ ಶಿಷ್ಯ) ವಿವಾಹವಾಗದೆ ತ್ಯಾಗ ಪಥದಲ್ಲೇ ಜೀವನವನ್ನು ಕಳೆಯಬಯಸಿದ್ದರು. ಆದರೆ ಅವರ ತಂದೆ ಇದರ ತೀವ್ರ ವಿರೋಧವಾಗಿದ್ದರು. ನಾನಾ ಉಪಾಯಗಳಿಂದ ಅವನನ್ನು ಸಂಸಾರದಲ್ಲಿ ಮುಳುಗಿಸಲು ಪ್ರಯತ್ನಿಸಿದ್ದರು. ಮಗನ ಕರುಣಾಪೂರ್ಣವಾದ ಬಯಕೆಯನ್ನು ಕೇಳಿ ಶ್ರೀಮಾತೆಯವರ ಹೃದಯ ಕರಗಿತು. ಕಣ್ಣೀರುತುಂಬಿ ಅವರು ಹೇಳಿದರು, 'ನೋಡು, ನೋಡು; ತಂದೆಯಾಗಿ ಅವನು ಮಕ್ಕಳ ತಲೆಯ ಮೇಲೆ ಕೊಡಲಿಯೇಟು ಹಾಕಲು ನೋಡುತ್ತಿದ್ದಾನೆ, ಮಕ್ಕಳ ಸರ್ವನಾಶ ಮಾಡಬಯಸುತ್ತಿದ್ದಾನೆ. ಮಗ ದುಃಖದಿಂದ ಪತ್ರ ಬರೆದಿದ್ದಾನೆ.' ಶ್ರೀಮಾತೆ ತಮ್ಮ ಪುತ್ರನಿಗೆ ಭರವಸೆ ನೀಡಿ, ಆಶೀರ್ವಾದ ನೀಡುತ್ತ ಉತ್ತರ ಬರೆದರು. ಅವರ ಕೃಪೆಯಿಂದ ಅವನ ಆಪತ್ತುಗಳೆಲ್ಲ ನಿವಾರಣೆಗೊಂಡವು. ನಿಧಾನವಾಗಿ ಅವನ ತಂದೆಯ ಮನಸ್ಥಿತಿ ಬದಲಾಯಿತು. ತನ್ನ ಮಗನ ಮೇಲೆ ಅವರಿಗೆ ಪ್ರೀತಿಯುಂಟಾಗಿ, ಧರ್ಮಪಥದಲ್ಲಿ ಅವನು ಮುನ್ನಡೆಯಲು ಸಹಾಯಕರಾದರು. ಮಗನೂ ಕೂಡ ತನ್ನ ಪ್ರಾಣವನ್ನೇ ಪಣವಾಗಿಟ್ಟುಕೊಂಡು, ತನ್ನ ವೃದ್ಧ ತಂದೆಯ ಸೇವೆ ಮಾಡುತ್ತ ಅವರ ಕೊನೆಗಾಲದಲ್ಲಿ ಅವರ ಆಂತರಿಕ ಪ್ರೀತಿ, ಆಶೀರ್ವಾದಗಳನ್ನು ಪಡೆದ.''

ಒಂದು ಸಲ ಒಬ್ಬ ವೃದ್ಧ ಬ್ರಾಹ್ಮಣ ಶ್ರೀಮಾತೆಗೆ ಪತ್ರ ಬರೆದಿದ್ದ: ಅವನು ತನ್ನ ಮಗನನ್ನು ಸಾಕಿ ಸಲಹಿ, ವಿದ್ಯಾಭ್ಯಾಸ ನೀಡಿ ದೊಡ್ಡವನನ್ನಾಗಿ ಮಾಡಿದ್ದ, ಮುದಿ ವಯಸ್ಸಿನಲ್ಲಿ ಅವನು ತನಗೆ ಅನ್ನಾಹಾರ ನೀಡಿ ನೋಡುಕೊಳ್ಳುತ್ತಾನೆ ಎಂದು ಭಾವಿಸಿದ್ದ. ಆದರೆ ಅವನು ಕೆಲವು ದಿನಗಳ ಮುನ್ನ ಶ್ರೀಮಾತೆಯವರಿಂದ ಮಂತ್ರದೀಕ್ಷೆ ಪಡೆದ, ಈಗ ಅವನು ತಾಯಿತಂದೆಯರನ್ನು ಬಿಟ್ಟು ಸಂನ್ಯಾಸಿಯಾಗಬೇಕೆಂದು ಒಂದು ಆಶ್ರಮಕ್ಕೆ ಹೋಗಿಬಿಟ್ಟಿದ್ದ. ಅವನ ತಾಯಿ ದುಃಖದಿಂದ ಹಾಸಿಗೆ ಹಿಡಿದಿದ್ದಳು. ತಾನೂ ವೃದ್ಧನಾಗಿದ್ದಾನೆ, ಬೇರೇನೂ ಇಲ್ಲ, ಅವನಿಗೆ ಬರೀ ಕತ್ತಲು ಮಾತ್ರ ಕಾಣಿಸುತ್ತಿದೆ. ಅವನು ಪತ್ರದಲ್ಲಿ ಅತ್ಯಂತ ಕರುಣೆಯ ಭಾಷೆಯಲ್ಲಿ ತನ್ನ ದುಃಖದ ಕಥೆಯನ್ನು ನಿವೇದಿಸಿಕೊಂಡಿದ್ದ. ತನ್ನ ಮಗನನ್ನು ಮರಳಿ ಪಡೆಯಲು ಪ್ರಾರ್ಥಿಸಿಕೊಂಡಿದ್ದ. ಪತ್ರವನ್ನು ಕೇಳಿ ತಿಳಿದ ಶ್ರೀಮಾತೆ ತುಂಬಾ ಖೇದಗೊಂಡು ಹೇಳತೊಡಗಿದರು: ''ಅಯ್ಯೋ, ಪಾಪ! ಆ ವೃದ್ಧ ಬ್ರಾಹ್ಮಣ ನನ್ನ ಮೇಲೆ ಅಷ್ಟೊಂದು ಶಾಪ ಹಾಕುತ್ತಾನೆ ಅಂತ ನನಗೆ ಗೊತ್ತಾಗಲಿಲ್ಲವಲ್ಲ! ಹಾಗೇ ಮಾಡಬೇಕಲ್ಲವೇ ಅವನು? ಎಷ್ಟೊಂದು ಕಷ್ಟಪಟ್ಟು, ಏನೆಲ್ಲ ನಿರೀಕ್ಷೆಗಳನ್ನಿಟ್ಟುಕೊಂಡು ಅವನು ಆ ಹುಡುಗನನ್ನು ಬೆಳೆಸಿದ್ದಾನೆ! ಈಗ ಅವನು ಇದ್ದಕ್ಕಿದಂತೆ ಓಡಿಹೋಗಿಬಿಟ್ಟ!'' ಆ ವೃದ್ಧ ಬ್ರಾಹ್ಮಣನಿಗೆ ಸಾಂತ್ವನವುಂಟಾಗುವಂತೆ ಪತ್ರ ಬರೆಸಿದರು ಶ್ರೀಮಾತೆ. ಈ ವಿಷಯದಲ್ಲಿ ತನಗೇನೂ ಗೊತ್ತಿರಲಿಲ್ಲವೆಂದು ಶ್ರೀಮಾತೆ ತಿಳಿಸಿದರು. ಹುಡುಗನಂತೂ ಅವರಿಗೆ ಏನೂ ಹೇಳಿರಲಿಲ್ಲ. ಅವನು ತನ್ನ ಇಚ್ಛೆಯಿಂದಲೇ ಸಾಧುವಾಗಿದ್ದ. ಶ್ರೀಮಾತೆಯಾದರೂ ಏನು ಮಾಡಿಯಾರು? ಇದರಲ್ಲಿ ಅವರದೇನೂ ಕೈವಾಡವಿರಲಿಲ್ಲ. ಭಗವಂತನನ್ನು ಕಾತರತೆಯಿಂದ ಪ್ರಾರ್ಥಿಸುವಂತೆ ಆ ವೃದ್ಧನಿಗೆ ಪತ್ರದಲ್ಲಿ ತಿಳಿಸಿದರು. ಭಗವಂತ ನಿಜವಾಗಿಯೂ ಅವರನ್ನು ರಕ್ಷಿಸುವನೆಂದೂ, ಆದ್ದರಿಂದ ಅವನು ಅನಗತ್ಯ ಚಿಂತೆಯನ್ನು ತ್ಯಜಿಸಬೇಕೆಂದೂ ತಿಳಿಸಿದರು. ಅನಂತರ ಶ್ರೀಮಾತೆ ಆ ಪತ್ರವನ್ನು ಬರೆದು ಕೊಟ್ಟವನಿಗೆ [೩] ಹೇಳಿದರು: ''ಮಗೂ! ಈ ಹುಚ್ಚುಹುಡುಗರು ಹೀಗೇಕೆ ಇದ್ದಕ್ಕಿದ್ದಂತೆ ಮಾಡುತ್ತಾರೆ? ತಂದೆ, ತಾಯಿಗೆ ಕಷ್ಟಕೊಟ್ಟು, ತಾನೂ ಕಷ್ಟ ಅನುಭವಿಸುತ್ತಾರೆ? ಸ್ವಲ್ಪಕಾಲ ಆಶ್ರಮಕ್ಕೆ ಬಂದು ಹೋಗುತ್ತಿರಬೇಕು, ಸ್ವಲ್ಪಕಾಲ ಸಾಧುಸಂಗ ಮಾಡುತ್ತಿರಬೇಕು. ಇವನ್ನೆಲ್ಲ ನೋಡುತ್ತ ತಾಯಿ, ತಂದೆಯರಿಗೆ ಎಲ್ಲವನ್ನೂ ಸಹಿಸುವುದು ಸಾಧ್ಯ

೩. ಸ್ವತಃ ಲೇಖಕರು. *(-ಸಂ)*

ವಾದೀತು. ಹುಡುಗನ ಮನಸ್ಸು ಯಾವ ರೀತಿ ಇದೆ ಎಂದು ಅವರಿಗೆ ಅರ್ಥವಾದೀತು. ಆಗ ಬಿಟ್ಟು ಬಂದರೆ ಅವರಿಗೆ ಇಷ್ಟೊಂದು ಸಂಕಟವಾಗದು.'' ಶ್ರೀಮಾತೆಯವರ ಶಿಷ್ಯ ಆಗ ಲಂತೂ ಮನೆಗೆ ಮರಳಬೇಕಾಗಿ ಬಂತು; ಆದರೆ ಸ್ವಲ್ಪ ಹೆತ್ತವರ ಬಳಿ ಇದ್ದು, ಅವರ ಮನಸ್ಸಿಗೆ ನಿಧಾನವಾಗಿ ಮನವರಿಕೆ ಮಾಡಿ ಕೊಟ್ಟು , ಅನಂತರ ಸಂಸಾರತ್ಯಾಗ ಮಾಡಿದ. ಅವರು ಬದುಕಿದ್ದಷ್ಟು ಕಾಲವೂ ಪರಸ್ಪರ ಸುದ್ದಿ ತಿಳಿದುಕೊಳ್ಳುವುದು, ಭೇಟಿಯಾಗುವುದು ಹಾಗೂ ಪ್ರೀತಿ ವಾತ್ಸಲ್ಯಗಳೊಂದಿಗೆ ಸಂಪರ್ಕ ದಿಂದಿರುವುದು ನಡೆಯುತ್ತಿತ್ತು.

ಸಂಸಾರತ್ಯಾಗ ಮಾಡಿ ಬಂದ ಶಿಷ್ಯಂದಿರ ಮೇಲೆ ಶ್ರೀಮಾತೆಗೆ ಸಹಜವಾಗಿಯೇ ಒಂದು ರೀತಿಯ ಪ್ರೀತಿ ಇರುತ್ತಿತ್ತು. ಅವರ ಚಿಕ್ಕಪ್ಪನ ಮಗಳ ಮಗ ಬಾಂಕು (ಬಂಕಿಮ) ಸಣ್ಣ ವಯಸ್ಸಿನಲ್ಲೇ ಸಂನ್ಯಾಸಿಯಾಗಿ ಮನೆಬಿಟ್ಟು ಹೋಗಿದ್ದ. ಅದನ್ನು ಕೇಳಿದ ಶ್ರೀಮಾತೆ, ''ಅವನು ಸಂನ್ಯಾಸಿಯಾಗಿ ಒಳ್ಳೆಯ ಕೆಲಸ ಮಾಡಿದ! ಈ ಮೂಳೆಮಾಂಸದ ಗೂಡಿನಲ್ಲಿ ಏನು ತಾನೇ ಇದೆ? ಇದೋ ನೋಡು — ವಾತದಿಂದ ಸತ್ತೇ ಹೋಗುತ್ತಿದ್ದೇನೆ! ಈ ದೇಹದಲ್ಲಾದರೂ ಏನಿದೆ? ಯಾತಕ್ಕಾಗಿ ಇಷ್ಟೊಂದು ಮಾಯೆ? ಎರಡು ದಿನದಲ್ಲೇ ಇದು ಮುಗಿದು ನಾಲ್ಕು ಹಿಡಿ ಬೂದಿಯಾಗುವುದು! ಈ ನಾಲ್ಕು ಹಿಡಿ ಬೂದಿಯಂತೂ ಉಳಿಯದು! ಬಾಂಕು ಸಾಧುವಾದ; ಭಗವಂತನ ಕಡೆಗೆ ಹೋದ — ಒಳ್ಳೆಯ ಕೆಲಸ ಮಾಡಿದ, ಒಳ್ಳೆಯ ಕೆಲಸ ಮಾಡಿದ'' ಎಂದರು.

ಶ್ರೀಮಾತೆಯವರಿಗೆ ಸಂನ್ಯಾಸೀ ಶಿಷ್ಯರ ಮೇಲಿದ್ದ ಪ್ರೀತಿಗೆ ಸಂಬಂಧಪಟ್ಟಂತೆ ಇನ್ನೊಂದು ಘಟನೆ ನೆನಪಿಗೆ ಬರುತ್ತಿದೆ. ಒಂದು ದಿನ ಸಾಯಂಕಾಲದ ಹೊತ್ತು ಒಬ್ಬ ಶಿಷ್ಯ[೪] ಶ್ರೀಮಾತೆಯವರ ಮುಂದೆ ಪತ್ರಗಳನ್ನು ಓದಿ ಹೇಳುತ್ತಿದ್ದ. ಶ್ರೀಮಾತೆ ನೆಲದಲ್ಲಿ ಆಸನದ ಮೇಲೆ ಕಾಲು ಮಡಚಿ ಕುಳಿತಿದ್ದರು. ಮುಂಭಾಗದಲ್ಲಿ ಲಾಟೀನು ಉರಿಯುತ್ತಿತ್ತು. ಅವರ ಶಿಷ್ಯ ಶ್ರೀಮಾತೆಯವರ ಪಕ್ಕದಲ್ಲಿ ಕುಳಿತು ತಲೆತಗ್ಗಿಸಿ ಪತ್ರ ಓದುತ್ತಿದ್ದ. ಇದ್ದಕ್ಕಿದ್ದಂತೆ ಅವನ ಕಣ್ಣಿಗೆ ಬಿತ್ತು — ಒಂದು ದೊಡ್ಡ ಚೇಳು ಶ್ರೀಮಾತೆಯವರ ಕಡೆಗೆ ಮುನ್ನುಗ್ಗುತ್ತಿದೆ! ಅದನ್ನು ನೋಡುತ್ತಿದ್ದಂತೆ ಶಿಷ್ಯನಿಗೆ ಅನ್ನಿಸಿತು, ಅದು ಶ್ರೀಮಾತೆಯವರನ್ನು ಬಂದು ಕಡಿಯಲಾರದು ತಾನೆ! ಕೂಡಲೇ ಅವನು ಅದನ್ನು ಕಾಲಿನಿಂದ ಹೊಸಕಿ ಹಾಕಿದ. ಬೆತ್ತ ಅಥವಾ ಕೋಲನ್ನು ತರಲು ಅವನಿಗೆ ಸಮಯಾವಕಾಶವಿರಲಿಲ್ಲ. ಶ್ರೀಮಾತೆ ಸತ್ತು ಬಿದ್ದ ಆ ಚೇಳಿನತ್ತ ಕರುಣೆಯಿಂದ ಕೂಡಿದ ದೃಷ್ಟಿಯಿಂದ ನೋಡುತ್ತ ನಿಧಾನವಾಗಿ ಹೇಳಿದರು: ''ಸಾಧುವಿನ ಕಾಲಿನಿಂದ ಒದೆ ತಿಂದು ಅದು ಪ್ರಾಣ ಬಿಟ್ಟಿತು.'' ಅದರ ಜೀವಕ್ಕೆ ಸದ್ಗತಿ ದೊರಕಿತೋ ಎಂಬಂತೆ ಶ್ರೀಮಾತೆ ಆ ಮಾತನ್ನು ಆಡಿದ್ದರು.

ಶ್ರೀಮಾತೆಯವರ ಸಂನ್ಯಾಸಿ ಶಿಷ್ಯರು ಅವರ ಇಚ್ಛೆಗೆ ವಿರುದ್ಧವಾಗಿ ಏನನ್ನೂ ಹೇಳುತ್ತಿರಲಿಲ್ಲ. ಆದರೂ ಅವರ ಪಾದಕಮಲಗಳಲ್ಲಿ ಅತ್ಯಂತ ವ್ಯಾಕುಲತೆಯಿಂದ ತಮ್ಮ ಬಯಕೆ, ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು. ಶ್ರೀಮಾತೆ ಕೂಡ ಅವುಗಳನ್ನು ತಕ್ಕ ಸಮಯದಲ್ಲಿ ಈಡೇರಿಸುತ್ತಿದ್ದರು. ಶ್ರೀಮಾತೆಯವರ ಶಿಷ್ಯರು ಎಷ್ಟೊಂದು ಮುಗ್ಧರಾಗಿರುತ್ತಿದ್ದರೆಂದರೆ, ಯಾವುದೇ ಸಂಕೋಚವಿಲ್ಲದೆ ಅವರು ತಮ್ಮ ಒಳಗಿನ ಬಯಕೆಗಳನ್ನು ಶ್ರೀಮಾತೆಯವರ ಮುಂದೆ ಹೇಳಿಬಿಡುತ್ತಿದ್ದರು. ಶ್ರೀಮಾತೆ ನಕ್ಕುಬಿಡುತ್ತಿದ್ದರು. ಕೆಲವೊಮ್ಮೆ ಅವರು ಅದನ್ನು ಕೇಳಿಸಿಕೊಳ್ಳುತ್ತಿದ್ದರು, ಕೆಲವೊಮ್ಮೆ ಅದನ್ನು ಕಿವಿಗೆ ಹಾಕಿ ಕೊಳ್ಳದೆ ಅನ್ಯಮನಸ್ಕರಾಗಿದ್ದಂತೆ ಕಂಡುಬರುತ್ತಿದ್ದರು. ಪೂಜನೀಯ ಕಪಿಲ ಮಹಾರಾಜರು ಶ್ರೀಮಾತೆಯವರ ವಿಶೇಷ ಪ್ರೀತಿಗೆ ಪಾತ್ರರಾಗಿದ್ದರು. ಬಹುಕಾಲ ಅವರು 'ಉದ್ಬೋಧನ' ದಲ್ಲಿ ಶ್ರೀಮಾತೆಯವರ ಪದತಲವನ್ನು ಆಶ್ರಯಿಸಿ ವಾಸವಾಗಿದ್ದರು. ಒಂದು ಸಲ ಶ್ರೀಮಾತೆ ಜಯರಾಮಬಾಟಿಯಲ್ಲಿದ್ದಾಗ ಅವರ ಕಾಯಿಲೆ ಇನ್ನೇನು ಗುಣವಾಗಿಬಿಟ್ಟಿತು ಎನ್ನುವಷ್ಟರಲ್ಲಿ ಅವರು ಕಲ್ಕತ್ತೆಗೆ ಬರಲು ಹಲವು ಬಾರಿ ಒತ್ತಾಯ ಮಾಡಿದ್ದರು. ಶ್ರೀಮಾತೆ ಆ ಮಾತಿಗೆ ಕಿವಿಗೊಡಲಿಲ್ಲ. ಆದರೆ ಅವರು ಇತರರ ಬಳಿ ಹೇಳಿದ್ದರು, ''ಅವರಾದರೋ ಬತ್ತಲೆ ಸಂನ್ಯಾಸಿಗಳು; ಏಳು ಎಂದರೆ ಎದ್ದು ಬಿಡುತ್ತಾರೆ, ಕೂತಕೋ ಎಂದರೆ ಕುಳಿತು ಬಿಡುತ್ತಾರೆ. ಅವರಿಗೆ ಬೇರೆ ಯಾವುದರ ಗೊಡವೆಯೂ ಇಲ್ಲ, ಯಾವ ಚಿಂತೆಯೂ ಇಲ್ಲ. ಹೆಗಲ ಮೇಲೆ ಕಂಬಳಿ ಹಾಕಿಕೊಂಡು ಹೊರಟೇ ಬಿಡುತ್ತಾರೆ! ನನಗೆ ಆ ರೀತಿ ಸಾಧ್ಯವೆ? ನಾನು ಎಷ್ಟೊಂದು ವಿಷಯಗಳ ಕಡೆಗೆ ಗಮನಕೊಟ್ಟು ಹೊರಡಬೇಕು? ಬೇರೆ ಯಾರಿಗೂ ತೊಂದರೆಯಾಗದಂತೆ ನಾನು ನೋಡಿಕೊಳ್ಳಬೇಕಲ್ಲ.''


ಸಣ್ಣ ಸಣ್ಣ ವಿಷಯಗಳನ್ನೇ ದೊಡ್ಡದನ್ನಾಗಿ ಮಾಡಿ ಗದ್ದಲವೆಬ್ಬಿಸುವುದು ನಮ್ಮ ಸ್ವಭಾವ; ಅದರ ಫಲವಾಗಿ ತುಂಬಾ ಕಷ್ಟನಷ್ಟ ಅನುಭವಿಸುತ್ತೇವೆ. ಶ್ರೀಮಾತೆ ಎಲ್ಲವನ್ನು ತಾಳ್ಮೆಯಿಂದ ಸಹಿಸಿಕೊಂಡು, ಮೌನವಾಗಿ ಎಲ್ಲವನ್ನೂ ಎದುರಿಸಲು ನಮಗೆ ಕಲಿಸುತ್ತಿದ್ದರು. ''ಶ, ಷ, ಸ — ಯಾರು ಸಹಿಸುವನೋ, ಅವನು ಬದುಕುತ್ತಾನೆ. ಸಹಿಸಲಾರದವನು ನಾಶವಾಗುವನು.''

ತಮ್ಮ ಕಷ್ಟಕೋಟಲೆಗಳಿಗಾಗಿ ಶ್ರೀಮಾತೆ ಇತರರನ್ನು ದೂಷಿಸುವ ಕೆಲಸವನ್ನು ಎಂದಿಗೂ ಮಾಡುತ್ತಿರಲಿಲ್ಲ. ಅವರು ಎಲ್ಲರಿಗೂ ಹೇಳಿಕೊಡುತ್ತಿದ್ದರು — ''ಮನುಷ್ಯ ತಾನು ಮಾಡಿದ ಕರ್ಮದ ಫಲವನ್ನೇ ಅನುಭವಿಸುತ್ತಾನೆ. ಆದ್ದರಿಂದ ಇತರರ ಮೇಲೆ ದೋಷಾರೋಪಣೆ ಮಾಡದೆ, ಭಗವಂತನಲ್ಲಿ ಪ್ರಾರ್ಥಿಸುತ್ತ, ಅವನ ಕೃಪೆಯನ್ನೇ ಅವಲಂಬಿಸಿ ಎಲ್ಲ ಸನ್ನಿವೇಶಗಳನ್ನೂ ಧೈರ್ಯದಿಂದ ಎದುರಿಸುವುದೇ ಅತ್ಯಂತ ಉಚಿತ'' ಎನ್ನುತ್ತಿದ್ದರು.

ಯಾರಿಗೆ ಶ್ರೀಮಾತೆಯವರ ಬಳಿ ಕೆಲವು ದಿನಗಳ ಕಾಲವಾದರೂ ವಾಸ ಮಾಡುವ ಸೌಭಾಗ್ಯವೊದಗಿತ್ತೋ, ಅವರಿಗೆ ಚೆನ್ನಾಗಿ ತಿಳಿದಿತ್ತು — ಅವರ ಜೀವನವನ್ನು ರೂಪಿಸಲು ಅಗತ್ಯವಾದ ಚಾರಿತ್ರ್ಯ, ವೈರಾಗ್ಯ, ತಿತಿಕ್ಷೆ, ಸಂಯಮ, ಭಗವನ್ನಾಮ ಸಂಕೀರ್ತನೆ ಹಾಗೂ ಎಲ್ಲ ಸನ್ನಿವೇಶಗಳಲ್ಲೂ ಭಗವಂತನ ಮೇಲೆ ದೃಢ ವಿಶ್ವಾಸ, ನಿಷ್ಠೆ, ಭಕ್ತಿ, ನಿರ್ಭರತೆ ಇವನ್ನೆಲ್ಲ ಶ್ರೀಮಾತೆ ಅವರಿಗೆ ಕಲಿಸುತ್ತಿದ್ದರು ಎಂಬುದಾಗಿ. ಶ್ರೀಮಾತೆಯವರಲ್ಲಿ ಹೇಗೋ ಹಾಗೆಯೇ ಅವರ ಶಿಷ್ಯಂದಿರಲ್ಲೂ ಭಾವುಕತೆಯ ಆಡಂಬರ ಕಂಡುಬರುತ್ತಿರಲಿಲ್ಲ. ಎಲ್ಲರಲ್ಲೂ ಸೌಮ್ಯ, ಶಾಂತ, ಧೀರ ಹಾಗೂ ಸ್ಥಿರ ಗುಣಗಳು ಕಂಡುಬರುತ್ತಿದ್ದವು. *(ಮುಗಿಯಿತು)*

---

[೪] ಸ್ವತಃ ಲೇಖಕರು. *(–ಸಂ)*



ಕಳೆದ ದಿನಗಳ ನೆನಪುಗಳು



(ಸ್ವಾಮಿ ವಿರಜಾನಂದರ ಜೀವನ ಹಾಗೂ ಕೆಲವು ಸಮಕಾಲೀನ ಘಟನೆಗಳು)

ಮೂಲ ಬಂಗಾಳಿ: ಸ್ವಾಮಿ ಶ್ರದ್ಧಾನಂದ

ಅನುವಾದ: ಪ್ರವ್ರಾಜಿಕಾ ಯೋಗಾತ್ಮಪ್ರಾಣಾ

ಭಾಗ ೨೮

ವಿರಜಾನಂದರು ಕೆಲವೊಮ್ಮೆ ಸ್ವಾಮೀಜಿಯವರ ತಮ್ಮನಾದ ಮಹೇಂದ್ರನಾಥ ದತ್ತರ ಬಳಿಗೆ ಹೋಗಿ, ಹಿಂದಿನ ಪುಣ್ಯಸ್ಮೃತಿಗಳನ್ನು ಮೆಲುಕು ಹಾಕಿಬರುತ್ತಿದ್ದರು. ಕೊಲ್ಕತ್ತೆಯಲ್ಲಿ ರಾಮಕೃಷ್ಣ-ವಿವೇಕಾನಂದರ ಹೆಸರಿನಲ್ಲಿ ನಡೆಯುತ್ತಿದ್ದ ಕೆಲವು ಸಂಸ್ಥೆಗಳಿದ್ದವು. ಎಂಟಾಲಿಯ ರಾಮಕೃಷ್ಣ ಅರ್ಚನಾಲಯ, ಬಹುಬಜಾರಿನ ಶ್ರೀರಾಮಕೃಷ್ಣ ಅನಾಥ ಭಂಡಾರ್, ಕಾರ್ನ್‌ವಾಲಿಸ್ ಸ್ಟ್ರೀಟಿನ ವಿವೇಕಾನಂದ ಸೊಸೈಟಿ, ಇಲ್ಲಿಯ ಉತ್ಸವಗಳಿಗೆ ಕರೆ ಬರುತ್ತಿದ್ದವು. ವಿರಜಾನಂದರು ಮಠದ ಇತರ ಸಂನ್ಯಾಸಿಗಳೊಂದಿಗೆ ಹೋಗಿ ಉತ್ಸವಗಳಲ್ಲಿ ಭಾಗವಹಿಸಿ, ಅಲ್ಲಿಯ ಪರಿಚಾರಕ ವರ್ಗ ಹಾಗೂ ಕಾರ್ಯಕರ್ತರಿಗೆ ಉತ್ಸಾಹ ನೀಡಿ ಬರುತ್ತಿದ್ದರು. ಹಬ್ಬ-ಹರಿದಿನಗಳಲ್ಲಿ ಆಮಂತ್ರಿತರಾಗಿ ಕೆಲವೊಮ್ಮೆ ಭಕ್ತರ ಮನೆಗಳಿಗೂ ಹೋಗಿ ಬರುತ್ತಿದ್ದರು. ಆ ಸಮಯದಲ್ಲಿ 'ಉದ್ಬೋಧನ' ಮಠದಲ್ಲಿ ಪ್ರತಿ ಭಾನುವಾರ ವೇದಾಂತ ದರ್ಶನಗಳ ಬಗ್ಗೆ ಜನಸಾಮಾನ್ಯರಿಗಾಗಿ ಸ್ವಾಮಿ ಓಂಕಾರಾನಂದರಿಂದ ಪ್ರವಚನವಿರುತ್ತಿತ್ತು. ಈ ಪ್ರವಚನಗಳಲ್ಲಿ ವಿರಜಾನಂದರು ಒಬ್ಬ ಉತ್ಸಾಹಿ ಶ್ರೋತೃವಾಗಿ ಪಾಲ್ಗೊಳ್ಳುತ್ತಿದ್ದರು.

ಬೇಲೂರು ಮಠದ ಉತ್ತರಕ್ಕೆ ಇದ್ದ 'ಸೋನಾರ್ ಬಾಗಾನ್' ಎಂಬ ಹೆಸರಿನ ತೋಟದ ಮನೆಯನ್ನು ೧೯೩೦ರ ಸೆಪ್ಟೆಂಬರ್ ತಿಂಗಳಲ್ಲಿ ಮಠಕ್ಕೆ ಕೊಂಡುಕೊಳ್ಳಲಾಯಿತು. ಆ ಮನೆಯ ದುರಸ್ತಿ ಹಾಗೂ ಕಾನೂನಿಗೆ ಸಂಬಂಧಿಸಿದ ಕೆಲಸಗಳಿಗಾಗಿ ವಿರಜಾನಂದರು ಸ್ವಲ್ಪ ಹೆಚ್ಚಾಗಿಯೇ ಓಡಾಡಬೇಕಾಯಿತು. ತೋಟದ ಮನೆಯು ಮಠಕ್ಕೆ ಹತ್ತಿರವಾಗಿದ್ದು, ಶ್ರೀಮಾತೆಯವರ ಪುಣ್ಯಸ್ಮೃತಿಯಿಂದ ಕೂಡಿತ್ತು . ಆದ್ದರಿಂದ ಸ್ವಾಮಿ ಶಿವಾನಂದರು ಮತ್ತು ಟ್ರಸ್ಟಿಗಳು (ವಿಶ್ವಸ್ತರು) ಅದನ್ನು ಮಠಕ್ಕೆ ಸೇರ್ಪಡಿಸಲು ತುಂಬ ಉತ್ಸಾಹಿಗಳಾಗಿದ್ದರು.

ಅಕ್ಟೋಬರ್ ೧೮ರಂದು ಮಿಸೆಸ್ ಸೇವಿಯರ್ ಅವರ ಜನ್ಮದಿನ. 'ಉದ್ಬೋಧನ' ಮಠದ ಮೂರನೇ ಮಹಡಿಯ ಉತ್ತರ ದಿಕ್ಕಿನಲ್ಲಿದ್ದ ಕೋಣೆಯಲ್ಲಿ ಕುಳಿತು ವಿರಜಾನಂದರು ಬಹು ದೂರದ ಇಂಗ್ಲೆಂಡಿನಲ್ಲಿ ರೋಗಶಯ್ಯೆಯಲ್ಲಿ ಮಲಗಿದ್ದ ಆ ವಯೋವೃದ್ಧೆಯ ಬಗ್ಗೆ ಚಿಂತಿಸತೊಡಗಿದರು. ಅವರು ಅಂದು ತಮ್ಮ ೮೩ನೇ ವರ್ಷಕ್ಕೆ ಕಾಲಿಡುತ್ತಿದ್ದರು. ಈ ಜೀವನದಲ್ಲಿ ಅದು ಅವರ ಕೊನೆಯ ಜನ್ಮದಿನವಾಗಿತ್ತು. ಮಿಸೆಸ್ ಸೇವಿಯರ್ ಎರಡು ದಿನಗಳ ನಂತರವೇ (೧೯೩೦ರ ಅಕ್ಟೋಬರ್ ಇಪ್ಪತ್ತರಂದು) ರಾತ್ರಿ ೧.೪೫ ಕ್ಕೆ ತಮ್ಮ ನಶ್ವರ ದೇಹವನ್ನು ತೊರೆದಿದ್ದರು. ವಿರಜಾನಂದರಿಗೆ ವಿಷಾದ ಮತ್ತು ದುಃಖದ ನೆನಪುಗಳು ಒಮ್ಮೆಗೇ ಮೇಲೆದ್ದು ಬಂದವು.

ಅಕ್ಟೋಬರ್ ೨೧ರಂದು ಕಾಳೀಪೂಜೆಯಿತ್ತು. ವಿರಜಾನಂದರು ಮಠಕ್ಕೆ ಬಂದು ರಾತ್ರಿಯಿಡೀ ನಡೆಯುವ ಪೂಜೆಯನ್ನು ವೀಕ್ಷಿಸಿದರು. ಆ ರಾತ್ರಿಯ ಕೊನೆಯ ಜಾವದಲ್ಲಿ ಇಬ್ಬರು ಬ್ರಹ್ಮಚಾರಿಗಳು ಮಠಾಧ್ಯಕ್ಷರಾದ ಮಹಾಪುರುಷ ಮಹಾರಾಜರಿಂದ ಪವಿತ್ರವಾದ ಸಂನ್ಯಾಸ ದೀಕ್ಷೆಯನ್ನು ಪಡೆದರು.

ವಿರಜಾನಂದರಿಗೆ ಒಂದು ಕಡೆ ಮಠ ಮತ್ತು ಮಿಷನ್ನಿನ ಹಂಗಾಮಿ ಕಾರ್ಯದರ್ಶಿಯ ಗುರುತರ ಜವಾಬ್ದಾರಿಯಾದರೆ, ಮತ್ತೊಂದೆಡೆ ನಿವೇದಿತಾ ವಿದ್ಯಾಲಯದ ಸೆಕ್ರೆಟರಿಯ ಕೆಲಸ. ಹೀಗೆ ಸುಮಾರು ಒಂದು ವರ್ಷ ಕಳೆಯುವಷ್ಟರಲ್ಲಿ ಅವರು ತುಂಬ ಬಳಲಿದರು. ಪೂಜ್ಯ ಮಹಾಪುರುಷ ಮಹಾರಾಜರು ಅವರಿಗೆ ಕೆಲ ತಿಂಗಳುಗಳ ವಿಶ್ರಾಂತಿ ತೆಗೆದುಕೊಳ್ಳಲು ಅನುಮತಿ ನೀಡಿದರು. ಟ್ರಸ್ಟಿಗಳ ಮೀಟಿಂಗ್‌ನಲ್ಲಿ ಅವರಿಗೆ ೧೯೩೧ರ ಜನವರಿ ೩೧ರ ವರೆಗೆ ರಜೆಯನ್ನು ನೀಡಿದರು. ವಿರಜಾನಂದರು ಶ್ಯಾಮಲಾತಾಲ್‌ಗೆ ಹೋಗಿ ವಿಶ್ರಮಿಸಲು ನಿಶ್ಚಯಿಸಿದರು, ಇದಕ್ಕಾಗಿ ಮಹಾಪುರುಷ ಮಹಾರಾಜರ ಸಮ್ಮತಿಯನ್ನು ಪಡೆದರು.

ನವೆಂಬರ್ ೧೫ರಂದು ಹೌರಾ ನಿಲ್ದಾಣದಿಂದ ದೆಹಲಿಗೆ ಹೋಗುವ ರೈಲೊಂದರ 'ಇಂಟರ್ ಕ್ಲಾಸ್' ಡಬ್ಬಿಯಲ್ಲಿ ಕುಳಿತು, ಸಂಜೆ ನಾಲ್ಕೂವರೆಗೆ ವಿರಜಾನಂದರು ತಮ್ಮ ಪ್ರಯಾಣವನ್ನು ಬೆಳೆಸಿದರು. ಮಾರನೇ ದಿನ ಮಧ್ಯಾಹ್ನ ಹತ್ರಾಸ್ ಸ್ಟೇಷನನ್ನು ತಲುಪಿದರು. ಅಲ್ಲಿಂದ ರೈಲನ್ನು ಬದಲಿಸಿ ಮಥುರೆಗೆ, ಮಥುರೆಯಿಂದ ಬೃಂದಾವನಕ್ಕೆ. ಅಲ್ಲಿಗೆ ಬರುವಷ್ಟರಲ್ಲಿ ಸಂಜೆಯಾಗಿತ್ತು. ವಿರಜಾನಂದರ ವೃದ್ಧೆಯಾದ ತಾಯಿಯು ಕಾಲಾಬಾಬುವಿನ ಕುಂಜದಲ್ಲಿ ವಾಸವಾಗಿದ್ದರು; ಕಠಿಣ ರೋಗದಿಂದ ಪೀಡಿತರಾಗಿದ್ದರು. ವಿರಜಾನಂದರು ಕೆಲವು ದಿನ ಅಲ್ಲಿ ಉಳಿದುಕೊಂಡು ಅವರ ಸೇವೆಯನ್ನು ಮಾಡಿದರು. ದಿನವೂ ಎಂಬಂತೆ ಸೇವಾಶ್ರಮಕ್ಕೆ ಹೋಗಿ ಬರುತ್ತಿದ್ದರು. ಕೆಲವು ದಿನ ಸಂಜೆ ಸುತ್ತಾಡಿ ಮನಸ್ಸಿಗೆ ತೃಪ್ತಿಯಾಗುವವರೆಗೂ ಬೃಂದಾವನದ ಎಲ್ಲ ಮಂದಿರಗಳನ್ನೂ ಸಂದರ್ಶಿಸಿದರು.

೧೯೩೦ರ ನವೆಂಬರ್ ೨೬ರಂದು ಶ್ಯಾಮಲಾತಾಲ್ ತಲುಪಿದರು. ಮಾಯಾವತಿ ಹಾಗೂ ಶ್ಯಾಮಲಾತಾಲ್ ಈ ಉಭಯ

ಆಶ್ರಮದ ಏಕನಿಷ್ಠ ಬಂಧುಗಳಾಗಿದ್ದ ಟನಕ್‌ಪುರದ ಕಂಟ್ರಾಕ್ಟರ್ ಬಾಬು ಶ್ಯಾಮಸಿಂಗ್ ತನ್ನ ಕುದುರೆಯನ್ನು ಕಳುಹಿಸಿದ್ದನು. ಅದನ್ನೇರಿ ವಿರಜಾನಂದರು ಟನಕ್‌ಪುರದಿಂದ ೧೩ ಮೈಲಿಗಳನ್ನು ಕ್ರಮಿಸಿ, ಶ್ಯಾಮಲಾತಾಲ್ ತಲುಪಿದ್ದರು.

ಶ್ಯಾಮಲಾತಾಲ್‌ನಲ್ಲಿ ಎರಡು ವಿದೇಶೀ ಪತ್ರಗಳು ವಿರಜಾನಂದರಿಗಾಗಿ ಕಾಯುತ್ತಿದ್ದವು. ಅದನ್ನು ಮದರ್ ಸೇವಿಯರ್ ಅವರ ಸೋದರನ ಮಗಳಾದ ಮಿಸ್ ಕಾನ್‌ಸ್ಟೆಂನ್ಸ್ ಮಿಶೆಲ್ ಬರೆದಿದ್ದರು. ಅಕ್ಟೋಬರ್ ೧೮ರ ಪತ್ರದಲ್ಲಿ ಮದರ್ ತುಂಬ ಕಠಿಣ ಕಾಯಿಲೆಗೊಳಗಾಗಿರುವ ಸುದ್ದಿಯಿತ್ತು. ೨೪ನೇ ಅಕ್ಟೋಬರ್‌ನಲ್ಲಿ ಬರೆದ ಮತ್ತೊಂದು ಪತ್ರದಲ್ಲಿ , ೨೦ನೇ ಅಕ್ಟೋಬರ್ ಮದರ್ ಸೇವಿಯರ್‌ರವರ ದೇಹತ್ಯಾಗವಾಯಿತೆಂಬ ಸುದ್ದಿಇತ್ತು. ಮೃತ್ಯುವಿನ ಹತ್ತು ನಿಮಿಷದ ಹಿಂದೆಯೂ ಸಹ ಅವರು ಪ್ರಜ್ಞೆಯಿಂದಿದ್ದರು. ಬಹಳ ಶಾಂತಿಯಿಂದಲೇ ಅವರು ಕೊನೆಯುಸಿರೆಳೆದಿದ್ದರು. ಮದರ್ ಸೇವಿಯರ್ ಅವರ ನೆನಪಿನಲ್ಲಿ ಡಿಸೆಂಬರ್ ೬ರಂದು ಶ್ಯಾಮಲಾತಾಲ್‌ನ ಗ್ರಾಮವಾಸಿಗಳಿಗೆಲ್ಲ ವಿರಜಾನಂದರು ಊಟ ಹಾಕಿಸಿದರು. ೧೪ ವರ್ಷಗಳ ಹಿಂದೆ ಈ ವಿದೇಶಿ ನಾರಿಯೇ ಶ್ಯಾಮಲ ಅರಣ್ಯ ಛಾಯೆಯಲ್ಲಿ ಶಾಂತಿ ನಿಲಯವಾದ ಶ್ಯಾಮಲಾತಾಲ್‌ನ ಆಶ್ರಮವನ್ನು ಹುಟ್ಟು ಹಾಕಿದ್ದರು. ಅಲ್ಲಿ ಹತ್ತು ತಿಂಗಳು ವಾಸವಾಗಿದ್ದು, ಅಲ್ಲಿಯ ಬಡ ಪಹಾಡಿ ಆಬಾಲವೃದ್ಧ-ವನಿತೆಯರೊಡನೆ ತಾದಾತ್ಮ್ಯಭಾವದಲ್ಲಿ ಬೆರೆತು, ಅವರ ಸುಖ-ದುಃಖದಲ್ಲಿ ಪಾಲ್ಗೊಂಡು ಅವರೆಲ್ಲರ ಮನ ಗೆದ್ದಿದ್ದರು. ಪಹಾಡಿಗಳೂ ಸಹ ಇವರನ್ನು ಮರೆತಿರಲಿಲ್ಲ. ಆಗ ಚಿಕ್ಕವರಾಗಿದ್ದವರೆಲ್ಲ ಈಗ ಬೆಳೆದಿದ್ದಾರೆ. ಅವರಿಗೆಲ್ಲ ಮದರ್ ಅವರ ಮಾತೃಸ್ನೇಹ ಬಹಳವಾಗಿಯೇ ನೆನಪಾಗುತ್ತಿತ್ತು. ಶ್ಯಾಮಲಾತಾಲ್‌ನಲ್ಲಿ ನಡೆದಂತೆ ಮಾಯಾವತಿಯಲ್ಲೂ ಸಹ ಅಕ್ಕಪಕ್ಕದ ಗ್ರಾಮವಾಸಿಗಳಿಗೆ ಡಿಸೆಂಬರ್ ೧೨ ರಂದು ಮಿಸೆಸ್ ಸೇವಿಯರ್ ಸ್ಮರಣಾರ್ಥವಾಗಿ ಭೋಜನ ನೀಡಲಾಗಿತ್ತು. ಮಾಯಾವತಿಯ ಅದ್ವೈತ ಆಶ್ರಮದ ಆಗಿನ ಅಧ್ಯಕ್ಷ ರಾಗಿದ್ದ ಸ್ವಾಮಿ ವೀರೇಶ್ವರಾನಂದರು ಮದರ್ ಸೇವಿಯರ್ ಅವರ ಕೆಲವು ಫೋಟೋ ಕಳುಹಿಸಬೇಕೆಂದು ಮತ್ತು ಅವರ ಜೀವನಕ್ಕೆ ಸಂಬಂಧಿಸಿದಂತೆ ಕೆಲವು ವಿಷಯಗಳನ್ನೂ ಸಹ ಸಂಗ್ರಹಿಸಿ ಕಳುಹಿಸಬೇಕೆಂದು ಕೇಳಿಕೊಂಡು ಸ್ವಾಮಿ ವಿರಜಾನಂದರಿಗೆ ಕೊಲ್ಕತ್ತೆಯಿಂದ ತಂತಿ ಕಳುಹಿಸಿದ್ದರು. ಏಕೆಂದರೆ ಮದರ್ ಸೇವಿಯರ್ ಬಗ್ಗೆ ಒಂದು ಸಣ್ಣ ಪುಸ್ತಿಕೆಯನ್ನು ಹೊರತರಬೇಕೆಂದಿದ್ದರು. ಅವರ ಕೋರಿಕೆಯಂತೆ ವಿರಜಾನಂದರು ಎಲ್ಲವನ್ನೂ ಕಳುಹಿಸಿಕೊಟ್ಟರು. ಅಲ್ಲದೆ ೧೯೧೯ರಲ್ಲಿ ಮದರ್ ಸೇವಿಯರ್ ಜನ್ಮದಿನದ ಸ್ಮರಣೆಗಾಗಿ ಬರೆದಿದ್ದ ಕವಿತೆಯೊಂದನ್ನೂ ಸಹ 'ಪ್ರಬುದ್ಧ ಭಾರತ'ದಲ್ಲಿ ಮುದ್ರಿಸುವ ಸಲುವಾಗಿ ಕಳುಹಿಸಿಕೊಟ್ಟರು.

ಆ ವರ್ಷ ಶ್ರೀಮಾತೆಯವರ ಜನ್ಮದಿನ ಡಿಸೆಂಬರ್ ೧೨ರಂದು ಬಂದಿತ್ತು. ಶ್ರೀಮಾತೆಯವರಿಗೆ ನಿವೇದಿಸಲೆಂದು ಹಿಂದಿನ ದಿನವೆಲ್ಲ ಕುಳಿತು 'ಚಂದ್ರಪುಲಿ' ಎಂಬ ಸಿಹಿತಿಂಡಿಯನ್ನು ವಿರಜಾನಂದರು ತಯಾರಿಸಿದರು. ಉತ್ಸವದ ದಿನವನ್ನು ಹಿಮಾಲಯದ ಆ ನಿರ್ಜನ ಆಶ್ರಮದಲ್ಲಿ ಸ್ಮರಣೆ-ಮನನ-ಭಜನೆಯೊಂದಿಗೆ ಆನಂದದಿಂದ ಕಳೆದರು.

* * * *

೧೯೩೧ ಹಾಗೂ ೧೯೩೨ರಲ್ಲಿಯೂ ಸಹ ವಿರಜಾನಂದರಿಗೆ ಪರ್ವತಗಳನ್ನು ಬಿಟ್ಟು ಕೆಳಗಿಳಿದು ಬರಬೇಕಾಗಿರಲಿಲ್ಲ. ಅವರ ದಿನಗಳು ಬಹುಪಾಲು ಶ್ಯಾಮಲಾತಾಲ್‌ನಲ್ಲೂ ಸ್ವಲ್ಪ ಭಾಗ ಮಾಯಾವತಿಯಲ್ಲೂ ಕಳೆದವು. ಇವರು ಮಠ ಮತ್ತು ಮಿಷನ್ನಿನ ಟ್ರಸ್ಟಿಗಳಾದ್ದರಿಂದ ಕೆಲವು ಬಾರಿ ಕಾನೂನಿಗೆ ಸಂಬಂಧಿಸಿದ ಕೆಲಸಗಳ ಮೇರೆಗೆ ಮಹಾಕುಮಾ ನಗರಕ್ಕೂ, ಲೋಹಾಘಾಟಿಗೂ ಹೋಗಬೇಕಾಗಿ ಬರುತ್ತಿತ್ತು. ೧೯೩೧ರ ಮೇ ತಿಂಗಳಲ್ಲಿ ಶ್ಯಾಮಲಾತಾಲ್‌ನ ಮೆಚ್ಚಿನ ಕರ್ಮಠ ನರೇನ್‌ನ (ಸ್ವಾಮಿ ಮಹಾನಂದ) ದೇಹತ್ಯಾಗವಾಯಿತು. ಇದರಿಂದಾಗಿ ಆಶ್ರಮದ ನಾನಾ ಕೆಲಸಗಳನ್ನು ವಿರಜಾನಂದರೊಬ್ಬರೇ ನಡೆಸಿಕೊಂಡು ಹೋಗಬೇಕಾಗಿ ಬಂತು. ಆದರೆ ಅವರು ಈ ಕೆಲಸವನ್ನು ಪರಿಶ್ರಮವೆಂದು ಪರಿಗಣಿಸುತ್ತಿರಲಿಲ್ಲ.[೧]

೧೯೩೨ರಲ್ಲಿ ಕಂಖಲ್ ಸೇವಾಶ್ರಮದ ಅಧ್ಯಕ್ಷರೂ ಗುರುಭ್ರಾತರೂ ಆದ ಸ್ವಾಮಿ ಕಲ್ಯಾಣಾನಂದರು ಮಾಯಾವತಿಗೆ ಹೋಗುವಾಗ ದಾರಿಯಲ್ಲಿ ಶ್ಯಾಮಲಾತಾಲ್‌ಗೂ ಬಂದು ಆಶ್ರಮವನ್ನು ನೋಡಿಕೊಂಡು ಹೋದರು. ಅವರು ಕೆಲವು ತಿಂಗಳು ಮಾಯಾವತಿಯಲ್ಲಿದ್ದರು. ಇವರು ಮಾಯಾವತಿಯಲ್ಲಿ ಇದ್ದ ಸಮಯದಲ್ಲಿ ವಿರಜಾನಂದರೂ ಸಹ ಅಲ್ಲಿಗೆ ಹೋಗಿ ಕೆಲವು ದಿನಗಳನ್ನು ಕಳೆದಿದ್ದರು. ನವೆಂಬರ್ ತಿಂಗಳಲ್ಲಿ ಇಬ್ಬರೂ ಒಟ್ಟಿಗೆ ಕೆಳಗಿಳಿದರು! ಇವರೊಂದಿಗೆ ಮಾಯಾವತಿ ಅದ್ವೈತ ಆಶ್ರಮದ ಆಗಿನ ಅಧ್ಯಕ್ಷರಾದ ಸ್ವಾಮಿ ವೀರೇಶ್ವರಾನಂದರೂ 'ಪ್ರಬುದ್ಧ ಭಾರತ' ಪತ್ರಿಕೆಯ ಸಂಪಾದಕರಾದ ಸ್ವಾಮಿ ಪವಿತ್ರಾನಂದರೂ ಸಹ ಇದ್ದರು. ವಿರಜಾನಂದರು ಕಾಲ್ನಡಿಗೆಯಲ್ಲೇ ಬರಲು ತುಂಬ ಇಚ್ಛಿಸಿದ್ದರು. ಆದರೆ ಇವರೆಲ್ಲರ ಬಲವಂತಕ್ಕೆ ಮಣಿದು ಕುದುರೆಯ ಬೆನ್ನೇರಿದರು.

ಮಾಸ್ಟರ್ ಮಹಾಶಯರು ಕೊಲ್ಕತ್ತೆಯಲ್ಲಿ ಜೂನ್ ೪ರಂದು ಹಾಗೂ ಪೂಜ್ಯರಾದ ಸ್ವಾಮಿ ಸುಬೋಧಾನಂದರು ಬೇಲೂರು ಮಠದಲ್ಲಿ ಡಿಸೆಂಬರ್ ೨ರಂದು ದೇಹತ್ಯಾಗ ಮಾಡಿದರೆಂಬ

---

೧ ಸ್ವಂತ ಜವಾಬ್ದಾರಿಯ ಮೇಲೆ ಬೇರೆಯೇ ಆದಂತಹ (ಸ್ವತಂತ್ರವಾದ) ಆಶ್ರಮದ ಸ್ಥಾಪನೆಯು ಖಂಡಿತವಾಗಿಯೂ ಸುಖಕರವಲ್ಲವೆಂದು ವಿರಜಾನಂದರಿಗೆ ಆಗಾಗ ಅನ್ನಿಸುತ್ತಿತ್ತು . ಸಾಧನೆಯೇ ಮೂಲ ಲಕ್ಷ್ಯವಾಗಿದ್ದರೂ ಆಶ್ರಮದ ಚಾಲನೆಗಾಗಿ ಅಗತ್ಯವಾಗಿ ಬರುವ ಆರ್ಥಿಕ ಜಂಜಡಗಳು ಚಿತ್ತವನ್ನು ವಿಕ್ಷಿಪ್ತಗೊಳಿಸುತ್ತವೆ ಎಂಬುದರಲ್ಲಿ ವಿರಜಾನಂದರಿಗೆ ಸಂದೇಹವಿರಲಿಲ್ಲ. ಮುಂದೊಮ್ಮೆ ಹಿರಿಯ ಭಕ್ತರೊಬ್ಬರು ಕೆಲಸದಿಂದ ನಿವೃತ್ತಿಯನ್ನು ಪಡೆದು ಸಾಧನೆ ಮಾಡುವ ಉದ್ದೇಶದಿಂದ ಆಶ್ರಮವೊಂದನ್ನು ಸ್ಥಾಪಿಸಿದಾಗ ವಿರಜಾನಂದರು ಅವರಿಗೆ ತಾವು ಶ್ಯಾಮಲಾತಾಲ್ ಆಶ್ರಮದಿಂದಾಗಿ ಎಷ್ಟೊಂದು ರೀತಿಯಲ್ಲಿ ತೊಂದರೆಗೆ ಒಳಗಾಗಬೇಕಾಯಿತೆಂಬುದನ್ನು ವಿಶದಪಡಿಸಿ, ಯಾವುದೇ ಕಾರಣಕ್ಕೂ ಆಶ್ರಮದ ಕಾರ್ಯಪರಿಧಿಯನ್ನು ವಿಸ್ತರಿಸಲು ಪ್ರಯತ್ನಿಸಬೇಡ ಎಂಬ ಎಚ್ಚರಿಕೆಯನ್ನು ನೀಡಿದ್ದರು.

ದುಃಖದ ವಾರ್ತೆಯನ್ನು ವಿರಜಾನಂದರು ಶ್ಯಾಮಲಾತಾಲ್‌ನಲ್ಲಿದ್ದಾಗ ಕೇಳಿದರು. ತಾವು ಯೌವನದ ಹೊಸ್ತಿಲಲ್ಲಿದ್ದಾಗ ಮಾಸ್ಟರ್ ಮಹಾಶಯರಿಂದ ತಮ್ಮ ತ್ಯಾಗಜೀವನಕ್ಕೆ ಸಿಕ್ಕ ಪ್ರೇರಣೆಯನ್ನು ವಿರಜಾನಂದರು ಎಂದೂ ಮರೆತಿರಲಿಲ್ಲ.

೧೯೩೩ರ ಏಪ್ರಿಲ್ ತಿಂಗಳಲ್ಲಿ ಮಠಾಧ್ಯಕ್ಷರಾದ ಸ್ವಾಮಿ ಶಿವಾನಂದರು ಪಾರ್ಶ್ವವಾಯುವಿನಿಂದ ಆಕ್ರಾಂತರಾಗಿರುವರೆಂಬ ವಿಷಾದದ ಸುದ್ದಿ ಬಂತು. ಮಾತು ನಿಂತುಹೋಗಿತ್ತು ಹಾಗೂ ಅವರ ದೇಹದ ಬಲಭಾಗವು ಸ್ವಾಧೀನ ಕಳೆದುಕೊಂಡಿತ್ತು. ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಸಾಧು ಮತ್ತು ಭಕ್ತರ ಮನಸ್ಸು ಚಿಂತೆಯೆಂಬ ಘನಮೇಘದಿಂದ ಆಚ್ಛಾದಿಸಲ್ಪಟ್ಟಿತ್ತು. ಹತ್ತು ತಿಂಗಳ ಕಾಲ ಅವರ ಆರೋಗ್ಯವು ಉನ್ನತಿ-ಅವನತಿಗಳ ನಡುವೆ ಹೊಯ್ದಾಡುತ್ತಿತ್ತು. ೧೯೩೪ರ ಫೆಬ್ರವರಿ ೨೦ರಂದು ತಮ್ಮ ೮೦ನೇ ವಯಸ್ಸಿನಲ್ಲಿ ಸ್ವಾಮಿ ಶಿವಾನಂದರು ಮಹಾಸಮಾಧಿಯನ್ನಪ್ಪಿದರು. ಆ ಸಮಯದಲ್ಲಿ ಶ್ಯಾಮಲಾತಾಲ್‌ನಲ್ಲಿದ್ದ ಸ್ವಾಮಿ ವಿರಜಾನಂದರು ಈ ಸಮಾಚಾರವನ್ನು ಪಡೆದು ಬೇಲೂರು ಮಠಕ್ಕೆ ಬಂದರು. ಸ್ವಾಮಿ ಶಿವಾನಂದರು ಸುದೀರ್ಘ ಹನ್ನೆರಡು ವರ್ಷಗಳ ಕಾಲ ತಮ್ಮ ಜ್ಞಾನ-ವೈರಾಗ್ಯ-ಪ್ರೇಮ ಮಂಡಿತ ಉನ್ನತ ಆಧ್ಯಾತ್ಮಿಕ ವ್ಯಕ್ತಿತ್ವದ ಮೂಲಕ ಶ್ರೀರಾಮಕೃಷ್ಣ ಸಂಘದ ನೂರಾರು ತ್ಯಾಗಿಗಳಿಗೆ ಮತ್ತು ಗೃಹಸ್ಥರಿಗೆ ಲೌಕಿಕ ಮತ್ತು ಪಾರಮಾರ್ಥಿಕ ವಿಷಯದಲ್ಲಿ ಮಾರ್ಗದರ್ಶನ ತೋರುತ್ತ, ಬರಿದಾಗದ ಉತ್ಸಾಹವನ್ನಿತ್ತಿದ್ದರು. ಇಂತಹ ಮಹಾ ವ್ಯಕ್ತಿತ್ವವು ಕಣ್ಮರೆಯಾದ್ದರಿಂದ ಸಂಘದ ಸಮತೋಲನವು ಸ್ವಲ್ಪ ಏರುಪೇರಾಗುವುದೆಂಬುದು ಸರ್ವವಿದಿತವಾಗಿತ್ತು. ಮಹಾಪುರುಷ ಮಹಾರಾಜರೊಂದಿಗೆ ಒಂದು ಯುಗವೇ ಕೊನೆಗೊಂಡಂತಾಗಿತ್ತು.

೧೬

ಮಹಾಪುರುಷರಾದ ಸ್ವಾಮಿ ಶಿವಾನಂದರ ಮಹಾಸಮಾಧಿಯ ನಂತರ ಸ್ವಾಮಿ ಅಖಂಡಾನಂದರು ಹೊಸ ಅಧ್ಯಕ್ಷರಾಗಿ ನೇಮಕಗೊಂಡರು. ಸ್ವಾಮಿ ಶುದ್ಧಾನಂದರು ಅಷ್ಟು ಹೊತ್ತಿಗಾಗಲೇ ಮಠ ಹಾಗೂ ಮಿಷನ್ನಿನ ಸೆಕ್ರೆಟರಿ ಸ್ಥಾನದಲ್ಲಿದ್ದು, ದಕ್ಷತೆಯಿಂದ ಆರೂವರೆ ವರ್ಷಗಳ ಕಾಲ ದುಡಿದು ಬಳಲಿದ್ದರು. ವಿಧಾತನ ಕಟ್ಟಳೆಯಂತೆ ಈಗ ವಿರಜಾನಂದರು ಶುದ್ಧಾನಂದರ ಜವಾಬ್ದಾರಿಯನ್ನು ಹೊರಬೇಕಾಯಿತು. 'ರೆಕ್ಕೆಯಿಲ್ಲದ ವಿಹಂಗಮವೇ ಕೇಳು, ನೀನು ತಪ್ಪಿಸಿಕೊಳ್ಳುವ ದಾರಿಯಲ್ಲವಿದು' ಎಂಬ ಸ್ವಾಮೀಜಿಯ ಕವಿತೆಯ ಚರಣವೊಂದು ವಿರಜಾನಂದರಿಗೆ ನೆನಪಿಗೆ ಬಂತು; ಕ್ಷೋಭೆಗೊಳಗಾಗದೆ ಹೊಸ ಜವಾಬ್ದಾರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.

೧೯೩೫ರ ಪ್ರಾರಂಭದಲ್ಲಿ ಸ್ವಾಮಿ ವಿರಜಾನಂದರಿಗೆ ಹೃದಯದ ದುರ್ಬಲತೆ ಕಾಣಿಸಿಕೊಂಡಿತು. ಚಿಕಿತ್ಸಕರೇನೋ ಔಷಧಿ-ಪಥ್ಯವನ್ನು ತಿಳಿಸಿದರಾದರೂ ವಿರಜಾನಂದರಿಗೆ ಅದನ್ನು ಯಥಾವತ್ತಾಗಿ ಪಾಲಿಸಲಾಗುತ್ತಿರಲಿಲ್ಲ, ಅವರದಕ್ಕೆ ಗುರುತ್ವವನ್ನೂ ಕೊಡುತ್ತಿರಲಿಲ್ಲ. ಏಪ್ರಿಲ್‌ನಲ್ಲಿ ವಿವಿಧ ಶಾಖಾಕೇಂದ್ರಗಳ ಅಧ್ಯಕ್ಷರುಗಳ ಸಮ್ಮೇಳನವಿತ್ತು; ಇದರಲ್ಲಿ ವಿರಜಾನಂದರು ವಿಶೇಷ ಪಾತ್ರವನ್ನು ವಹಿಸಬೇಕಾಯಿತು. ಇದಾದ ನಂತರ ಆರು ತಿಂಗಳ ರಜೆಯನ್ನು ಪಡೆದು ವಿರಜಾನಂದರು ಶುದ್ಧಾನಂದರೊಂದಿಗೆ ಮೇ ೨ ರಂದು ಶ್ಯಾಮಲಾತಾಲ್‌ಗೆ ಹೊರಟರು. ನವೆಂಬರ್‌ನಲ್ಲಿ ಹಿಂತಿರುಗಿ ಬಂದು ಮತ್ತೆ ಸೆಕ್ರೆಟರಿ ಕೆಲಸವನ್ನು ವಹಿಸಿಕೊಂಡರು. ೧೯೩೬ರಲ್ಲೊಮ್ಮೆ ಕೆಲದಿನಗಳ ಮಟ್ಟಿಗೆ ರಾಂಚಿಗೆ ಹೋಗಿ ಬಂದರು.

ಫ್ರೆಂಚ್ ಚಿಂತಕರಾದ ರೋಮಾ ರೋಲಾ ಎಂಬವರು ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ಬರೆದು ಈ ಯುಗಪುರುಷರಿಬ್ಬರನ್ನೂ ಪಾಶ್ಚಾತ್ಯ ಜಗತ್ತಿಗೆ ಪರಿಚಯಿಸಿದ್ದರು. ಇದರಿಂದಾಗಿ ಶ್ರೀರಾಮಕೃಷ್ಣರ ಭಕ್ತಸಮಾಜಕ್ಕೆ ರೋಮಾ ರೋಲಾರ ಬಗ್ಗೆ ಆಳವಾದ ಕೃತಜ್ಞತಾ ಭಾವವಿರುವುದು ಸಹಜವಾದದ್ದು. ಸ್ವಾಮಿ ವಿರಜಾನಂದರು ನಡೆಸಿಕೊಟ್ಟ ೧೯೩೬ರ ಜನವರಿ ೨೯ರ ಸಂನ್ಯಾಸಿಗಳ ಸಭೆಯಲ್ಲಿ ರೋಮಾ ರೋಲಾರವರ ೭೦ನೇ ಜನ್ಮದಿನಕ್ಕೆ ಸಂಘದ ಪರವಾಗಿ ಅಭಿನಂದನೆಗಳನ್ನು ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ಭಗವಾನ್ ಶ್ರೀರಾಮಕೃಷ್ಣರ ಜನ್ಮ ಶತಮಾನೋತ್ಸವವು ಈ ವರ್ಷದಿಂದ (೧೯೩೬) ಪ್ರಾರಂಭವಾಗುವುದರಲ್ಲಿತ್ತು. ಅದಕ್ಕಾಗಿ ಸಿದ್ಧತೆಗಳು ನಡೆಯುತ್ತಿದ್ದವು. ಸ್ವಾಮಿ ವಿವೇಕಾನಂದರಿಂದ ಪರಿಕಲ್ಪಿತವಾದ ಶ್ರೀರಾಮಕೃಷ್ಣ ಮಂದಿರದ ನಿರ್ಮಾಣವು ಈಗಾಗಲೇ ಪ್ರಾರಂಭವಾಗಿತ್ತು (೧೯೩೪ರ ಕೊನೆಭಾಗದಲ್ಲಿ). ಮಠದ ಅಧ್ಯಕ್ಷರಾದ ಸ್ವಾಮಿ ಅಖಂಡಾನಂದರು ಸಾರಗಾಛಿ ಆಶ್ರಮದಲ್ಲೇ ಇದ್ದರು. ಅವರದು ಬಾಲಸ್ವಭಾವ. ಹಳ್ಳಿಯ ವಾತಾವರಣವೇ ಅವರಿಗಿಷ್ಟ. ಆದರೆ ಶತಮಾನೋತ್ಸವದ ಉದ್ಘಾಟನೆಯ ಶುಭ ಸಂದರ್ಭದಲ್ಲಿ ಅವರ ಉಪಸ್ಥಿತಿಯು ಬಹಳ ಅಗತ್ಯವಿತ್ತು. ಆದ್ದರಿಂದ ಅವರನ್ನೊಪ್ಪಿಸಿ ಬೇಲೂರು ಮಠಕ್ಕೆ ಕರೆತರಲು ವಿರಜಾನಂದರು ಮತ್ತಿಬ್ಬರು ಹಿರಿಯ ಸಂನ್ಯಾಸಿಗಳನ್ನು ಕರೆದುಕೊಂಡು ಸಾರಗಾಛಿಗೆ ಹೊರಟರು. ಇವರೆಲ್ಲರನ್ನು ನೋಡಿ ಶಿಶುಸ್ವಭಾವ ಮುಗ್ಧರಾದ ಅಖಂಡಾನಂದರಿಗೆ ಬಲು ಖುಷಿ. ಹಾಗಾಗಿ ಅವರನ್ನೊಪ್ಪಿಸಿ ಬೇಲೂರಿಗೆ ಕರೆತರಲು ಹೆಚ್ಚು ಕಷ್ಟಪಡಬೇಕಾಗಲಿಲ್ಲ.

೧೯೩೬ರ ಫೆಬ್ರವರಿ ೨೪ರಂದು ಶ್ರೀರಾಮಕೃಷ್ಣರ ಜಯಂತಿ. ಅಂದೇ ಜನ್ಮಶತಮಾನೋತ್ಸವದ ಶುಭಾರಂಭ. ಅಂದಿನ ದಿನ ಇಡೀ ಕಾರ್ಯಕ್ರಮಗಳು, ವಿಶೇಷ ಪೂಜೆ, ಪಠಣ, ಭಜನೆ, ಸಂಕೀರ್ತನೆಗಳಿಂದ ಇಡೀ ಮಠವು ಸಂಭ್ರಮದಿಂದ ಕೂಡಿತ್ತು. ಒಂಬತ್ತು ಗಂಟೆಯ ಹೊತ್ತಿಗೆ ವಿರಾಟ್ ಹೋಮವು ಪ್ರಾರಂಭವಾಯಿತು. ಸುಪ್ರಸಿದ್ಧ ಗಾಯಕರು ಹಾಗೂ ವಾದಕರು ಐದು ಗಂಟೆಗಳ ಕಾಲ ಅತ್ಯುತ್ಕೃಷ್ಟವಾದ ಭಾರತೀಯ ಸಂಗೀತದ ಹೊನಲನ್ನೇ ಹರಿಸಿದರು. ಮಠದ ವಿಶಾಲ ಮೈದಾನದ ಮಧ್ಯಭಾಗದಲ್ಲಿ ಕೃತಕ ಪರ್ವತ, ಝರಿ ಮುಂತಾದವುಗಳನ್ನು ನಿರ್ಮಿಸಿ, ನಯನ ಮನೋಹರವಾದ ಮಂಟಪವೊಂದರಲ್ಲಿ ಶ್ರೀರಾಮಕೃಷ್ಣರ ಬೃಹತ್ ಪ್ರತಿಕೃತಿಯೊಂದನ್ನಿಟ್ಟು, ಅದನ್ನು ಪುಷ್ಪಮಾಲೆಗಳಿಂದ ಅಲಂಕರಿಸಲಾಗಿತ್ತು. ಇಲ್ಲಿ ದೇವೀ ಸಂಕೀರ್ತನೆಗಳನ್ನು ಹಾಡು

ತ್ತಿದ್ದರು. ಜಾತಿಧರ್ಮಗಳ ಎಲ್ಲೆಗಳನ್ನು ಒಡೆದುಹಾಕಿ ಸಾವಿರಾರು ಸ್ತ್ರೀಪುರುಷರು ಈ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಶ್ರೀರಾಮ ಕೃಷ್ಣರ ಜೀವನ ಹಾಗೂ ಉಪದೇಶಗಳನ್ನೊಳಗೊಂಡ ಕಿರು ಪುಸ್ತಿಕೆಗಳನ್ನು ಜನಸಾಮಾನ್ಯರಿಗೆ ಹಂಚಲಾಗುತ್ತಿತ್ತು. ಕೊಲ್ಕತ್ತೆಯ ಬಾನುಲಿಯು ಈ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಬೆಳಗ್ಗೆ ೭-೧೫ಕ್ಕೆ ಶ್ರೀರಾಮಕೃಷ್ಣರ ಬಗ್ಗೆ ಸ್ವಾಮಿ ವಿವೇಕಾನಂದರು ಹೇಳಿದ ಮಾತುಗಳನ್ನು ಹಾಗೂ ರಾಮಕೃಷ್ಣ ಸಂಘದ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಅಖಂಡಾನಂದರ ಸಂದೇಶಗಳನ್ನು ಬಿತ್ತರಿಸಿದರು. ಹಾಗೂ ಸಂಜೆ ೬ ಗಂಟೆಯಿಂದ ವೇದಘೋಷವನ್ನೂ 'ಯುಗಾವತಾರ್ ಶ್ರೀರಾಮಕೃಷ್ಣ' ಎಂಬ ನಾಟಕವನ್ನೂ ಪ್ರಸಾರ ಮಾಡಿತು. ಅಂದು ಸಂಜೆ ೪ ಗಂಟೆಗೆ ದೊಡ್ಡದೊಂದು ಸಭೆ ಸೇರಿತ್ತು. ಸ್ವಾಮಿ ಶುದ್ಧಾನಂದರು ಅದರ ಅಧ್ಯಕ್ಷರಾಗಿದ್ದರು. ನ್ಯಾಯಾಧೀಶರಾದ ಸರ್ ಮನ್ಮಥನಾಥ ಮುಖ್ಯೋಪಾಧ್ಯಾಯ, ಡಾಕ್ಟರ್ ವೇಣೀಮಾಧವ ಬಡುವಾ, ಡಾ. ಪ್ರಫುಲ್ಲ ಚಂದ್ರ ಘೋಷ್, ಶ್ರೀ ಪ್ರಫುಲ್ಲಚಂದ್ರ ಸರಕಾರ್, ಅಧ್ಯಾಪಕರಾದ ನೃಪೇಂದ್ರನಾಥ್ ವಂದ್ಯೋಪಾಧ್ಯಾಯ, ರಾಯ್ ಖಗೇಂದ್ರನಾಥ ಬಹಾದೂರ್, ಸತ್ಯೇಂದ್ರನಾಥ್ ಮಜುಮ್ದಾರ್ ಹಾಗೂ ಡಾ. ಕಾಲೀದಾಸ್ ನಾಗ್ ಮುಂತಾದ ಮಹಾನ್ ಚಿಂತಕರು ಈ ಸಭೆಯಲ್ಲಿ ಭಾಗವಹಿಸಿದ್ದರು.

ಫೆಬ್ರವರಿ ೨೬ರಂದು ವಿರಜಾನಂದರು ಮಠದ ಹಲವು ಸಂನ್ಯಾಸಿ, ಬ್ರಹ್ಮಚಾರಿಗಳೊಡನೆ ಶ್ರೀರಾಮಕೃಷ್ಣರ ಪುಣ್ಯಸ್ಮೃತಿಯಿಂದ ಕೂಡಿದ ಕಾಶೀಪುರದ ಉದ್ಯಾನಗೃಹ, ಕಾಶೀಪುರದ ಸ್ಮಶಾನ ಹಾಗೂ ದಕ್ಷಿಣೇಶ್ವರಕ್ಕೆ 'ತೀರ್ಥಯಾತ್ರೆ' ಮಾಡಿದರು. ಇದೇ ದಿನ ಸಂಜೆ ೫.೩೦ಕ್ಕೆ ಕೊಲ್ಕತ್ತೆಯ ಟೌನ್‌ಹಾಲ್‌ನಲ್ಲಿ ಆಯೋಜಿತವಾಗಿದ್ದ ಬೃಹತ್ ಸಭೆಯಲ್ಲಿಯೂ ವಿರಜಾನಂದರು ಪಾಲ್ಗೊಂಡರು. ಈ ಸಭೆಯ ಅಧ್ಯಕ್ಷತೆಯನ್ನು 'ಸಂತೋಷ್' ಎಂಬ ಸ್ಥಳದ ರಾಜನಾದ ಸರ್ ಮನ್ಮಥನಾಥ್ ರಾಯ್ ಚೌಧುರಿಯವರು ವಹಿಸಿದ್ದರು. ಪೂಜ್ಯ ಸ್ವಾಮಿ ಅಭೇದಾನಂದರು, ಶ್ರೀಯುತ ರಾಮಾನಂದ ಚಟ್ಟೋಪಾಧ್ಯಾಯರು, ಜೆ. ಆರ್. ವಂದ್ಯೋಪಾಧ್ಯಾಯರು, ನ್ಯಾಯಾಧೀಶರಾದ ಸರ್ ಮನ್ಮಥನಾಥ ಮುಖ್ಯೋಪಾಧ್ಯಾಯ ಹಾಗೂ ದಿವಾನ್ ಬಹಾದೂರ್ ರಾಮಸ್ವಾಮಿ ಮೊದಲಿಯಾರ್‌ರವರು ಭಾಷಣಗಳನ್ನು ಮಾಡಿದರು. ರಾಮಾನಂದ ಚಟ್ಟೋಪಾಧ್ಯಾಯರು ತಮ್ಮ ಭಾಷಣದಲ್ಲಿ, ''ಭಾರತವರ್ಷವು ಸಾಹಿತ್ಯ, ಕಲೆ, ದರ್ಶನಾದಿ ಶಾಸ್ತ್ರ ವಿಜ್ಞಾನ ಮುಂತಾದವುಗಳಲ್ಲಿ ಸಾಧನೆ ನಡೆಸಿದೆ. ದೇಶವಿದೇಶಗಳಲ್ಲಿ ತನ್ನ ಸಾಮ್ರಾಜ್ಯ ಸ್ಥಾಪಿಸಿ ಸಂಸ್ಕೃತಿಯನ್ನು ಹರಡಿದೆ. ಆದರೂ ಸಹ ನಮ್ಮ ಭಾರತದ ಚರಮ ಸಂಪತ್ತು ಚಿರಕಾಲದಿಂದಲೂ ಆಧ್ಯಾತ್ಮಿಕತೆಯೇ ಆಗಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳುವುದಾದರೆ, ಶ್ರೀರಾಮಕೃಷ್ಣರ ಜನ್ಮ ಶತಮಾನೋತ್ಸವವೇ ಭಾರತದ ಈ ವರ್ಷದ ಸರ್ವಶ್ರೇಷ್ಠ ಘಟನೆ ಎಂದು ಹೇಳಬಹುದಾಗಿದೆ'' ಎಂದರು.

ಅಧ್ಯಕ್ಷತೆ ವಹಿಸಿದ್ದ ಜ್ಞಾನರಂಜನ ವಂದ್ಯೋಪಾಧ್ಯಾಯರು ಮಾತನಾಡುತ್ತ ಹೀಗೆ ಹೇಳಿದರು: ''ಜನಸಾಮಾನ್ಯರ ಸೇವೆಯೇ ಮನುಷ್ಯನ ಪರಮಧರ್ಮ ಎಂಬ ಸತ್ಯವನ್ನು ಯಾರು ಅರಿತಿರುವರೋ ಅಂಥವರ ಪೈಕಿ ಶ್ರೀರಾಮಕೃಷ್ಣರೂ ಒಬ್ಬರು. ಹಾಗೂ ಈ ಸತ್ಯವು ಅವರ ಶಿಷ್ಯರಲ್ಲಿಯೂ ಸಹ ರೂಪುಗೊಂಡಿದೆ.'' ದಿವಾನ್ ಬಹಾದೂರ್ ರಾಮಸ್ವಾಮಿ ಮೊದಲಿಯಾರ್ ಹೇಳಿದರು, ''ದಕ್ಷಿಣ ಭಾರತದ ತರುಣರಲ್ಲಿ ಯಾವುದೇ ರೀತಿಯ ಪ್ರಾಣ ಸಂಚಾರವಾಗಿದ್ದರೆ ಅದು ಶ್ರೀರಾಮಕೃಷ್ಣ-ವಿವೇಕಾನಂದರ ಸಂದೇಶದಿಂದಲೇ. ಮದ್ರಾಸಿನಲ್ಲಿ ಸ್ವಾಮಿ ವಿವೇಕಾನಂದರು ನೀಡಿದ ಸಂದೇಶವು ಈಗಲೂ ನನ್ನ ಕಿವಿಯಲ್ಲಿ ಮೊಳಗುತ್ತಿದೆ. ಮದ್ರಾಸಿಗಳಾದ ನಾವು ಸ್ವಾಮಿ ವಿವೇಕಾನಂದರ ಮಹತ್ತ್ವವನ್ನು (ಮೊದಲು) ಗುರುತಿಸಿದ್ದೆವು ಎಂಬುದನ್ನು ನೆನೆದು ಹೆಮ್ಮೆಯಾಗುತ್ತಿದೆ. ಈ ದೇವಮಾನವನಿಂದಲೇ ನಾವು ಹಿಂದೂ ಸಭ್ಯತೆಯನ್ನೂ ಹಾಗೂ ಧರ್ಮದ ಆದಿ ಹಾಗೂ ಎಂದಿಗೂ ಬತ್ತದ ಅದರ ಉಗಮಸ್ಥಾನವನ್ನು ಕಂಡುಕೊಂಡಿರುವೆವು. ಇದೇ ಸ್ವಾಮಿ ವಿವೇಕಾನಂದರ ಶ್ರೇಷ್ಠ ಕೊಡುಗೆಯಾಗಿದೆ.''

ಫೆಬ್ರವರಿ ೨೪, ಸೋಮವಾರದಿಂದ ಹಿಡಿದು ಮಾರ್ಚ್ ೧ರವರೆಗೆ ಬೇಲೂರು ಮಠದಲ್ಲಿ ಶ್ರೀರಾಮಕೃಷ್ಣರ ಶತಮಾನೋತ್ಸವದ ಉದ್ಘಾಟನಾ ಸಮಾರಂಭಗಳು ಜರುಗಿದವು. ಮಾರ್ಚ್ ೧೧ರಂದು ಸ್ವಾಮಿ ವಿರಜಾನಂದರು, ಶುದ್ಧಾನಂದರು ಮತ್ತು ಇನ್ನಿತರ ಸಂನ್ಯಾಸಿಗಳೊಡನೆ ಕಾಂಕೂರ್‌ಗಾಛಿ ಯೋಗೋದ್ಯಾನಕ್ಕೆ ಹೋಗಿ ಬಂದರು.

ವಿರಜಾನಂದರು ಎರಡು ವರ್ಷದ ಮೇರೆಗೆ ಸೆಕ್ರೆಟರಿ ಸ್ಥಾನವನ್ನು ವಹಿಸಿಕೊಂಡಿದ್ದರು. ಮಾರ್ಚ್‌ನ ಕೊನೆಗೆ ಆ ಎರಡು ವರ್ಷಗಳು ಮುಗಿಯುವುದರಲ್ಲಿತ್ತು. ಈ ಜವಾಬ್ದಾರಿಯಿಂದ ಮುಕ್ತರಾಗಲು ವಿರಜಾನಂದರು ತುದಿಗಾಲಲ್ಲಿ ನಿಂತಿದ್ದರು. ಆದರೆ ಸಂಘಾಧ್ಯಕ್ಷರಾದ ಸ್ವಾಮಿ ಅಖಂಡಾನಂದರ ಒತ್ತಾಯದಿಂದಾಗಿ, ಎಷ್ಟೇ ಬೇಡವೆಂದರೂ ಸಹ ವಿರಜಾನಂದರೇ ಮತ್ತೆ ಎರಡು ವರ್ಷಗಳ ಮಟ್ಟಿಗೆ ಸೆಕ್ರೆಟರಿಯಾಗಿ ನೇಮಿಸಲ್ಪಟ್ಟರು. ಕೆಲವು ತಿಂಗಳು ಶ್ಯಾಮಲಾತಾಲ್‌ಗೆ ಹೋಗಿ ವಿಶ್ರಾಂತಿ ಪಡೆದು ಬರಲು ಅನುಮತಿ ಪಡೆದರು. ಜೂನ್ ೪ರಂದು ಹೊರಟು ೧೯೩೭ರ ಜನವರಿ ೩ ರಂದು ಹಿಂತಿರುಗಿದರು. ಶ್ಯಾಮಲಾತಾಲ್‌ನಲ್ಲಿರುವಾಗಲೇ ಜುಲೈ ತಿಂಗಳಲ್ಲಿ ಸ್ವಾಮಿ ಶುದ್ಧಾನಂದರು ಲಘು ಪಾರ್ಶ್ವವಾಯುವಿಗೆ ಒಳಗಾದ್ದಾರೆಂಬ ಸುದ್ದಿಯನ್ನು ಕೇಳಿದ್ದರು. ಹಿಂದಿರುಗಿ ಬರುವಷ್ಟರಲ್ಲಿ ಅವರು ಗುಣಮುಖರಾಗುತ್ತಿರುವುದನ್ನು ಕಂಡು ಸಮಾಧಾನಗೊಂಡರು. ೧೯೩೬ರ ನವೆಂಬರ್‌ನಲ್ಲಿ ಸ್ವಾಮೀಜಿಯವರ ಸಂನ್ಯಾಸಿ ಶಿಷ್ಯರಲ್ಲೊಬ್ಬರಾದ ಸ್ವಾಮಿ ಧೀರಾನಂದರ (ಕೃಷ್ಣಲಾಲ್ ಮಹಾರಾಜ್) ದೇಹತ್ಯಾಗವಾಗಿತ್ತು. ಈ ಹಿರಿಯ ಸಂನ್ಯಾಸಿಗಳು ಶ್ರೀಮಾತೆಯವರ ಸೇವೆಯನ್ನು ಬಹಳವಾಗಿ ಮಾಡಿದ್ದರು. ೧೯೦೧ರಲ್ಲಿ ಸ್ವಾಮೀಜಿಯವರು ಮೊದಲ ದುರ್ಗೋತ್ಸವವನ್ನು ನಡೆಸಿದ್ದಾಗ ಈ ಕೃಷ್ಣಲಾಲ್ ಮಹಾರಾಜರೇ ದೇವಿಯ ಅರ್ಚಕರಾಗಿದ್ದರು. ಇವರಿಗೆ ಎರಿಸಿಪಿಯಾಸ್ ಎಂಬ ರೋಗ ತಗುಲಿತ್ತು. 'ಉದ್ಬೋಧನ'ದಲ್ಲಿ ಇವರು ತಮ್ಮ ದೇಹತ್ಯಾಗ ಮಾಡಿದ್ದರು. *(ಮುಂದುವರಿಯುವುದು)*

ಯುವ ಚೈತನ್ಯದ ಸದ್ಬಳಕೆ

ಸರಗೂರು ರಮೇಶ್

ಮಾನವ ಜೀವನದ ಅತ್ಯಂತ ಮುಖ್ಯವಾದ ವಯೋಮಾನವೇ ಯೌವನ. ಈ ಅವಧಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಳ್ಳದಿದ್ದರೆ ನಮ್ಮ ಬದುಕು ವ್ಯರ್ಥವಾದಂತೆ. ಹೀಗೆ ಯೌವನವನ್ನು ಸದ್ಬಳಕೆ ಮಾಡಿಕೊಳ್ಳುವುದು ಹೇಗೆ? ಈ ಕುರಿತು ಚಿಂತಿಸಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಆಂಗ್ಲ ಉಪನ್ಯಾಸಕರು. ಕನ್ನಡ, ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಬರೆಯುವ ಹಾಗೂ ಭಾಷಣ ಮಾಡುವ ಅಪೂರ್ವ ಸಾಮರ್ಥ್ಯವನ್ನು ಅವರು ಹೊಂದಿದ್ದಾರೆ.



ನಮ್ಮ ಜೀವನದ ಅತ್ಯಂತ ವಿಷಾದಕರ ಸಂಗತಿ ಎಂದರೆ ನಮ್ಮ ಶಕ್ತಿಯೆಲ್ಲವೂ ವ್ಯರ್ಥವಾದ, ನೀರಸವಾದ ಚಟುವಟಿಕೆಗಳಲ್ಲಿ ಚೆಲ್ಲಿ ಚದುರಿಹೋಗುವುದು. ಅದರಲ್ಲಿಯೂ ಮಾನವ ಜೀವನದ ಸುವರ್ಣಘಟ್ಟವೆನಿಸಿರುವ ಯೌವನದಲ್ಲಿ ಕಾಲ ಮತ್ತು ಶಕ್ತಿಯ ಅಪವ್ಯಯವಾದರೆ ಜೀವನದಲ್ಲಿ ಸಾರ್ಥಕತೆಯನ್ನು ಹೊಂದುವುದು ಕಷ್ಟಸಾಧ್ಯ. ಆದ್ದರಿಂದ ಈ ವಿಷಯದಲ್ಲಿ ಜಾಗೃತಿಯೂ, ಮುಂಜಾಗರೂಕತೆಯೂ ಅತ್ಯಗತ್ಯ. ಇಂತಹ ಸಡಿಲವಾದ ಜೀವನಕ್ಕೆ ಮುಖ್ಯ ಕಾರಣ: ಜೀವನವನ್ನು ಸಂಪೂರ್ಣವಾಗಿ ವ್ಯಾಪಿಸಿಕೊಳ್ಳುವಂತಹ 'ಧ್ಯೇಯ' ಅಥವಾ 'ಗುರಿ'ಯನ್ನು ನಿರ್ಧರಿಸಿಕೊಳ್ಳಲು ಅಸಮರ್ಥವಾಗುವುದು. ಇದರಿಂದ ನಮ್ಮ ಭಾವನಾ ಶಕ್ತಿ, ಮಾನಸಿಕ ಶಕ್ತಿ, ಇಚ್ಛಾಶಕ್ತಿ, ಬೌದ್ಧಿಕ ಶಕ್ತಿ, ಕಲ್ಪನಾಶಕ್ತಿ ಮುಂತಾದ ಅಂತರಂಗದ ಸಾಮರ್ಥ್ಯಗಳು ವಿಕಾಸ ಹೊಂದದೆ ಮುದುಡಿಹೋಗುತ್ತವೆ. ಅಥವಾ ವ್ಯರ್ಥವಾದ ಆಸಕ್ತಿ ಮತ್ತು ಆಕರ್ಷಣೆಗಳ ದಾಳಿಗೆ ಸಿಲುಕಿ ನಿಷ್ಫಲವೂ, ನಿರರ್ಥಕವೂ ಆಗುತ್ತವೆ. ಆದ್ದರಿಂದ 'ಉನ್ನತವಾದ ಗುರಿ' ಮತ್ತು ಅದರೆಡೆಗೆ ಅವಿರತವಾದ ಪ್ರಯತ್ನವು ತಾರುಣ್ಯದ ಲಕ್ಷಣವಾಗಬೇಕು. ಇದನ್ನು ಸಾಧಿಸಲು ನಾವು ಬೆಳೆಸಿಕೊಳ್ಳಬೇಕಾದ ಒಂದು ಗುಣವೆಂದರೆ **'ಆತ್ಮಶ್ರದ್ಧೆ'**. ಸ್ವಾಮಿ ವಿವೇಕಾನಂದರು ಈ ವಿಚಾರದಲ್ಲಿ ನಮಗೆ ತಮ್ಮ ಸ್ಫೂರ್ತಿವಾಣಿಯಿಂದ ಎಚ್ಚರಿಸಿದ್ದಾರೆ:

''ಶ್ರದ್ಧೆ, ಶ್ರದ್ಧೆ, ನಮ್ಮಲ್ಲಿ ಶ್ರದ್ಧೆ, ಭಗವಂತನಲ್ಲಿ ಶ್ರದ್ಧೆ — ಇದೇ ಘನತೆಯ ರಹಸ್ಯ . ನಿಮ್ಮಲ್ಲಿ ನೀವು ಶ್ರದ್ಧೆಯನ್ನು ಹೊಂದಿ; ಆ ಶ್ರದ್ಧೆಯನ್ನು ಆಧರಿಸಿ ನಿಂತು ಬಲಿಷ್ಠರಾಗಿ.''

ನಾವು ಹಿಡಿದ ಕಾರ್ಯದಲ್ಲಿ, ಆಯ್ದುಕೊಂಡ ಮಾರ್ಗದಲ್ಲಿ ಜಯಶಾಲಿಗಳಾಗಲು ನಮ್ಮೊಳಗೆ ಪ್ರಚಂಡ ಕಾರ್ಯನಿಷ್ಠೆ ಮತ್ತು ಅಗಾಧವಾದ ಇಚ್ಛಾಶಕ್ತಿ ಇರಬೇಕು. ನಂತರ ಪರಿಶ್ರಮಿಸಿ ದುಡಿಯಬೇಕು. ಆದರೆ ನಮ್ಮ ಕನಸು ನನಸಾಗಲು ನಾವು ಮಿದುಳಿನಲ್ಲಿ ನಕಾರಾತ್ಮಕ ಚಿಂತನೆಗಳನ್ನು ನಿರಾಕರಿಸಿ, ಧನಾತ್ಮಕವಾದ ಉನ್ನತ ಆಲೋಚನೆಗಳಿಗೆ ಪ್ರೋತ್ಸಾಹ ನೀಡಬೇಕು. ''ಶ್ರದ್ಧಾ

ಯುತವೂ, ಬಲಯುತವೂ, ಉಪಯುಕ್ತವೂ ಆದ ಆಲೋಚನೆಗಳು ಬಾಲ್ಯದಿಂದಲೂ ಮಿದುಳಿನಲ್ಲಿ ಪ್ರವೇಶಮಾಡಲಿ. ಈ ಆಲೋಚನೆಗಳಿಗೆ ನಿಮ್ಮನ್ನು ನೀವು ತೆರೆದುಕೊಳ್ಳಿ'' ಎಂದು ಸ್ವಾಮಿ ವಿವೇಕಾನಂದರು ಯುವಕರಿಗೆ ಕಿವಿಮಾತು ಹೇಳುತ್ತಾರೆ.

ಮಾನಸಿಕ ಆಯಾಮವು ವಿಸ್ತಾರವಾಗಲು, ಮತ್ತು ಬೌದ್ಧಿಕ ಶಕ್ತಿಯು ತೀಕ್ಷ್ಣವಾಗಲು ಯುವಕರು ಉತ್ತಮವಾದ ಸದ್ಗ್ರಂಥಗಳ ಅಧ್ಯಯನದಲ್ಲಿ ಆಳವಾದ ಆಸಕ್ತಿಯನ್ನು ಬೆಳೆಸಿಕೊಳ್ಳುವುದು ಜೀವಪೋಷಕವಾದುದು. ವಿದ್ಯುತ್ ಹರಿದ ನಂತರ ಬಲ್ಬು ಬೆಳಗುವಂತೆ, ಮಹಾಪುರುಷರ ವಿದ್ಯುತ್‌ವಾಣಿ ಪ್ರವೇಶಿಸಿದ ನಂತರ ನಮ್ಮ ಮನಸ್ಸು ಪ್ರಕಾಶಿಸಲಾರಂಭಿಸುತ್ತದೆ.

''ಮಾನವನ ಗುರಿ ಸುಖವಲ್ಲ , ಜ್ಞಾನ'' ಎಂದು ಮಾರ್ಗದರ್ಶನ ಮಾಡಿದ್ದಾರೆ ಸ್ವಾಮಿ ವಿವೇಕಾನಂದರು. ''ಕೊಲಂಬೊ ಇಂದ ಆಲ್ಮೋರಕೆ'' ಎಂಬ ಲೇಖನದಲ್ಲಿ ರಾಷ್ಟ್ರಕವಿ ಕುವೆಂಪು ಹೀಗೆ ಹೇಳಿದ್ದಾರೆ: ''ನನ್ನ ತಾರುಣ್ಯ ಸ್ವಾಮಿ ವಿವೇಕಾನಂದರಿಗೆ ಎಷ್ಟು ಋಣಿಯಾಗಿತ್ತೆಂದು ನಾನು ಹೇಳಿ ಪೂರೈಸಲಾರೆ. ಹಿಂದೂ ಧರ್ಮದ ವೈಶಾಲ್ಯದ ಮತ್ತು ವೇದಾಂತ ತತ್ತ್ವದ ಗಭೀರತೆಯ ಪರಿಚಯ ಸರ್ವಸಾಮಾನ್ಯವೂ ಸರ್ವಸುಲಭಗ್ರಾಹ್ಯವೂ ಆಗಬೇಕಾದರೆ ಸ್ವಾಮೀಜಿಯ ಉಪನ್ಯಾಸಗಳನ್ನು ಬಿಟ್ಟರೆ ಬೇರಾವುದೂ ಇಲ್ಲ. ಸಂಕುಚಿತ ಮತಭಾವಗಳನ್ನು ಕತ್ತರಿಸಿ ಕೆಡಹಿ, ಮನಸ್ಸಿನಲ್ಲಿ ಉದಾತ್ತ ಸಮನ್ವಯ ದೃಷ್ಟಿಯನ್ನು ಪ್ರಜ್ವಲಿಸುವ ಶಕ್ತಿ ಈ ಉಪನ್ಯಾಸಗಳಲ್ಲಿ ಇರುವಂತೆ ಬೇರೆಲ್ಲಿಯೂ ಇಲ್ಲ.''

ಇಂದು ಆಕರ್ಷಣೆಗಳ ಸುಳಿಗಳು ಸಾವಿರಾರು; ಮೊಬೈಲ್, ಟಿ.ವಿ., ಕಂಪ್ಯೂಟರ್ ಮುಂತಾದ ಉಪಕರಣಗಳ ಆಕ್ರಮಣ ತುಂಬಾ ಪರಿಣಾಮಕಾರಿ. ಸಿನಿಮಾ ಮತ್ತು ರಾಜಕೀಯದ ಅಬ್ಬರ ಅಪಾರ. ಕಂಗೆಡಿಸುವ ಕೋಲಾಹಲಕಾರಿ ಚರ್ಚೆಗಳು, ಮಾತುಗಳಿಗೆ ಮಿತಿಯಿಲ್ಲ. ಅನೇಕ ಅನಿಷ್ಟಗಳ ಆವರ್ತಗರ್ತದಲ್ಲಿ ಸಿಲುಕಿ ಅಲೆಯುವ ಯುವಕರ ಮನಸ್ಸು ಚಾರಿತ್ರ್ಯಶಕ್ತಿಯನ್ನೂ, ಚಾರಿತ್ರ್ಯ ಶುದ್ಧಿಯನ್ನೂ ಬೆಳೆಸಿಕೊಂಡು ಜೀವನರಂಗಕ್ಕೆ ಧುಮುಕಬೇಕಾದರೆ 'ವಿವೇಕ ಬುದ್ಧಿ'ಯನ್ನು ನಿರಂತರ ಕೃಷಿಮಾಡಬೇಕಾಗಿದೆ. ವ್ಯರ್ಥವಾದ ಸದ್ದು, ಗದ್ದಲ, ಸಂತೆಯ ನಡುವೆ ಅರ್ಥಪೂರ್ಣವಾದ ಕಲೆ, ಸಾಹಿತ್ಯ , ಸಂಸ್ಕೃತಿಗಳು ಮೂಲೆಹಿಡಿದು ಬಿಡುವ ಸಾಧ್ಯತೆಗಳೇ ಹೆಚ್ಚು. ಆದ್ದರಿಂದ ನಾವು ಜಾಗರೂಕತೆಯಿಂದ ಸಂಸ್ಕೃತಿ ಪೋಷಕವಾದ ಕಲೆ-ಸಾಹಿತ್ಯಗಳಲ್ಲಿ ಅಭಿರುಚಿಯನ್ನು ಬೆಳೆಸಿಕೊಳ್ಳಲೇಬೇಕು. ಇದರಿಂದ ಜೀವನದ ಭಿನ್ನ ಭಿನ್ನ ಆಯಾಮಗಳ ಪರಿಚಯವಾಗಿ, ನಮ್ಮೊಳಗಿನ ಮಾನವೀಯತೆ ಉದಾತ್ತವಾಗುತ್ತದೆ. ನಮ್ಮ ಚಾರಿತ್ರ್ಯವು ತೇಜಸ್ವಿಯೂ, ಓಜಸ್ವಿಯೂ ಆಗುತ್ತದೆ.

ಸ್ವಾಮಿ ವಿವೇಕಾನಂದರಿಗೆ ಯುವಜನತೆಯ ಸಾಮರ್ಥ್ಯ ಮತ್ತು ಸಾಧ್ಯತೆಗಳನ್ನು ಕುರಿತು ಅಪಾರವಾದ ಭರವಸೆಯಿತ್ತು . ಈ ದೇಶವನ್ನು ಪರಿವರ್ತಿಸುವವರು ಯುವಕರು ಎಂದು ಅವರು ನಂಬಿದ್ದರು. ''ಶೀಲವಂತರಾದ, ಬುದ್ಧಿವಂತರಾದ, ತಮ್ಮ ಸರ್ವಸ್ವವನ್ನೂ ತ್ಯಾಗಮಾಡುವಂತಹ, ವಿಧೇಯರಾಗಿರುವ, ನನ್ನ ಭಾವನೆಗಳನ್ನು ಕಾರ್ಯರೂಪಕ್ಕೆ ತರಲು ತಮ್ಮ ಪ್ರಾಣವನ್ನೇ ಅರ್ಪಿಸಬಲ್ಲ ಯುವಕರ ಮೇಲೆ ನನ್ನ ಭವಿಷ್ಯದ ಹಾರೈಕೆಯೆಲ್ಲಾ ನಿಂತಿದೆ. ಅದರಿಂದ ದೇಶಕ್ಕೂ ಅವರಿಗೂ ಕಲ್ಯಾಣವಾಗುವುದು,'' ಎಂದು ಸ್ವಾಮೀಜಿ ನುಡಿದಿದ್ದಾರೆ. ದೇಹದಲ್ಲಿ ಶಕ್ತಿ ಇಲ್ಲದೆ, ಎದೆಯಲ್ಲಿ ಉತ್ಸಾಹವಿಲ್ಲದೆ, ಮಿದುಳಿನಲ್ಲಿ ಸ್ವತಂತ್ರವಾದ ಆಲೋಚನಾ ಶಕ್ತಿಯಿಲ್ಲದೆ ನಾವು ಜಡದ ಮುದ್ದೆಗಳಾಗಿಬಿಡುವ ಸಾಧ್ಯತೆಯಿದೆ ಎಂದು ಸ್ವಾಮಿ ವಿವೇಕಾನಂದರು ನಮ್ಮನ್ನು ಎಚ್ಚರಿಸುತ್ತಾರೆ.

ತಕ್ಷಣ ಸಿಗುವ ತಾತ್ಕಾಲಿಕ ಫಲಗಳಿಗೆ ನಾವು ದಾಸರಾಗಿ ಹೋಗಿದ್ದೇವೆ. ಎಲ್ಲವೂ ತಕ್ಷಣ ದೊರಕಿಬಿಡಬೇಕೆಂಬ ಧಾವಂತ ನಮ್ಮದು. ಈ ಅವಸರ, ವೇಗ, ಚಡಪಡಿಕೆ ನಮ್ಮನ್ನು ವಿವೇಕ ಶೂನ್ಯರನ್ನಾಗಿ ಮಾಡುತ್ತಿದೆ. ದೃಢವಾದ ಆತ್ಮವಿಶ್ವಾಸವು ಬೆಳೆಯದಂತೆ ಮಾಡಿದೆ. ಆದರೆ ದೃಢಚಿತ್ತದಿಂದ, ತಾಳ್ಮೆಯಿಂದ ದೀರ್ಘಕಾಲ ಸಾಧನೆ ಮಾಡದೆ ಯಾವ ಮಹೋನ್ನತ ಆದರ್ಶವನ್ನೂ ಸಾಧಿಸಲಾರೆವು. ಇಲ್ಲಿ ಅಪಾರವಾದ ಸಹನೆಯನ್ನು ಇಚ್ಛಾಶಕ್ತಿಯ ಜೊತೆಗೆ ಬೆಳೆಸಿಕೊಂಡು ದುಡಿಯಬೇಕಾಗಿದೆ. ಅಲ್ಪಕಾಲದಲ್ಲಿ ಫಲಿತಾಂಶ ದೊರೆಯದಿದ್ದರೂ ಹತಾಶರಾಗದೆ ಮುಂದುವರಿಯುವ ದೃಢಸಂಕಲ್ಪವನ್ನು ನಾವು ಬೆಳೆಸಿಕೊಳ್ಳಬೇಕು. ಕುವೆಂಪುರವರು ಹೇಳುತ್ತಾರೆ: ''ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು; ಕಲ್ಲಿದ್ದಲ ಕಾವಾಗಬೇಕು.'' 'ಪಾಂಚಜನ್ಯ' ಎಂಬ ಕವನದಲ್ಲಿ ಯುವಕರಿಗೆ ಕುವೆಂಪು ಕೊಡುವ ವೀರ ಆಮಂತ್ರಣ ವಿದು:

ನಡೆ ಮುಂದೆ, ನಡೆ ಮುಂದೆ
ನುಗಿ ನಡೆ ಮುಂದೆ!
ಜಗ್ಗದೆಯೆ, ಕುಗ್ಗದೆಯೆ,
ಹಿಗ್ಗಿ ನಡೆ ಮುಂದೆ !

.... ನೆಚ್ಚುಗೆಡಬೇಡ ನಡೆ,
ಕೆಚ್ಚೆದೆಯ ಕಲಿಯೆ !
ಬೆಚ್ಚಿದರೆ, ಬೆದರಿದರೆ,
ಕಾಳಿಗದು ಬಲಿಯೆ ?

ಜಗತ್ತಿನ ಮಹಾಪುರುಷರ ಜೀವನಚರಿತ್ರೆಗಳನ್ನು ಅಧ್ಯಯನ ಮಾಡಿ ಜೀವನ ದೃಷ್ಟಿಯನ್ನು ವಿಸ್ತಾರ ಮಾಡಿಕೊಳ್ಳುವುದು ಯುವಕರ ಬೆಳವಣಿಗೆಗೆ ಅಪರಿಹಾರ್ಯವಾದುದು. ಮನಸ್ಸು-ಹೃದಯಗಳಲ್ಲಿ ಆದರ್ಶ ವ್ಯಕ್ತಿಗಳ ಬಗ್ಗೆ ಗೌರವ, ಪ್ರೀತಿ ಮತ್ತು ಆರಾಧನಾಭಾವವನ್ನು ಅಗತ್ಯವಾಗಿ ಬೆಳೆಸಿಕೊಳ್ಳಬೇಕು. ಅವರು ಬಿಟ್ಟುಹೋದ ಸಾಧನಾ ಮಾರ್ಗದ 'ಹೆಜ್ಜೆ ಗುರುತು'ಗಳನ್ನು ಪತ್ತೆಹಚ್ಚಿ ಹಿಂಬಾಲಿಸುತ್ತಾ ಬೆಳೆಯಬೇಕು. ಇದು ದೌರ್ಬಲ್ಯವೂ ಅಲ್ಲ, ಹೇಡಿತನವೂ ಅಲ್ಲ ಎಂಬ ಸತ್ಯವನ್ನು ಮನಗಾಣಬೇಕು. ಆಗ ಆ ಸತ್ಪುರುಷರಲ್ಲಿರುವ 'ಘನತೆ'ಯು ನನ್ನೊಳಗೂ ಸುಪ್ತ

ವಾಗಿದೆ; ನನ್ನೊಳಗಿನ ಮಹಿಮೆಯು ವಿಕಾಸವಾಗಿ ಪ್ರಕಾಶಗೊಳ್ಳ ಬಲ್ಲದು ಎಂದು ತಿಳಿಯಬೇಕು. ಇದಕ್ಕೆ ಸಂಬಂಧಿಸಿದಂತೆ ಅಮೆರಿಕಾದ ಆಂಗ್ಲಕವಿ H.W.Longfellow ಎಂಬಾತ A Psalm of Life ಎಂಬ ಕವನದಲ್ಲಿ ಹೇಳಿರುವ ಸಾಲುಗಳು ಜಗತ್ಪ್ರಸಿದ್ಧವಾಗಿವೆ:

Lives of great men all remind us
We can make our lives sublime,
And, departing, leave behind us
Footprints on the sands of time;

ಜೀವನವೆಂದರೆ ಕರ್ಮಕ್ಷೇತ್ರ. ಕರ್ಮವು ಇಲ್ಲಿ ಅನಿವಾರ್ಯ. ಪ್ರಯತ್ನವಿಲ್ಲದೆ ಸುಮ್ಮನೆ ಕುಳಿತು ಸುಖಸಮೃದ್ಧಿಯನ್ನು ಅನುಭವಿಸಬೇಕೆಂಬ ಹುಚ್ಚುಹಂಬಲವನ್ನು ತೊರೆಯಬೇಕು. ಸತ್ಕರ್ಮಗಳಲ್ಲಿ ತೊಡಗುವುದರಿಂದಲೇ ನಮ್ಮ ಸಾಮರ್ಥ್ಯಗಳು ವೃದ್ಧಿಸುತ್ತಾ ಹೋಗುತ್ತವೆ. ನಾವು ಬೆಳೆದು ಬೆಳಗಬೇಕಾದರೆ ಅದು ಕ್ರಿಯಾಶೀಲರಾಗಿದ್ದಾಗ ಮಾತ್ರ ಸಾಧ್ಯ. ಒಂದು ನಿಶ್ಚಿತವಾದ ಗುರಿಯನ್ನು ಮುಟ್ಟುವವರೆಗೂ ಸತತವಾದ ಪ್ರಯತ್ನ ಬೇಕೇ ಬೇಕು. ಸೋಲಿನಿಂದ ಕಂಗೆಡದೆ, ಎದೆಗುಂದದೆ ಮರಳಿ ಮರಳಿ ಆಶಾವಾದಿಯಾಗಿ ಪ್ರಯತ್ನಿಸಬೇಕು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ನಿಮ್ಮ ಭಾಗ್ಯದ ದಿನಗಳನ್ನು ರೂಪಿಸಿಕೊಳ್ಳುವವರು ನೀವೇ! ಏದ್ದೇಳಿ, ಧೀರರಾಗಿ! ಬಲಾಢ್ಯರಾಗಿ! ಎಲ್ಲ ಬಗೆಯ ಹೊಣೆಗಾರಿಕೆಯನ್ನೂ ನೀವೇ ಕೈಗೆ ತೆಗೆದುಕೊಳ್ಳಿ. ನಿಮ್ಮ ಭವಿಷ್ಯದ ನಿರ್ಮಾಪಕರು ನೀವೇ ಎಂಬುದು ನಿಮಗೆ ತಿಳಿದಿರಲಿ. ನಿಮಗೆ ಅಗತ್ಯವಿರುವ ಶಕ್ತಿ, ಸಹಾಯ, ಸಾಮರ್ಥ್ಯಗಳೆಲ್ಲ ನಿಮ್ಮೊಳಗೆಯೇ ಇವೆ. ಆದ್ದರಿಂದ ನಿಮ್ಮ ಭವಿಷ್ಯವನ್ನು ನೀವೇ ರೂಪಿಸಿಕೊಳ್ಳಿ.''

ನಮ್ಮ ಆತ್ಮವನ್ನು ನಾವು ಸ್ವಾನುಭವದಿಂದ ತಿಳಿದು ''ಆತ್ಮಸಾಕ್ಷಾತ್ಕಾರ'' ಮಾಡಿಕೊಂಡರೆ ನಮ್ಮ ಜೀವನವು ಪೂರ್ಣಗೊಂಡು ಸಾರ್ಥಕತೆ ಪಡೆಯುತ್ತೇವೆ ಎಂದು ಎಲ್ಲ ಮಹಾಪುರುಷರು ಸಾರಿರುತ್ತಾರೆ. ಆತ್ಮನಿಗೆ ಸಂಬಂಧಿಸಿದ ವಿಷಯವನ್ನು 'ಆಧ್ಯಾತ್ಮಿಕ' ಎನ್ನುತ್ತಾರೆ. ಆದ್ದರಿಂದ ಈ ವಿಷಯದಲ್ಲಿ ನಾವು ಬೆಳೆಸಿಕೊಳ್ಳುವ ಮಾನಸಿಕ ಬಲವನ್ನು 'ಆಧ್ಯಾತ್ಮಿಕ ಮನೋಭಾವ' ಎನ್ನಬಹುದು. ಆಧುನಿಕ ಕಾಲದ ಸಮಾಜ ಮತ್ತು ಸಂಕೀರ್ಣತೆಯಲ್ಲಿ ಸಂತೋಷ ಮತ್ತು ಸಹನೆಯಿಂದ ಬದುಕಲು ಈ ಆಧ್ಯಾತ್ಮಿಕ ಮನೋಭಾವವು ಸರ್ವರಿಗೂ ಅಗತ್ಯ ಎಂದು ನಿಸ್ಸಂದೇಹವಾಗಿ ಹೇಳಬಹುದು. ನಮ್ಮ ಎಲ್ಲ ದೈಹಿಕ ಮತ್ತು ಮಾನಸಿಕ ಕ್ರಿಯೆಗಳ ಹಿಂದೆ ಇದ್ದು, ಅವುಗಳನ್ನು ನಿಯಂತ್ರಿಸುವ ಮತ್ತು ನಿರ್ದೇಶಿಸುವ ಶಕ್ತಿಯನ್ನೇ 'ಆತ್ಮ' ಎಂದು ಕರೆಯುವುದು. ನಮ್ಮ ಅಂತರ್ಯದಲ್ಲಿರುವ ಈ ದಿವ್ಯತೆಯನ್ನು ಜೀವನದಲ್ಲಿ ಅಭಿವ್ಯಕ್ತಿಸಲು ನಿರಂತರ ಪರಿಶ್ರಮಿಸಬೇಕು ಎಂಬ ಸಂದೇಶವನ್ನು ಸ್ವಾಮಿ ವಿವೇಕಾನಂದರು ಮನುಕುಲಕ್ಕೆ ನೀಡಿದ್ದಾರೆ.

ಆಶಿಷ್ಠರೂ, ದೃಢಿಷ್ಠರೂ, ಬಲಿಷ್ಠರೂ ಆದ ಯುವಕರಾಗಿ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ನಾವು ಪಾಲ್ಗೊಳ್ಳಬೇಕಾದರೆ ಭಾವಶುದ್ಧಿ, ಜ್ಞಾನಾಕಾಂಕ್ಷೆ, ಆತ್ಮವಿಶ್ವಾಸ, ಮಾನಸಿಕ ಏಕಾಗ್ರತೆ, ದೀರ್ಘಪ್ರಯತ್ನ, ಚಾರಿತ್ರ್ಯಶುದ್ಧಿ, ಸ್ವಾರ್ಥದ ಪರಿಧಿಯಿಂದ ಆಚೆಗೆ ನಮ್ಮನ್ನು ಒಯ್ಯುವ ಸೇವಾತತ್ಪರತೆ ಮತ್ತು ಆಧ್ಯಾತ್ಮಿಕ ಮನೋಭಾವ ಎಲ್ಲವೂ ಬೇಕು. ಜೀವನದಲ್ಲಿ ಉತ್ಕೃಷ್ಟವಾದ ಅಭೀಪ್ಸೆ ಅಥವಾ ಹಂಬಲ ನಮ್ಮಲ್ಲಿ ಉದಯಿಸುವ ತನಕ, ನಮ್ಮ ಸ್ವಭಾವ ಮತ್ತು ಮನಸ್ಸುಗಳಲ್ಲಿ ಬೇರುಬಿಟ್ಟಿರುವ ಹೀನ ಸಂಸ್ಕಾರಗಳೊಂದಿಗೆ ಸೂಕ್ಷ್ಮವೂ ಸತತವೂ ಆದ ಹೋರಾಟ ನಡೆಯಬೇಕು. ನಿರ್ಭೀತರಾಗಿ ಅವುಗಳನ್ನು ಎದುರಿಸಬೇಕು. ಅಂತಹ ದೃಢ ಪ್ರಯತ್ನದಿಂದ ಯಾವ ವ್ಯಕ್ತಿಯು ಹೋರಾಡುತ್ತಾನೋ ಅವನು ಅಂತಿಮ ಜಯವನ್ನೂ ಸತ್ಯವಾಗಿ ಪಡೆಯುವನು ಎಂದು ವೀರ ವೇದಾಂತಿ ಸ್ವಾಮಿ ವಿವೇಕಾನಂದರು ಘೋಷಿಸಿದ್ದಾರೆ.



ಮುಖಚಿತ್ರದ ವಿವರಣೆ: ಮರು ಮರೀಚಿಕೆ

''ನಾನು ಒಮ್ಮೆ.. ಹಲವು ದಿನಗಳವರೆಗೆ ಮರಳುಗಾಡಿನಲ್ಲಿ ಅಲೆದಾಡುತ್ತಿದ್ದೆ.. ಪ್ರತಿದಿನ ಸುಂದರವಾದ ಒಂದು ಸರೋವರವನ್ನೂ ಅದರ ಸುತ್ತ ಮರಗಳನ್ನೂ ನೋಡಿ ಆಶ್ಚರ್ಯವಾಯಿತು. ಒಂದು ದಿನ ಬಾಯಾರಿಕೆಯಾಗಿ, ನೀರು ಕುಡಿಯಬೇಕು ಅನ್ನಿಸಿತು. ಸ್ಪಷ್ಟವಾಗಿ ಕಾಣುತ್ತಿದ್ದ ಸುಂದರ ಸರೋವರದ ತೀರಕ್ಕೆ ಹೊರಟೆ. ನಾನು ಸಮೀಪಿಸುತ್ತಲೆ ಅದು ಮಾಯವಾಯಿತು. ತಕ್ಷಣ ನನಗೆ, 'ನಾನು ಇಡೀ ಜೀವನ ಓದಿದ ಮರೀಚಿಕೆ ಇದು' ಎಂದು ಭಾಸವಾಯಿತು.

''ನಾವೆಲ್ಲ ಪ್ರಪಂಚವೆಂಬ ಮರೀಚಿಕೆಯಲ್ಲಿ ದಿನಗಟ್ಟಲೆ, ತಿಂಗಳುಗಟ್ಟಲೆ, ವರ್ಷಗಟ್ಟಲೆ ಸಂಚರಿಸುತ್ತಿರುವೆವು. ಆದರೂ ಇದು ಮರೀಚಿಕೆ ಎಂಬ ಅರಿವಿಲ್ಲ. ಒಂದು ದಿನ ಅದು ಮಾಯವಾಗುವುದು. ಆದರೆ ಪುನಃ ಅದು ಬರುವುದು. ದೇಹಕ್ಕೆ ಹಿಂದಿನ ಕರ್ಮವಿಶೇಷವಿರುವುದು. ಆದ ಕಾರಣವೆ ಮರೀಚಿಕೆ ತೋರುವುದು. ನಾವು ಎಲ್ಲಿಯವರೆಗೆ ಕರ್ಮಕ್ಕೆ ಬದ್ಧರೋ ಅಲ್ಲಿಯವರೆಗೆ ಪ್ರಪಂಚವೂ ಇರುವುದು. ಸ್ತ್ರೀ, ಪುರುಷ, ಪ್ರಾಣಿ, ಸಸ್ಯ, ನಮ್ಮ ಆಸಕ್ತಿ, ಕರ್ತವ್ಯ ಇವೆಲ್ಲ ಪುನಃ ಹಿಂದಿರುಗಿ ಬರುವುವು. ಆದರೆ ಹಿಂದಿನಷ್ಟು ಪ್ರಬಲವಾಗಿ ಬರುವುದಿಲ್ಲ. ಹೊಸ ಜ್ಞಾನದ ಪ್ರಭಾವದಿಂದ ಕರ್ಮವೇಗ ತಗ್ಗುವುದು, ಅದರ ವಿಷ ಹೋಗುವುದು. ಅದು ಬೇರೆ ರೂಪವನ್ನು ತಾಳುವುದು. ಅದರೊಂದಿಗೆ ಅದರ ನೈಜಸ್ವಭಾವವಾದ ಜ್ಞಾನ ಬರುತ್ತದೆ. ಸತ್ಯಕ್ಕೆ ಮತ್ತು ಮಿಥ್ಯೆಗೆ ಇರುವ ವ್ಯತ್ಯಾಸ ಗೊತ್ತಾಗುವುದು.''

— ಸ್ವಾಮಿ ವಿವೇಕಾನಂದ, 'ಜ್ಞಾನಯೋಗ', ಪು. ೨೧೩

ಆನಂದದ ಹುಡುಕಾಟ - ೫

ಮೂಲ ಹಿಂದೀ : ಸ್ವಾಮಿ ಬ್ರಹ್ಮೇಶಾನಂದ

ಅನುವಾದ : ಮಾತಾ ತ್ಯಾಗಮಯೀ



ಜೀವನದ ಗುರಿ

ಸಾರ್ಥಕ ಜೀವನವನ್ನು ನಡೆಸಬೇಕಾದರೆ ಅದರ ಗುರಿಯನ್ನು ನಿರ್ಧರಿಸುವುದು ಅತ್ಯಂತ ಆವಶ್ಯಕ. ಹೆಚ್ಚಿನ ಜನರು ವಿದ್ಯಾಭ್ಯಾಸ, ವಿವಾಹ, ಕುಟುಂಬ ನಿರ್ವಹಣೆ ಮತ್ತು ಭೋಗ ಸುಖಗಳಲ್ಲಿ ಜೀವನವನ್ನು ಮುಗಿಸಿಬಿಡುತ್ತಾರೆ. ಇಂದ್ರಿಯಸುಖ ಭೋಗಗಳ ಆಸಕ್ತಿಯಲ್ಲೇ ಅವರು ಬಂಧಿತರಾಗುತ್ತಾರೆ. ಅವರ ಜೀವನಕ್ಕೆ ಉನ್ನತ ಗುರಿ ಇರುವುದಿಲ್ಲ. ಚಿಂತನಶೀಲನಾದ ಉಚ್ಚಕೋಟಿಯ ಮನುಷ್ಯ ಈ ಬಗೆಯ ಜೀವನದಿಂದ ತೃಪ್ತನಾಗುವುದಿಲ್ಲ. ಸರ್ವಗ್ರಾಹಿಯಾದ ಮೃತ್ಯು ಕ್ಷಣಕ್ಷಣವೂ ಹೊಂಚುಹಾಕುತ್ತಿದ್ದಾನೆ ಎಂಬ ಸತ್ಯ ಅವನಿಗೆ ನೆಮ್ಮದಿಯಾಗಿರಲು ಬಿಡುವುದಿಲ್ಲ. ಅವನು ಜೀವನದ ಉನ್ನತ ಅರ್ಥವನ್ನು ಅರಸುತ್ತಿರುತ್ತಾನೆ. ಬುದ್ಧ, ಕ್ರಿಸ್ತ, ಮಹಾವೀರರು ಈ ಗುಂಪಿಗೆ ಸೇರಿದವರು. ಅವರು ಮಾನವನಿಗೆ ಬದುಕನ್ನು ಸಾರ್ಥಕಗೊಳಿಸುವ ಗುರಿಯನ್ನು ತಿಳಿಯಪಡಿಸಿದ್ದಾರೆ. ಈ ಯುಗದಲ್ಲಿ ಶ್ರೀರಾಮಕೃಷ್ಣರು ಮತ್ತು ಸ್ವಾಮಿ ವಿವೇಕಾನಂದರು ಈ ಕಾರ್ಯವನ್ನು ಮಾಡಿರುವರು.

ಶ್ರೀರಾಮಕೃಷ್ಣರು ಹೇಳಿರುವಂತೆ ಮಾನವ ಜೀವನದ ಗುರಿ ಭಗವಂತನ ಸಾಕ್ಷಾತ್ಕಾರ. ನಾವು ಇನ್ನೊಬ್ಬರನ್ನು ಸ್ಪಷ್ಟವಾಗಿ ನೋಡುವಂತೆ, ಅವರೊಂದಿಗೆ ಮಾತನಾಡುವಂತೆ ಭಗವಂತನೊಂದಿಗೆ ಮಾತನಾಡಬಹುದು, ಅವನನ್ನು ನೋಡಬಹುದು. ಇದೇ ಮಾನವ ಜೀವನದ ಗುರಿ. ಸ್ವಾಮಿ ವಿವೇಕಾನಂದರ ಪ್ರಕಾರ ಪ್ರತಿಯೊಬ್ಬ ಜೀವಿಯೂ ದೇವನೇ ಆಗಿದ್ದಾನೆ. ಆಂತರಿಕ-ಬಾಹ್ಯ ಪ್ರಕೃತಿ ನಿಗ್ರಹದಿಂದ ಈ ದೈವತ್ವವನ್ನು ಅಭಿವ್ಯಕ್ತಿಗೊಳಿಸುವುದೇ ಮನುಷ್ಯ ಜೀವನದ ಗುರಿ. ಶ್ರೀಮಾತೆಯವರೂ ಇದೇ ಮಾನವ ಜೀವನದ ಗುರಿ ಎಂದು ಒಪ್ಪುತ್ತಾರೆ, ಜೊತೆಗೆ ವಾಸನೆಗಳನ್ನು ನಾಶಗೊಳಿಸಬೇಕು ಎಂಬ ವಿಚಾರಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಅವರ ಪ್ರಕಾರ ನಿರ್ವಾಸನೆಯನ್ನು ಪಡೆಯುವುದೇ ಜೀವನದ ಗುರಿ ಎಂದು ಹೇಳಿದರೆ ತಪ್ಪಾಗಲಾರದು. ಪುರಾತನ ಆಚಾರ್ಯರಾದ ಬುದ್ಧ ಮತ್ತು ಯೋಗಾಚಾರ್ಯ ಪತಂಜಲಿಯ ಉಪದೇಶಗಳನ್ನು ನಾವು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಬುದ್ಧನ ಪ್ರಕಾರ ದುಃಖನಿವೃತ್ತಿ ಮತ್ತು ನಿರ್ವಾಣಪ್ರಾಪ್ತಿ ಜೀವನದ ಗುರಿ. ಪತಂಜಲಿಯ ಪ್ರಕಾರ ಚಿತ್ತವೃತ್ತಿನಿರೋಧದಿಂದ ತನ್ನ ಸ್ವರೂಪದಲ್ಲಿ ಪ್ರತಿಷ್ಠಿತನಾಗುವುದು ಜೀವನದ ಗುರಿ.

ಮಹಾಪುರುಷರ ಈ ಮಾತುಗಳಲ್ಲಿ ಮೇಲ್ನೋಟಕ್ಕೆ ನಮಗೆ ವಿರೋಧವೆಂಬಂತೆ ಕಾಣುತ್ತದೆ. ಒಬ್ಬರು ಭಗವತ್ ಪ್ರಾಪ್ತಿಗೆ ಪ್ರಾಮುಖ್ಯತೆ ನೀಡಿದರೆ, ಇನ್ನೊಬ್ಬರು ದುಃಖನಿವೃತ್ತಿಗೆ, ಇನ್ನೊಬ್ಬರು ಸ್ವ-ಸ್ವರೂಪ ಅನುಸಂಧಾನಕ್ಕೆ, ಮತ್ತೊಬ್ಬರು ಚಿತ್ತವೃತ್ತಿ ನಿರೋಧಕ್ಕೆ ನೀಡುತ್ತಾರೆ. ಹಾಗಾದರೆ ಇವು ಪರಸ್ಪರ ವಿರುದ್ಧವೆ, ಅಥವಾ ಇವುಗಳಲ್ಲಿ ಪರಸ್ಪರ ಸಾಮಂಜಸ್ಯವಿದೆಯೆ? ಈ ಪ್ರಶ್ನೆ ಸೈದ್ಧಾಂತಿಕ ಹಾಗೂ ಬೌದ್ಧಿಕ ದೃಷ್ಟಿಯಿಂದ ಮಾತ್ರವಲ್ಲ, ವ್ಯಾವಹಾರಿಕ ಮತ್ತು ಸಾಧನೆಯ ದೃಷ್ಟಿಯಿಂದಲೂ ಅಷ್ಟೇ ಮಹತ್ವಪೂರ್ಣವಾದುದು.

ನಾವು ಆಳವಾಗಿ ಆಲೋಚಿಸಿದಾಗ ಮೇಲಿನ ಮಾತುಗಳಲ್ಲಿ ಯಾವ ವಿರೋಧಾಭಾಸವೂ ಇಲ್ಲ. ಒಂದೇ ತತ್ತ್ವವನ್ನು ವಿಭಿನ್ನ ದೃಷ್ಟಿಗಳಿಂದ, ಬೇರ ಬೇರೆ ರೀತಿಯಲ್ಲಿ ವ್ಯಕ್ತಪಡಿಸಲಾಗಿದೆ. ಜ್ಞಾತೃ, ಜ್ಞೇಯ ಮತ್ತು ಜ್ಞಾನದ ಸಾಧನವು ನಮ್ಮ ಮನಸ್ಸನ್ನು

ಅವಲಂಬಿಸಿದೆ. ಶ್ರೀರಾಮಕೃಷ್ಣರು ಜ್ಞೇಯವನ್ನು ಗಮನದಲ್ಲಿಟ್ಟು ಕೊಂಡು ''ಭಗವತ್ ಸಾಕ್ಷಾತ್ಕಾರ ಜೀವನದ ಗುರಿ'' ಎಂದಿರುವರು. ಇದನ್ನೇ ಸ್ವಾಮಿ ವಿವೇಕಾನಂದರು ಜ್ಞಾತಾನನ್ನು (ಅರಿಯುವ ವ್ಯಕ್ತಿಯನ್ನು) ಗಮನದಲ್ಲಿಟ್ಟುಕೊಂಡು ''ಮನುಷ್ಯನು ದೇವನೇ ಆಗಿದ್ದಾನೆ'' ಎಂದಿರುವರು. ಅದನ್ನು ಅರಿಯುವುದೇ ಜೀವನದ ಗುರಿ ಎಂದಿರುವರು. ಪತಂಜಲಿ ಮತ್ತು ಶ್ರೀಮಾತೆಯವರ ಮಾತುಗಳಲ್ಲಿ ಜ್ಞಾನದ ಮಾಧ್ಯಮವಾದ ಮನಸ್ಸಿನ ಕಡೆ ಗಮನವಿದೆ. ಈ ಮನಸ್ಸನ್ನು ಚಿತ್ತವೃತ್ತಿರಹಿತವಾಗಿಸುವುದು, ವಾಸಾನಾಶೂನ್ಯವಾಗಿಸುವುದು ತನ್ಮೂಲಕ ಮನಶುದ್ಧಿಯೇ ಜೀವನದ ಗುರಿಯಾಗಿದೆ. ಬುದ್ಧನು ಆತ್ಮತತ್ತ್ವ, ಭಗವತ್ ಸ್ವರೂಪ ಇವುಗಳ ಗೊಂದಲದಲ್ಲಿ ಸಿಲುಕದೆ, ಸ್ಪಷ್ಟವಾಗಿ, ಸರಳ ಭಾಷೆಯಲ್ಲಿ ಎಲ್ಲರೂ ಎದುರಿಸುತ್ತಿರುವ ಸಮಸ್ಯೆಯಾದ ದುಃಖವನ್ನು ನಾಶಮಾಡುವುದೇ ಜೀವನದ ಗುರಿ ಎಂದಿರುವನು. ಅವನದು ವ್ಯಾವಹಾರಿಕ ದೃಷ್ಟಿಕೋನ. ವ್ಯಕ್ತಿ ತನ್ನ ತನ್ನ ಅಭಿರುಚಿಗೆ ತಕ್ಕಂತೆ ಯಾವ ಗುರಿಯನ್ನಾದರೂ ಆಯ್ಕೆ ಮಾಡಬಹುದು.

ಚಿತ್ತವೃತ್ತಿನಿರೋಧವಾದಾಗ ನಾನು ನನ್ನ ದೈವತ್ವವನ್ನು ಅಭಿವ್ಯಕ್ತಗೊಳಿಸಿರುತ್ತೇನೇನು? ದೈವತ್ವದ ಅಭಿವ್ಯಕ್ತಿ ಮತ್ತು ಸಾಕ್ಷಾತ್ಕಾರ ಇವುಗಳಲ್ಲಿ ಪರಸ್ಪರ ಸಂಬಂಧವಿದೆಯೇನು? ದುಃಖನಿವೃತ್ತಿರೂಪವಾದ ನಿರ್ವಾಣಕ್ಕೂ, ಭಗವತ್ ಸಾಕ್ಷಾತ್ಕಾರಕ್ಕೂ ಇರುವ ಸಂಬಂಧವೇನು? ಇವೆಲ್ಲ ಒಂದೇ ಪರಮಸತ್ಯವನ್ನು ಹೇಳುವ ಭಿನ್ನ ಭಿನ್ನ ಬಗೆಯಾದರೆ, ಇವುಗಳಲ್ಲಿ ಪರಸ್ಪರ ಯಾವ ವ್ಯತ್ಯಾಸವೂ ಇಲ್ಲವೆಂದರ್ಥ. ಚಿತ್ತವೃತ್ತಿಗಳು ನಿರೋಧವಾಗದೆ, ಮನಸ್ಸು ವಾಸನಾರಹಿತವಾಗದೆ ಸಾಕ್ಷಾತ್ಕಾರವಿಲ್ಲ. ಸಾಕ್ಷಾತ್ಕಾರವಿಲ್ಲದೆ ದುಃಖನಿವೃತ್ತಿಯೂ ಇಲ್ಲ. ತನ್ನೊಳಗಿನ ದೈವತ್ವವನ್ನು ಅಭಿವ್ಯಕ್ತಗೊಳಿಸುವುದು ಮತ್ತು ನಿರ್ವಾಣ ಎರಡೂ ಒಂದೇ ಆಗಿದೆ. ಆತ್ಮಸ್ವರೂಪವನ್ನು ಅರಿಯುವುದೆಂದರೂ ಒಂದೇ, ಭಗವತ್ ಸಾಕ್ಷಾತ್ಕಾರವೆಂದರೂ ಒಂದೇ. ಹೀಗೆ ಈ ಎಲ್ಲಾ ವಾಣಿಗಳು ಪರಸ್ಪರ ಸಂಬಂಧವನ್ನು ಹೊಂದಿವೆ. ಇವು ಒಂದು ಇನ್ನೊಂದಕ್ಕೆ ಪೂರಕಗಳೇ ಹೊರತು ವಿರುದ್ಧವಲ್ಲ. ಸಾಧಕನು ಈ ಸತ್ಯವನ್ನು ಗುರಿಯನ್ನು ತಲುಪಿದಾಗ ಸರಿಯಾಗಿ ಅರ್ಥಮಾಡಿಕೊಳ್ಳುತ್ತಾನೆ. ಆ ಸ್ಥಿತಿಯನ್ನು ತಲುಪುವುದಕ್ಕೆ ಮೊದಲೇ ಅವನು ತನ್ನ ಸಾಧನಾ ಜೀವನದಲ್ಲೇ ಇದನ್ನು ಅರ್ಥಮಾಡಿಕೊಳ್ಳಲೂ ಬಲ್ಲನು.

ವಿಚಾರಪ್ರಧಾನ ಸ್ವಭಾವವುಳ್ಳ ಸಾಧಕನು, ಅಂತರಾಳದಲ್ಲಿರುವ ಬ್ರಹ್ಮನ ಅಭಿವ್ಯಕ್ತಿಯನ್ನು ಜೀವನದ ಗುರಿ ಎಂದು ಬಗೆದು ಜ್ಞಾನಮಾರ್ಗದಿಂದ ಎಂದರೆ ಆತ್ಮಾನಾತ್ಮವಿವೇಕ ವಿಚಾರದ ದಾರಿಯಿಂದ ಮುಂದುವರಿಯುತ್ತಾನೆ. ಮೊದಮೊದಲು ಅವನಲ್ಲಿ ದೇಹಾತ್ಮಬುದ್ಧಿ ಬಲವಾಗಿರುತ್ತದೆ. ಅವನು ತನ್ನನ್ನು ತಾನು ದೇಹವೆಂದು ಬಗೆಯುತ್ತಾನೆ. ಅವನ ಮನಸ್ಸು ಇನ್ನೂ ಚಂಚಲವಾಗಿರುತ್ತದೆ, ದೃಶ್ಯ ಜಗತ್ತು ಅವನಿಗೆ ಸತ್ಯವಾಗಿರುತ್ತದೆ. ಸಾಧನೆಯ ಪರಿಣಾಮವಾಗಿ ಅವನಿಗೆ ತಾನು ರಕ್ತಮಾಂಸದ ಮುದ್ದೆ ಅಲ್ಲ, ಅದಕ್ಕಿಂತ ಪ್ರತ್ಯೇಕವಾಗಿರುವ ಚೈತನ್ಯ, ಸದ್ವಸ್ತು ಎಂಬ ಅರಿವು ಕ್ರಮೇಣ ಉದಿಸುತ್ತದೆ. ಆಗ ಅವನು ಮೊದಲಿಗಿಂತ ಹೆಚ್ಚು ಶಾಂತವಾಗುತ್ತಾನೆ. ಬಾಹ್ಯಜಗತ್ತು ಎಷ್ಟು ಸತ್ಯವೆಂದು ತಾನು ತಿಳಿದಿದ್ದನೋ ಅಷ್ಟು ದಿಟವಲ್ಲ, ಅದರ ಹಿಂದೆ ಒಂದು ಸತ್ ವಸ್ತು, ಚೈತನ್ಯ ವಸ್ತು ಇದೆ ಎಂದೂ ಅವನಿಗೆ ಅನ್ನಿಸತೊಡಗುತ್ತದೆ. ಇನ್ನೂ ಮುಂದುವರಿದಂತೆ ಆತ್ಮನು ದೇಹ-ಮನದಿಂದ ಪ್ರತ್ಯೇಕ ಎಂದು ಗೊತ್ತಾಗುತ್ತದೆ. ಜಗತ್ತು ಸ್ವಪ್ನವತ್ ಎಂದು ಗೊತ್ತಾಗುತ್ತದೆ. ವಿವೇಕ-ವಿಚಾರದಿಂದ ಆತ್ಮದ ಸ್ವಾನುಭವವಾದಾಗ ಅವನಿಗೆ ಜಗತ್ತೂ ಬ್ರಹ್ಮಮಯವಾಗಿ ಗೋಚರಿಸುತ್ತದೆ. ಆಗ ಅವನ ಮನಸ್ಸು ಶಾಂತವಾಗುತ್ತದೆ.

ರಾಜಯೋಗಿಯ ಧಾರಣ-ಧ್ಯಾನದಿಂದ ಚಿತ್ತವನ್ನು ಏಕಾಗ್ರಗೊಳಿಸುತ್ತ ಗುರಿಯ ಕಡೆಗೆ ಹೆಜ್ಜೆಯಿಡುತ್ತಾನೆ. ಅವನು ಚಿತ್ತವೃತ್ತಿಗಳನ್ನು ನಿರೋಧಗೊಳಿಸಿದಷ್ಟೂ ಅವನ ಮನಸ್ಸು ಹೆಚ್ಚೆಚ್ಚು ಶಾಂತವಾಗುತ್ತದೆ, ಜಗತ್ತು ಸ್ವಪ್ನವಾಗಿ ಗೋಚರಿಸುತ್ತದೆ. ಮತ್ತು ತಾನು ಆತ್ಮ ಎಂಬ ಅರಿವೂ ಉಂಟಾಗುತ್ತದೆ.

ಭಕ್ತನಾದವನು ಅವನ ನಾಮಗುಣಕೀರ್ತನೆ ಮಾಡುತ್ತ, ತಾನು ಭಗವದಭಿಮುಖನಾದಷ್ಟೂ ತನ್ನ ಮನಸ್ಸು ಶಾಂತವಾಗುವುದನ್ನು ಗಮನಿಸುತ್ತಾನೆ. ಆಗ ಅವನ ದೇಹಾಧ್ಯಾಸವೂ ಕಡಿಮೆಯಾಗುತ್ತದೆ.

ಈ ಮೂರು ಸಾಧಕರು ತಮ್ಮ ಮಾರ್ಗದಲ್ಲಿ ಮುಂದುವರಿದಂತೆ ಅವರ ದುಃಖಗಳು ಕಡಿಮೆಯಾಗುತ್ತವೆ. ಸಾಧನೆಯಲ್ಲಿ ನಿರತನಾದ ಕೆಲವು ವರ್ಷಗಳಲ್ಲಿ ಸಾಧಕ ಈ ಎಲ್ಲ ಮಾರ್ಗಗಳ ಸಮನ್ವಯವನ್ನು ಮನಗಾಣುತ್ತಾನೆ. ಎಲ್ಲ ಗುರಿಗಳ ಸಮಾನತೆಯನ್ನು ಅನುಭವದಿಂದ ಅರಿಯುತ್ತಾನೆ. ಇಲ್ಲಿ ನಾವು ಇನ್ನೊಂದು ನಿಷ್ಕರ್ಷೆಯನ್ನು ಮಾಡಬಹುದು. ಭಕ್ತಿಯಿಂದ ನನ್ನ ಚಿತ್ತವೃತ್ತಿಗಳು ನಿರೋಧವಾಗುತ್ತವೆ ಎನ್ನುವುದಾದರೆ ಧ್ಯಾನ ಅಭ್ಯಾಸದಿಂದ ನನ್ನ ಭಗವತ್ಪ್ರೇಮವೂ ವೃದ್ಧಿಯಾಗಬೇಕಲ್ಲವೆ? ಅಥವಾ ನಾನು ಭಕ್ತಿಸಾಧನೆಯನ್ನೇ ಪ್ರಧಾನವಾಗಿ ಮಾಡುತ್ತಿದ್ದರೂ ಜೊತೆಯಲ್ಲಿ ವಿಚಾರಬುದ್ಧಿಯಿಂದ ಆತ್ಮಸ್ವರೂಪವನ್ನು ಚಿಂತನೆ ಮಾಡುವುದಾದರೆ ನನ್ನ ಭಕ್ತಿ ಪರಿಪುಷ್ಟವಾಗುತ್ತದಲ್ಲವೆ? ಇದೇ ರೀತಿ ಜ್ಞಾನಯೋಗಿ ಸಾಧಕನು ಆತ್ಮ ಅನಾತ್ಮ ವಿವೇಕ-ವಿಚಾರದೊಂದಿಗೆ ಚಿತ್ತವೃತ್ತಿನಿರೋಧಕ್ಕಾಗಿಯೂ ಪ್ರಯತ್ನಿಸಬಹುದು, ಭಗವತ್ಪ್ರೇಮಕ್ಕಾಗಿಯೂ ಯತ್ನಿಸಬಹುದು. ಆಗ ಅವನು ವೇಗವಾಗಿ ತನ್ನ ಗುರಿಯೆಡೆಗೆ ಹೆಜ್ಜೆಯಿಡಬಹುದು. ನಮ್ಮ ಜೀವನದ ಗುರಿ ಸಾಧನೆಗೆ ಜ್ಞಾನ, ಭಕ್ತಿ, ಧ್ಯಾನ, ಕರ್ಮ — ಯಾವ ಮಾರ್ಗವನ್ನಾದರೂ ಅನುಸರಿಸಬಹುದು. ಆದರೆ ಈ ನಾಲ್ಕು ಮಾರ್ಗಗಳ ಸಮನ್ವಯವು ಶ್ರೇಷ್ಠವಾದುದು, ಏಕೆಂದರೆ ಅದರಿಂದ ನಮ್ಮ ಬುದ್ಧಿ, ಭಾವನೆ, ಕ್ರಿಯಾಶಕ್ತಿಗಳು ಪೂರ್ಣವಾಗಿ ಬಳಕೆಯಾಗುತ್ತವೆ.

‘ವಾಕ್ಯಪದೀಯ’ದಲ್ಲಿ ಬ್ರಹ್ಮತತ್ತ್ವ

ಡಾ. ಕೆ. ಎಲ್. ಪ್ರಸನ್ನಾಕ್ಷೀ

ಎಲ್ಲ ಬಗೆಯ ಜ್ಞಾನಗಳೂ ಅಧ್ಯಾತ್ಮದಲ್ಲಿ ಒಂದಾಗುವುದನ್ನು ಭಾರತೀಯ ಪರಂಪರೆಯಲ್ಲಿ ಕಾಣಬಹುದು. ವ್ಯಾಕರಣ ಶಾಸ್ತ್ರಗ್ರಂಥಗಳಲ್ಲಿ ಕೆಲವು ಒಂದು ಹಂತದಲ್ಲಿ ತತ್ತ್ವಶಾಸ್ತ್ರವೂ ದರ್ಶನಶಾಸ್ತ್ರವೂ ಆಗಿ ಕಂಡುಬರುತ್ತವೆ. ಮಹಾನ್ ದಾರ್ಶನಿಕ ಭರ್ತೃಹರಿಯ ‘ವಾಕ್ಯಪದೀಯ’ ಈ ಸಾಲಿಗೆ ಸೇರುವ ವಿಶಿಷ್ಟ ಕೃತಿ. ಇದನ್ನು ಕುರಿತು ಬರೆದಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ವ್ಯಾಸಂಗ, ಶಾಸ್ತ್ರ ಹಾಗೂ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು ‘ವಿವೇಕಪ್ರಭ’ ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

ಪೀಠಿಕೆ

ಸೃಷಿಯಾದ ಎಲ್ಲಾ ಜೀವಗಳೂ ನಿರ್ದಿಷ್ಟ ಕಾಲಮಿತಿಯ ಆಯುಃಪ್ರಮಾಣವನ್ನು ಹೊತ್ತು ಬಂದಿರುತ್ತದೆ. ಆ ಆಯಸ್ಸಿನ ಸಾರ್ಥಕತೆ ಆಗುವುದು ಹೇಗೆ? ಅದು ಯಾವುದರಿಂದ ಸಾಧಿತವಾಗುತ್ತದೆ? — ಹಣದಿಂದಲೆ? ಆಸ್ತಿಯಿಂದಲೆ? ಅಧಿಕಾರದಿಂದಲೆ? ಸ್ಥಾನಮಾನಗಳನ್ನು ಗಳಿಸುವುದರಿಂದಲೇ! ಸುಖ-ಭೋಗ ಅನುಭೂತಿಯಿಂದಲೆ?..... ಎಂದೆಲ್ಲಾ ವಿವೇಚಿಸುತ್ತಾ ವಿಶ್ಲೇಷಿಸುತ್ತಾ ಮಾನವನ ಮನ-ಬುದ್ಧಿಗಳು ಮೇಲೆ ಹೇಳಿದ ಎಲ್ಲವೂ — **‘ಶ್ವೋಭಾವೋ ಮರ್ತ್ಯಸ್ಯ’**-ಕೇವಲ ಅಲ್ಪಕಾಲ ಮಾತ್ರ ಇರುವವು; ಮತ್ತು ಇವು ಕೊಡುವ ಸುಖ ಶಾಂತಿ ನೆಮ್ಮದಿ ತೃಪ್ತಿಗಳೂ ಅಲ್ಪಕಾಲ ಮಾತ್ರದ್ದು; ಇವುಗಳನ್ನು ಅನುಭವಿಸುವ ಪಾಲಿಸುವ ಶಕ್ತಿ ಇಂದ್ರಿಯಗಳಲ್ಲಿ ಕುಂಠಿತವಾದಾಗ, ಇವೆಲ್ಲಾ ಇದ್ದೂ ಯಾವ ಪ್ರಯೋಜನವೂ ಇಲ್ಲ; ಹಾಗಾದರೆ ಜೀವಿತದ ಉದ್ದೇಶ್ಯ ಏನು? — ಎಂಬ ಮಾನವನ ವಿಚಿಕಿತ್ಸಕ ದೃಷ್ಟಿಗೆ ಅಂತರಂಗ ಅನುಭವಕ್ಕೆ ಬೋಧವಾದುದೇ – ತನ್ನನ್ನು ತಾನು ಅರಿಯುವುದು, ತನ್ನ ಪರಮ ಮೂಲನೆಲೆಯನ್ನು ಅರಿಯುವುದು — ಜೀವಿತದ ಪರಮಗುರಿ ಎಂದು. ಆ ಮಾರ್ಗದಲ್ಲಿ ಯತ್ನಶೀಲನಾದವನು ತನ್ನ ಮೂಲವಾದ ಪರತತ್ತ್ವ (ಪರಬ್ರಹ್ಮ) ವಸ್ತುವನ್ನು ಕಂಡ, **‘ವೇದಾಹಮೇತಂ ಪುರುಷಂ ಮಹಾಂತಂ’** ಎಂದು ಉದ್ಗರಿಸಿದ. ಈತ ಕಂಡದ್ದು ಮಾತ್ರ ಆ ಪರತತ್ತ್ವದ ಸ್ವರೂಪವೇ! ಅದಕ್ಕೆ ಬೇರೊಂದು ರೂಪ, ಬೇರೊಂದು ಸ್ಥಿತಿ ಇರಲು ಸಾಧ್ಯವೆ? ಆತ ಅದನ್ನು ಕಂಡ ಮಾರ್ಗ ಮಾತ್ರ ಅದನ್ನು ಹೊಂದಲು ಇರುವ ಮಾರ್ಗವೆ? ಬೇರೆ ಮಾರ್ಗ ಬೇರೆ ಕ್ರಮ ಇರಲು ಸಾಧ್ಯವಿಲ್ಲವೆ? ...ಇದೇ ಮುಂತಾದ ಚಿಂತನೆಗಳಿಂದ ಬೇರೆ ಬೇರೆ ರೀತಿಯಲ್ಲಿ ಮನುಷ್ಯ ತನ್ನ ಪ್ರಯತ್ನ ಮುಂದುವರಿಸಿದ — ಆತನ ಈ ರೀತಿಯ ಪ್ರಯತ್ನಗಳ ಫಲವೇ ವಿವಿಧ ದರ್ಶನಗಳು. ಇವುಗಳಲ್ಲಿ ‘ವೈಯಾಕರಣ ದರ್ಶನ’ವೂ ಒಂದು. ಇದು ವ್ಯಾಕರಣಶಾಸ್ತ್ರವು ಪ್ರತಿಪಾದಿಸುವ ಶಬ್ದಸ್ವರೂಪದ ಪರಬ್ರಹ್ಮ ತತ್ತ್ವ ದರ್ಶನ.

ವ್ಯಾಕರಣ ಶಾಸ್ತ್ರದ ಉಗಮ

ಸಂಸ್ಕೃತ ವ್ಯಾಕರಣ ಶಾಸ್ತ್ರವು, ನೃತ್ಯ ಮಾಡುತ್ತಿದ್ದ ಪರಮೇಶ್ವರನು ತನ್ನ ನೃತ್ಯದ ಕೊನೆಯಲ್ಲಿ ಹದಿನಾಲ್ಕು ಬಾರಿ ನುಡಿಸಿದ ಡಮರುವಿನ ‘ಅಇಉಣ್, ಋಲೃಕ್, ಏಓಙ್....’ ನಿನಾದವನ್ನು ಮೂಲವಾಗಿ ಹೊಂದಿದೆ.

೧) ಪಾಣಿನಿ ಮುನಿ ರಚಿಸಿದ **‘ಅಷ್ಟಾಧ್ಯಾಯೀ’** ೨)ಕಾತ್ಯಾಯನ ಮುನಿಯ **‘ವಾರ್ತಿಕ’** ಮತ್ತು ೩) ಪತಂಜಲಿ ಮುನಿಗಳ **‘ಮಹಾಭಾಷ್ಯ’** — ಈ ಮೂರು ಈ ಶಾಸ್ತ್ರದ ಪ್ರಸ್ತುತ ಆಧಾರ ಗ್ರಂಥಗಳು. ಇವುಗಳನ್ನು ಮೂಲವಾಗಿಟ್ಟುಕೊಂಡು ಅನೇಕ ವ್ಯಾಕರಣಗ್ರಂಥಗಳು ರಚಿತವಾಗಿವೆ. ಅವುಗಳಲ್ಲಿ ಭರ್ತೃಹರಿಯ **‘ವಾಕ್ಯಪದೀಯ’**ವೂ ಒಂದು.

ವ್ಯಾಕರಣಶಾಸ್ತ್ರವನ್ನು ‘ಅಕ್ಷರ ಸಮಾಮ್ನಾಯ’ ಎಂದೂ ಕರೆಯುತ್ತಾರೆ. ಇದು ಬ್ರಹ್ಮತತ್ತ್ವವನ್ನು ಪ್ರತಿಪಾದಿಸುವ ವರ್ಣಗಳ ರಾಶಿ ಎಂದು, ಶಿವಗಣದಲ್ಲಿ ಪ್ರಧಾನವಾದ ಶಿವನ ವಾಹಕನಾದ ನಂದಿಯು, ಶಿವನು ನುಡಿಸಿದ ಡಮರು ನಾದದ ಅರ್ಥ ವಿವರಣೆ ನೀಡುತ್ತಾ ‘ನಂದಿಕೇಶ್ವರ ಕಾರಿಕೆ’ಯಲ್ಲಿ ಸುಸ್ಪಷ್ಟವಾಗಿ ತಿಳಿಸಿದ್ದಾನೆ:

ಅಕಾರೋ ಬ್ರಹ್ಮರೂಪಃ ಸ್ಯಾನ್ನಿರ್ಗುಣಃ ಸರ್ವವಸ್ತುಷು ।
ಚಿತ್ಕಲಾಮಿಂ ಸಮಾಶ್ರಿತ್ಯ ಜಗದ್ರೂಪ ಉಣೀಶ್ವರಃ ॥

ಬ್ರಹ್ಮರೂಪವು ನಿರ್ಗುಣವೇ ಆಗಿದ್ದರೂ ಸಕಲ ವಸ್ತುಜಾತವಾಗಿ ವ್ಯಕ್ತಗೊಂಡಾಗ ಅನಂತಕಲ್ಯಾಣಗುಣಗಣ ಆಕಾರವುಳ್ಳವನಾಗಿರುತ್ತಾನೆ. ವಿಶ್ವಾಂಡವಾಗಿ ವಿಭಿನ್ನವೂ ವಿಶಿಷ್ಟವೂ ವಿಚಿತ್ರವೂ ಆದ ರೀತಿಯಲ್ಲಿ ವಿಕಾಸಗೊಂಡ ಅವನ **(ಚಿತ್ಕಲೆ)** ಶಕ್ತಿಯೇ ಪರಾಶಕ್ತಿ. (ಇದು ಸಕಲ ವಸ್ತುಗಳಲ್ಲಿ **ಪರಾ, ಪಶ್ಯಂತೀ, ಮಧ್ಯಮಾ, ವೈಖರೀ** ಶಬ್ದರೂಪಗಳಲ್ಲಿ ನೆಲೆಸಿದೆ.) ವಿಶ್ವ ಆಕಾರಳಾದ ಆಕೆಯಲ್ಲಿ ಬ್ರಹ್ಮ ಸುಪ್ರತಿಷ್ಠಿತವಾಗಿದೆ. ಮರವು ಹೇಗೆ ಸಾವಿರಾರು ಶಾಖೆ ಉಪಶಾಖೆಗಳೊಡಗೂಡಿ ಎಣಿಕೆಗೆ ಸಿಗದಷ್ಟು ಎಲೆ ಹೂವು ಹೀಚು ಇತ್ಯಾದಿ ರೂಪಗಳಲ್ಲಿರುತ್ತದೆಯೋ

ಹಾಗೆಯೇ ಶಿವನು (ಪರಬ್ರಹ್ಮವು) ಸಗುಣವಾಗಿ ವ್ಯಾಪಕನಾಗಿ ಭೂಮಿ ಮೊದಲಾದ ರೂಪದಲ್ಲಿ ವಿಶ್ವಾತ್ಮಕನಾಗಿ ವಿರಾಜಿಸುತ್ತಾನೆ.

'ವಾಕ್ಯಪದೀಯ'

ಮಹಾವಿರಾಗಿಯೂ ಯೋಗಿಶ್ರೇಷ್ಠನೂ ಆದ ಭರ್ತೃಹರಿಯು ತನ್ನ 'ವಾಕ್ಯಪದೀಯ'ದಲ್ಲಿ ಇದೇ ತತ್ತ್ವವನ್ನು ಸುಸ್ಪಷ್ಟವಾಗಿ, ವಿಸ್ತಾರವಾಗಿ ಪ್ರತಿಪಾದಿಸಿದ್ದಾನೆ. ಹೆಸರೇ ಸೂಚಿಸುವಂತೆ ಪದ ಮತ್ತು ವಾಕ್ಯಗಳಿಗೆ ಸಂಬಂಧಿಸಿದ ಅಕ್ಷರಗಳ ಸಮೂಹವಾದ ಮೂಲಶಬ್ದ-ಪ್ರಕೃತಿ ಮತ್ತು ಅದಕ್ಕೆ ಸೇರಿಸುವ ಪ್ರತ್ಯಯಗಳು, ಅವುಗಳಿಂದಾದ ಪದ ಮತ್ತು ಪದ ಸಮೂಹವಾದ ವಾಕ್ಯ; ಈ ವಿಚಾರಗಳನ್ನು ಈ ಗ್ರಂಥವು ದಾರ್ಶನಿಕ ಹಿನ್ನೆಲೆಯಲ್ಲಿ ವಿವರಿಸುತ್ತದೆ. ಇದರಲ್ಲಿ ಬ್ರಹ್ಮಕಾಂಡ, ವಾಕ್ಯಕಾಂಡ, ಪದಕಾಂಡ ಎಂದು ಮೂರು ವಿಭಾಗಗಳಿವೆ. ಪದಗಳು ಅರ್ಥವನ್ನು ಕೊಡುವಲ್ಲಿ ಆಶ್ರಯಿಸುವ ಜಾತಿ, ದ್ರವ್ಯ, ಕ್ರಿಯಾ, ಕಾಲ, ದಿಕ್, ಲಿಂಗ ಮೊದಲಾದವುಗಳನ್ನು ಬೇರೆ ಬೇರೆಯೇ ಆದ 'ಜಾತಿ ಸಮುದ್ದೇಶ', 'ದ್ರವ್ಯಸಮುದ್ದೇಶ' ಇತ್ಯಾದಿ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ. ಇದೆಲ್ಲವೂ ನಿತ್ಯ ಸದ್ವಸ್ತುವಾದ **'ಪರತತ್ತ್ವ'**ದಿಂದ ವಿಕಾಸಗೊಂಡ ಹಿರಣ್ಯಗರ್ಭಾಂಡ ವಿಶ್ವಾಂಡದಂತೆ ಕಾಲ್ಪನಿಕವೇ ಆಗಿದೆ ಎಂದೂ ಇಲ್ಲಿ ಪ್ರತಿಪಾದಿಸಲಾಗಿದೆ.

ಶಬ್ದಬ್ರಹ್ಮ

ಚರಾಚರಾತ್ಮಕವಾದ ಈ ಪ್ರಪಂಚ ಸೃಷ್ಟಿಗೂ ಮೊದಲು 'ಪರಾ' ಎಂದು ಅಶಬ್ದ (ವ್ಯಕ್ತವಲ್ಲದ ಶಬ್ದರಹಿತ) ಕೇವಲ ಚೈತನ್ಯ ಸ್ವರೂಪದಲ್ಲಿರುತ್ತದೆ. ವ್ಯಕ್ತವಾಗಬೇಕೆಂಬ ಸಂಕಲ್ಪವಾದಾಗ ಅದು ಶಬ್ದರೂಪ ತಳೆಯುತ್ತದೆ. ಹೀಗೆ ರೂಪ ತಳೆದ ಶಬ್ದವು, ಯೋಗ್ಯತಾ, ಲಕ್ಷಣಾ, ಆಕಾಂಕ್ಷಾ ಮೊದಲಾದ ಶಕ್ತಿಗಳೊಡಗೂಡಿ ಅರ್ಥಬೋಧಕವಾಗುತ್ತದೆ. ಅಂತೆಯೇ ಧರ್ಮ-ಅಧರ್ಮ, ಪ್ರತಿಬಂಧ, ಅನುಜ್ಞಾ ಮೊದಲಾದ ಅನಂತಶಕ್ತಿಗಳನ್ನು ಧರಿಸಿಕೊಳ್ಳುವ ಕಾಲಶಕ್ತಿ ಅವಿದ್ಯಾಶಕ್ತಿ ಎಲ್ಲವನ್ನೂ ಅದು ತನ್ನೊಳಗೇ ಧರಿಸಿರುತ್ತದೆ. ಹೀಗೆ ಇದು ಕಲ್ಪನಾತೀತ ಬೃಹದ್ಗಾತ್ರವುಳ್ಳ 'ಭೂಮವಸ್ತು' ಆದುದರಿಂದ ಇದನ್ನು **'ಶಬ್ದಬ್ರಹ್ಮ'** ಎನ್ನಲಾಗಿದೆ.

ಈ ಶಬ್ದವೇ ವಸ್ತುಗಳಲ್ಲಿ ಹಾಗೂ ಜೀವಿಗಳಲ್ಲಿ ಇರುವ ಪ್ರವೃತ್ತಿ-ನಿವೃತ್ತಿರೂಪ ಕ್ರಿಯಾ ವಿಭಾಗಗಳಿಗೂ ಕಾರಣವಾಗಿದೆ *('ವಾಕ್ಯಪದೀಯ', ಬ್ರಹ್ಮಕಾಂಡ ಶ್ಲೋಕ ೧೧೮).* ಪ್ರವೃತ್ತವಾದ ಶಬ್ದ, ಅಭಿವ್ಯಕ್ತಿ ಬೇಡವೆನ್ನಿಸಿದಾಗ ನಿವೃತ್ತವಾಗಿ **'ಪರಾ'** ಎಂಬಲ್ಲಿ ಹೋಗಿ ಲೀನವಾಗುತ್ತದೆ. ಅವ್ಯಕ್ತವಾಗಿ ಚರಾಚರಾತ್ಮಕಗಳಲ್ಲಿ ಗೂಢವಾಗಿದ್ದ, ಭಾವನ ಚಿಂತನ ವಿಚಾರಾದಿಗಳು ವ್ಯವಹಾರದೆಶೆಯಲ್ಲಿ ವ್ಯಕ್ತಗೊಂಡಾಗ 'ಪರಾ'ದಿಂದ ಕ್ರಮವಾಗಿ ಪಶ್ಯಂತೀ, ಮಧ್ಯಮಾ, ವೈಖರೀರೂಪಗಳಿಂದ ಪರಿಣತವಾಗಿ ನಾವು ಕಾಣುತ್ತಿರುವ, ಅನುಭವಿಸುತ್ತಿರುವ, ವಿವಿಧ ಮಾಧ್ಯಮಗಳಿಂದ ತಿಳಿದುಕೊಳ್ಳುತ್ತಿರುವ, ವಿಶ್ವಾಂಡ ಬ್ರಹ್ಮಾಂಡ ರೂಪದಲ್ಲಿ ವಿರಾಜಿಸುತ್ತದೆ. ಮತ್ತೆ ನಿವೃತ್ತವಾದಾಗ ಅವ್ಯಕ್ತ 'ಪರಾ'ದಲ್ಲಿಯೇ ಲೀನವಾಗುತ್ತದೆ. ಇದು ಸೃಷ್ಟಿಯಲ್ಲಿರುವ ಸಮಸ್ತ ವಸ್ತುಜಾತಗಳಿಗೂ (**ಸ್ಥಾವರ**-ಗಿಡ ಮರ ಬೆಟ್ಟಗುಡ್ಡ.... ಮತ್ತು ಮರ ಲೋಹ ಮುಂತಾದವುಗಳಿಂದ ನಿರ್ಮಿತವಾದ ಅನಂತ ನಿತ್ಯೋಪಯೋಗಿ ವಸ್ತುಗಳು; **ಜಂಗಮ** -ನದಿ-ನದ ಸಕಲವಿಧ, ಕೀಟ, ಕೋಟೆಗಳು, ಜೀವಿಗಳು, ನಕ್ಷತ್ರಕಾಯಗಳು, ಆಕಾಶಕಾಯಗಳು.. ಇತ್ಯಾದಿ) ಸಮಾನ. *('ವಾಕ್ಯಪದೀಯ', ಬ್ರಹ್ಮಕಾಂಡ, ಶ್ಲೋಕ ೧೨೯)*

ಶಬ್ದಬ್ರಹ್ಮ-ಪರಬ್ರಹ್ಮರು ಅಭಿನ್ನ

ಪರಾ, ಪಶ್ಯಂತೀ, ಮಧ್ಯಮಾ, ವೈಖರೀ ರೂಪ ನಾಲ್ಕು ವಿಧ ಶಬ್ದಗಳೂ ಪರಬ್ರಹ್ಮದ ಶಕ್ತಿಸ್ವರೂಪವೇ ಆಗಿದೆ. ಚಂದ್ರನಿಂದ ಆತನ ಬೆಳದಿಂಗಳು ಚಂದ್ರಿಕೆ, ಅಗ್ನಿಯಿಂದ ಅದರ ಸುಡುವಿಕೆ, ಹೇಗೆ ಬೇರೆ ಅಲ್ಲವೋ ಅದೇ ರೀತಿ ಪರಬ್ರಹ್ಮಕ್ಕಿಂತ ಅದರ ಈ ಶಕ್ತಿ ಬೇರೆ ಅಲ್ಲ. ಇವುಗಳ ಈ ಸಂಬಂಧ ನಿತ್ಯ. ಆದುದರಿಂದ ಪರಬ್ರಹ್ಮವು ತನ್ನ ಶಕ್ತಿ(ಶಬ್ದ)ಯೊಡಗೂಡಿ ಸಕಲ ಚರಾಚರಾತ್ಮಕ ಜಗತ್ತನ್ನು ನಿರ್ಮಿಸುತ್ತಾನೆ. **'ವಾಗೇವ ವಿಶ್ವಾಭುವನಾನಿ ಜಜ್ಞೇ'**- ಎಂಬ ಶ್ರುತಿವಾಕ್ಯ ಇದನ್ನು ದೃಢಪಡಿಸುತ್ತದೆ.

ಇವುಗಳಲ್ಲಿ ಪರಾ, ಪಶ್ಯಂತೀ, ಮಧ್ಯಮಾ ಶಬ್ದಗಳು ಪ್ರತಿ ಜೀವಿಗಳ ಒಳಗೆ ಗೂಢವಾಗಿ 'ನಿತ್ಯ'ವಾಗಿ ಸದಾ ಇರುತ್ತವೆ. ಅವು ಹೊರಗೆ ಪ್ರಕಟಗೊಳ್ಳುವುದಿಲ್ಲ. ಈ ವಿಶ್ವಾಂಡವು ಸೃಷ್ಟಿಯಾಗುವ ಕೋಟಿ ಕೋಟಿ ವರ್ಷಗಳಿಗೂ ಮೊದಲು ಈ 'ಶಬ್ದ' ಇದ್ದಿತು. ನಂತರವೂ ಅನಂತ ಕೋಟಿ ವರ್ಷಗಳ ಕಾಲ ಇವು ಇದ್ದೇ ಇರುತ್ತವೆ. ಹಾಗಾಗಿ, ಯೋಗಮಾರ್ಗದಲ್ಲಿ ಸಂಚರಿಸಬಲ್ಲ ಯೋಗಿಯು, ಭೂತಕಾಲದ (ಅನಂತಕೋಟಿ ವರ್ಷ ಹಳೆಯ) ವರ್ತಮಾನ ಕಾಲದ ಅಂತೆಯೇ ಭವಿಷ್ಯತ್ತಿನ (ಎಷ್ಟೋ ಸಹಸ್ರಾರು ವರ್ಷಗಳ ನಂತರದ) ಎಲ್ಲಾ ಶಬ್ದಗಳನ್ನೂ ಗ್ರಹಿಸಬಲ್ಲ.

ಜೀವಿಗಳ ಹೃದಯಭಾಗದಲ್ಲಿ ಅತ್ಯಂತ ಸೂಕ್ಷ್ಮವಾದ ಗುಹೆ ಇದೆ. ಅದರೊಳಗೆ ಮತ್ತೂ ಸೂಕ್ಷ್ಮವಾದ,(ಸಕಲಭೇದ, ದ್ವಂದ್ವ ರಹಿತವಾದ ಕಾರಣ), ಶೋಕರಹಿತವಾದ ಆಕಾಶ ಇದೆ. ಅದಕ್ಕೂ ಒಳಕ್ಕೆ ನಿತ್ಯವೂ ನಿರಂಜನವೂ ನಿರ್ವಿಕಲ್ಪವೂ ನಿರಾಖ್ಯಾತವೂ ನಿಷ್ಪ್ರಪಂಚವೂ ಆದ ಜ್ಯೋತಿ(ಶಬ್ದರೂಪ) ಬೆಳಗುತ್ತಿರುತ್ತದೆ. ಯೋಗಿಗಳು ತಮ್ಮ ಧ್ಯಾನದಲ್ಲಿ ಅದನ್ನು ಸದಾ ಕಾಣುತ್ತಿರುತ್ತಾರೆ. ಅದೇ **'ಪಶ್ಯಂತೀ'**.[೧] ಈ ಪಶ್ಯಂತೀ ಪ್ರಾಣಾನಲದಿಂದ ಪ್ರೇರಿತ

---

೧ **ದಹ್ರಂ ವಿಪಾಪ್ಮಂ ಪರಮೇಶ್ಮಭೂತಂ ಯತ್ಪುಂಡರೀಕಂ ಪುರಮಧ್ಯ ಸಗ್‌ಸ್ಥಮ್। ತತ್ರಾಪಿ ದಹ್ರಂ ಗಗನಂ ವಿಶೋಕಸ್ತಸ್ಮಿನ್ ಯದಂತಸ್ತದುಪಾಸಿತವ್ಯಮ್।** 'ಈ ಪುರದ ಮಧ್ಯದಲ್ಲಿ ಪರತತ್ತ್ವದ ಮನೆಯಾಗಿರುವ ಅತ್ಯಂತ ಸೂಕ್ಷ್ಮವಾದ ಪಾಪರಹಿತವಾದ ಕಮಲವಿದೆ. ಅದಕ್ಕೂ ಒಳಭಾಗದಲ್ಲಿ ಇನ್ನಷ್ಟು ಸೂಕ್ಷ್ಮವಾದ, (ಜಯ-ಅಪಜಯ, ಮನ-ಅಪಮಾನವೇ ಮೊದಲಾದ ದ್ವಂದ್ವಗಳ ಬಾಧೆಯಿಲ್ಲದ್ದರಿಂದ) ಶೋಕರಹಿತವಾದ ಆಕಾಶವಿದೆ. ಅದಕ್ಕೂ ಒಳಭಾಗದಲ್ಲಿರುವ ಅದನ್ನು ಉಪಾಸನೆ ಮಾಡಬೇಕು.'

(ಮಹಾನಾರಾಯಣೋಪನಿಷತ್)

ವಾಗಿ ವಿಶುದ್ಧಚಕ್ರವನ್ನು ಸೇರಿ '**ಮಧ್ಯಮಾ**' ಎನ್ನಿಸಿಕೊಳ್ಳುತ್ತದೆ. '**ವೈಖರೀ**' ಮಾತು ಮಾತ್ರ ಪ್ರಾಣ ಅಪಾನ ಪ್ರೇರಿತ ಅಗ್ನಿಯ ಸಂಸ್ಪರ್ಶಹೊಂದಿ ಕಂಠ, ತಾಲು, ಮೊದಲಾದ ಅಕ್ಷರಗಳ ಹುಟ್ಟು ಸ್ಥಾನಗಳಿಂದ ವರ್ಣಗಳಾಗಿ ಹೊರಗೆ ವ್ಯಕ್ತವಾಗುತ್ತದೆ. ಇದೇ ವೇದ ಮೊದಲಾದ ವಿಶ್ವಸಾಹಿತ್ಯಾತ್ಮಕ ಶಬ್ದ ಪ್ರಪಂಚವಾಗಿ ವಿಕಾಸ ಗೊಳ್ಳುತ್ತದೆ.[೨]

'ನಾಮೈವೇದಂ ರೂಪತ್ವೇನ ವವೃತೇ ರೂಪಂ ಚೇದಂ ನಾಮ ಭಾವೇಽವತಸ್ಥೇ।' *('ವಾಕ್ಯಪದೀಯ, ಬ್ರಹ್ಮಕಾಂಡ, ಶ್ಲೋಕ೧೨)*

ಹೀಗೆ ಅಶಬ್ದದಿಂದ (ಪರಾದಿಂದ) ಶಬ್ದವಾಗಿ ವಿಕಾಸಗೊಂಡ ಶಬ್ದಗಳಿಗೆ ಹಾಗೂ ಲೋಕವೇದಗಳಿಗೆ ಸಂಬಂಧವನ್ನು ಉಂಟು ಮಾಡುವ ಕರ್ತೃ ಬೇರೊಬ್ಬನಿಲ್ಲ. ಶಬ್ದಗಳಿಗೆ ಶಬ್ದದಿಂದಲೇ ಸಂಬಂಧ *('ವಾಕ್ಯಪದೀಯ', ಬ್ರಹ್ಮಕಾಂಡ ಶ್ಲೋಕ ೨೬)*. ಶಬ್ದ ಮತ್ತು ಅರ್ಥಗಳ ಸಂಬಂಧ ನಿತ್ಯವೆಂದು ಸೂತ್ರ ಭಾಷ್ಯಾದಿಗಳನ್ನು ರಚಿಸಿದ ಮಹರ್ಷಿಗಳು ಸಾರಿದ್ದಾರೆ. *(ಶ್ಲೋಕ, ೨೩)*

ಶಬ್ದಸಂಸ್ಕಾರದೊಡಗೂಡಿದ ಈ ರೀತಿಯ 'ಶಬ್ದಬ್ರಹ್ಮ'ದ ಆಮೂಲಾಗ್ರ (ಪರಾದಿಂದ ವೈಖರೀ ವರೆಗೆ, ವೈಖರೀ ಯಿಂದ ಪರಾವರೆಗೆ) ಜ್ಞಾನ ಪಡೆದಿರುವವನು, ಶಬ್ದ ಶಬ್ದಾರ್ಥಗಳ (ವಾಚ್ಯ–ವಾಚಕಗಳ) ಸಂಬಂಧದ ಮರ್ಮವನ್ನರಿತವನು ಬ್ರಹ್ಮ ಅಮೃತವನ್ನು ಹೊಂದುವವನು, ಎಂದು ಇಲ್ಲಿ ಹೇಳಿದೆ:

ತಸ್ಮಾದ್ಯಃ ಶಬ್ದಸಂಸ್ಕಾರಃ ಸಾ ಸಿದ್ಧಿಃ ಪರಮಾತ್ಮನಃ।
ತಸ್ಯ ಪ್ರವೃತ್ತಿತತ್ತ್ವಜ್ಞಃ ತದ್‌ಬ್ರಹ್ಮಾಮೃತಮಶ್ನುತೇ ॥
(ಬ್ರಹ್ಮಕಾಂಡ, ಶ್ಲೋಕ೧೩೨)

ಮುಕ್ತಿಮಾರ್ಗ

ಅಶಬ್ದದ ಶಬ್ದವಿಸ್ತಾರದ ಮೂಲಾಗ್ರ ಅರ್ಥಬೋಧೆಯು ಬುದ್ಧಿಗತ ಚೈತನ್ಯನಲ್ಲಿರುತ್ತದೆ. ಅದನ್ನು (ಶಬ್ದಾತ್ಮವನ್ನು) ಕ್ರಮ ಸಂಹಾರ ಯೋಗದಿಂದ ಅಶಬ್ದದಲ್ಲಿ ಉಪಸಂಹರಿಸಿ (ಲೀನ ಗೊಳಿಸಿ) ವ್ಯಕ್ತಿ ಪ್ರಾಣವೃತ್ತಿಯಿಂದ ಮೇಲೇರಿ 'ಶಬ್ದ'ತತ್ತ್ವದಲ್ಲಿ ನೆಲೆನಿಲ್ಲಬೇಕು. ಜ್ಞಾನದಲ್ಲಿ ವಾಕ್ಕನ್ನಿರಿಸಿ, ವಾಕ್ಕಿನ ಆಯಾಯ ಸ್ಥಾನಗತ ಭೇದಗಳ ಅವಿದ್ಯೆಯಿಂದ ಉಂಟಾಗುವ ವಿಕಾರಗಳ[೩] ಮರ್ಮವನ್ನರಿತು, ಅವುಗಳಿಂದ ಉಂಟಾಗುವ ಬಂಧನವನ್ನು ಕಳಚಿಕೊಳ್ಳಬೇಕು. ಆನಂತರ ಅಂತರಂಗದಲ್ಲಿ ಜ್ವಲಿಸುತ್ತಿರುವ ಶಬ್ದಬ್ರಹ್ಮಾತ್ಮಕ ಜ್ಯೋತಿಯನ್ನು ಹೊಂದಿ ಎಲ್ಲಾ ಗಂಟುಗಳನ್ನೂ ಕತ್ತರಿಸಿಕೊಂಡು ಪರಾಜ್ಯೋತಿಯಲ್ಲಿ ಒಂದಾಗಬೇಕು.

ಜ್ಯೋತಿರಾಂತರಮಾಸಾದ್ಯ ಛಿನ್ನಗ್ರಂಥಿ-ಪರಿಗ್ರಹಃ।
ಪರೇಣ ಜ್ಯೋತಿಷೈಕತ್ವಂ ಛಿತ್ವಾ ಗ್ರಂಥೀನ್ ಪ್ರಪದ್ಯತೇ ॥

ಹೀಗೆ ಈ ಶಬ್ದಬ್ರಹ್ಮವು ಮೋಕ್ಷವನ್ನು ಕರುಣಿಸುವ ವೇದಾಂತ ವಿದ್ಯಾ ಸ್ವರೂಪವುಳ್ಳದ್ದೂ(ನಿವೃತ್ತ್ಯಾತ್ಮಕ) ಪ್ರಪಂಚದಲ್ಲಿ ಬದುಕಲು ಉಪಯೋವಾಗುವ ವಿವಿಧ ವಿದ್ಯೆಗಳ (ಪ್ರವೃತ್ತ್ಯಾತ್ಮಕ) ಸ್ವರೂಪ ವುಳ್ಳದ್ದೂ ಆಗಿದೆ.[೪]

ಉಪಸಂಹಾರ

'ಅಸದ್ವಾ ಇದಮಗ್ರ ಆಸೀತ್ತತೋ ವೈ ಸದಜಾಯತ' ಎಂಬ ಶ್ರುತಿವಾಕ್ಯವು, ಅವ್ಯಕ್ತವಾದ (ಅಸತ್) ಶಬ್ದವೇ ಮೊದಲಿಗೆ ಇದ್ದು ಅದು ಮುಂದೆ ಸದ್ವಸ್ತುವಾದ ವಿಶ್ವಾತ್ಮಕ ಚರಾಚರವಸ್ತುಗಳಾಗಿ ವಿವರ್ತಗೊಂಡಿತು ಎಂದು ತಿಳಿಸುತ್ತದೆ. ಅದರಂತೆ ಭರ್ತೃಹರಿ 'ವಾಕ್ಯಪದೀಯ'ದಲ್ಲಿ, ''ಅಶಬ್ದವು ('ಪರಾ') ನಿತ್ಯವೂ ಅನಾದಿ ನಿಧನವೂ ಆದುದು. ಅದು ಪ್ರವೃತ್ತವಾದಾಗ ಕ್ರಮವಾಗಿ ವಿಕಾಸ ಗೊಳ್ಳುತ್ತಾ ಈ ಎಲ್ಲವೂ ಆಗುತ್ತದೆ. ಅದೇ ನಿವೃತ್ತವಾದಾಗ ಮತ್ತೆ ಆ ಶಬ್ದದಲ್ಲೇ ಲೀನವಾಗುತ್ತದೆ. 'ಅಶಬ್ದ'ದ ಈ ಪ್ರವೃತ್ತಿ-ನಿವೃತ್ತಿ ರೂಪ ಪ್ರಕ್ರಿಯೆಯು ಪ್ರತಿ ಜೀವಿಯ ಪ್ರತಿದಿನದ ಅನುಭೂತಿಗೆ, ಸಮಸ್ತ ವಿಶ್ವದ ಆಗು-ಹೋಗುಗಳಿಗೆ, ಅದರ ಆತ್ಯಂತಿಕ ಪ್ರಳಯಕ್ಕೆ ಪುನಃ ಸೃಷ್ಟಿಗೆ ಕಾರಣವಾಗುತ್ತದೆ. ಈ ಮರ್ಮವನ್ನರಿತವನು, ಏನೂ ಇಲ್ಲದ, ಕಾಲ್ಪನಿಕವಾದವುಗಳನ್ನು ಕ್ರಮವಾಗಿ ಒಂದರೊಳಗೆ ಒಂದಾಗಿ ಲೀನಗೊಳಿಸುತ್ತಾ ಬ್ರಹ್ಮಾಮೃತವನ್ನು ಅನುಭವಿಸುವನು. **'ಬ್ರಹ್ಮೈವ ಸ ಬ್ರಹ್ಮವಿತ್'** ಎಂಬಂತೆ ಬ್ರಹ್ಮವೇ ಆಗಿಬಿಡುವನು'' ಎಂದು ಸಿದ್ಧಪಡಿಸಿರುವನು.

---

೨. **ಸರ್ವಂಪರಾತ್ಮಕಂ ಪೂರ್ವಂ ಜ್ಞಪ್ತಿಮಾತ್ರಮಿದಂ ಜಗತ್।**
ಜ್ಞಪ್ತೇರ್ಬಭೂವ ಪಶ್ಯಂತೀ ಮಧ್ಯಮಾ ವಾಕ್ ತತಃ ಸ್ಮೃತಾ ॥೫॥
ವಕ್ತ್ರೇ ವಿಶುದ್ಧ ಚಕ್ರಾಖ್ಯೇ ವೈಖರೀ ಸಾ ಮತಾ ತತಃ।
ಸೃಷ್ಟ್ಯಾವಿರ್ಭಾವಮಾಸಾದ್ಯ ಮಧ್ಯಮಾ ವಾಕ್ ಸಮಾ ಮತಾ ॥೬॥

'ಮೊದಲಿಗೆ ಎಲ್ಲವೂ 'ಪರಾ' ರೂಪದಲ್ಲಿತ್ತು. ಈ ಸಮಸ್ತ ಜಗತ್ತು ಕೂಡ ಕೇವಲ ಜ್ಞಾನಮಾತ್ರ ಅಥವಾ ತಿಳಿವಳಿಕೆ ಮಾತ್ರವಾಗಿ ಇದ್ದಿತು. ಈ ಜ್ಞಾನದಿಂದ 'ಪಶ್ಯಂತೀ' ಹಾಗೂ ಅದರಿಂದ 'ಮಧ್ಯಮಾ', ವಾಕ್ಕು ಉಂಟಾದವು. ಸೃಷ್ಟಿಯಾಗಬೇಕೆಂದಾಗ ಈ ಮಧ್ಯಮಾ ವಾಕ್ ವಿಶುದ್ಧ ಚಕ್ರದಲ್ಲಿ 'ವೈಖರೀ' ರೂಪದಲ್ಲಿ ಪ್ರಕಟಗೊಂಡಿತು.'

ಇದೇ ಅಭಿಪ್ರಾಯ ತೈತ್ತಿರೀಯ ಬ್ರಾಹ್ಮಣದ, '**ತಾಂ ದೇವೀಂ ವಾಚಂ ಹವಿಷಾ ಯಜಾಮಹೇ। ಸಾ ನೋ ದಧಾತು ಸುಕೃತಸ್ಯ ಲೋಕೇ। ಚತ್ವಾರಿ ವಾಕ್ಪರಿಮಿತಾ ಪದಾನಿ ತಾನಿ ವಿದುರ್ಬ್ರಾಹ್ಮಣಾ ಯೇ ಮನೀಷಿಣಃ। ಗುಹಾ ತ್ರೀಣಿ ನಿಹಿತಾ ನೇಂಗಯಂತಿ। ತುರೀಯಂ ವಾಚೋ ಮನುಷ್ಯಾ ವದಂತಿ** *(ತೈತ್ತಿರೀಯ ಬ್ರಾಹ್ಮಣ, ೨.೮.೮)* ಈ ಮಂತ್ರಗಳಲ್ಲಿ ವ್ಯಕ್ತವಾಗಿದೆ. ಈ ರೀತಿಯ ವಾಗ್ರೂಪದಲ್ಲಿ ಕಾಮನೆಗಳನ್ನು(ಅಭೀಷ್ಟಗಳನ್ನು) ವರ್ಷಿಸುವ (ವೃಷಭರೂಪಿ) ಮಹಾದೇವನು ಮನುಷ್ಯನ್ನು ಪ್ರವೇಶಿಸಿದ್ದಾನೆ — ಎಂದು ಈ ಮಂತ್ರದ ಮುಂದುವರಿದ ಭಾಗ ತಿಳಿಸುತ್ತದೆ.

---

೩. **ಜಾಯತೇ**–ಹುಟ್ಟುತ್ತದೆ, **ಅಸ್ತಿ**–ಇರುತ್ತದೆ, **ವಿಪರಿಣಮತೇ**–ಬದಲಾಗುತ್ತದೆ, **ವರ್ಧತೇ**–ಬೆಳೆಯುತ್ತದೆ, **ಹ್ರಸತಿ**–ಕ್ಷೀಣಿಸುತ್ತದೆ, **ನಶ್ಯತಿ**–ನಾಶವಾಗುತ್ತದೆ — ಇವೇ ಆರು ಬಗೆಯ ವಿಕಾರಗಳು.

೪. '**ದ್ವೇ ವಾವ ಬ್ರಹ್ಮಣೋ ಅಭಿಧ್ಯೇಯೇ ಶಬ್ದಶ್ಚಾಶಬ್ದಶ್ಚಾಥ ಶಬ್ದೇ ನೈವಾಶಬ್ದಮಾವಿಷ್ಕ್ರಿಯತೇಽಥ ತತ್ರ ಓಮಿತಿ ಶಬ್ದೋಽನೇನೋರ್ಧ್ವಮುತ್ಕ್ರಾಂತೋಽಶಬ್ದೇ ನಿಧನಮೇತ್ಯಥಾ ಹ್ಯೈಷಾ ಗತಿರೇತದಮೃತಮೇತತ್ಸಾಯುಜ್ಯತ್ವಂ ನಿವೃತತ್ವಂ..**'(೬.೨೨) *ಮೈತ್ರಾಯಣೀಯ ಉಪನಿಷತ್ತಿನ* ಈ ಮಾತುಗಳು ಜೀವಿಯು ಧ್ಯಾನಿಸಬೇಕಾದ ಬ್ರಹ್ಮವಾಚಕಗಳಾದ ಈ ಶಬ್ದ ಮತ್ತು ಅಶಬ್ದಗಳನ್ನು ಕುರಿತು ಹೇಳುತ್ತಿದೆ. ಈ ಕ್ರಮದಲ್ಲಿ ಸಾಧನೆ ಮಾಡುತ್ತಾ ಊರ್ಧ್ವಗತಿಯನ್ನು ಹೊಂದಿದವನು ಕ್ರಮೇಣ ಅಮೃತತ್ವವನ್ನೂ ಸಾಯುಜ್ಯವನ್ನೂ ಹೊಂದುವನೆಂದು ಉಪನಿಷತ್ತು ತಿಳಿಸುತ್ತದೆ.

ಮಹಾರಾಣಿ ವಾಣಿ ವಿಲಾಸ ಸನ್ನಿಧಾನ ಮತ್ತು ಪ್ರತಿಭಾವರ್ಮಾ

ಮೂಲ : 'Swami Vivekananda: The Great Inspirer', ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ
ಅನುವಾದ : ಸ್ವರ್ಣಗೌರಿ

ಮಹಾರಾಣಿ ವಾಣಿವಿಲಾಸ ಸನ್ನಿಧಾನ

ಧರ್ಮಶೀಲ ರಾಜಪ್ರತಿನಿಧಿ



ಸ್ವಾಮಿ ವಿವೇಕಾನಂದರಿಗೆ ಪಾಶ್ಚಾತ್ಯ ದೇಶದ ಪಯಣದಲ್ಲಿ ಜೆಮ್‌ಶಟ್‌ಜಿ ಟಾಟಾ ಅವರೊಡನೆ ಭೇಟಿಯಾಯಿತು. ಮಾತು ಕತೆಯ ನಡುವೆ ಸ್ವಾಮೀಜಿ ಭಾರತ ದೇಶದ ಮೂಲಸಂಪತ್ತನ್ನು ನಮ್ಮಲ್ಲಿಯೇ ಉಳಿಸಿ ಕೊಳ್ಳಬೇಕೆಂಬ ಇಚ್ಛೆಯನ್ನು ಪ್ರಕಟಿಸಿದ್ದರು. ಸ್ವಾಮೀಜಿಯವರ ಮಾತುಕತೆ, ಅಭಿಪ್ರಾಯ, ಆಲೋಚನೆಗಳು ಟಾಟಾರವರ ಮೇಲೆ ಅದೆಷ್ಟು ಪ್ರಭಾವ ಬೀರಿತೆಂದರೆ ಅವರು ವಿಜ್ಞಾನದ ಆವಿಷ್ಕಾರ ಗಳಿಗಾಗಿ ಸಂಸ್ಥೆಯೊಂದನ್ನು ತೆರೆಯಬೇಕೆಂದು ನಿರ್ಧರಿಸಿದರು. ಅಷ್ಟೇ ಅಲ್ಲದೆ ಆ ಸಂಸ್ಥೆಯ ಉಸ್ತುವಾರಿಯನ್ನು ಸ್ವಾಮೀಜಿಯೇ ವಹಿಸಿಕೊಳ್ಳಬೇಕೆಂದು ವಿನಂತಿಸಿಕೊಂಡರು. ಸಂನ್ಯಾಸಧರ್ಮಕ್ಕೆ ಇದು ತಕ್ಕುದಲ್ಲವೆಂದು ಸ್ವಾಮೀಜಿ ಒಪ್ಪಲಿಲ್ಲ. ಬದಲಾಗಿ ಸೋದರಿ ನಿವೇದಿತಾಳಿಗೆ ಈ ಯೋಜನೆಗೆ ಸಹಾಯ ಮಾಡಲು ಕೋರಿದರು. ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಮೈಸೂರಿನ ರಾಜ ಪ್ರತಿನಿಧಿ ಮಹಾರಾಣಿ ವಾಣಿವಿಲಾಸ ಸನ್ನಿಧಾನರವರನ್ನು ಸ್ವಾಮೀಜಿ ಬಿನ್ನವಿಸಿಕೊಂಡರು.

ಸ್ವಾಮೀಜಿಯ ಬಿನ್ನಹದ ಮೇರೆಗೆ ಮೈಸೂರಿನ ಮಹಾರಾಣಿ ಹಾಗೂ ಯುವರಾಜರು ಪ್ರಥಮ ಭಾರತೀಯ ವಿಜ್ಞಾನ ಸಂಸ್ಥೆ (Indian Institute of Science)ಯನ್ನು ಪ್ರಾರಂಭಿಸಲು ಬೇಕಾದ ಆರ್ಥಿಕ ನೆರವು ಮತ್ತು ೪೦೦ ಎಕರೆ ಜಾಗವನ್ನು ಬೆಂಗ ಳೂರಿನಲ್ಲಿ ನೀಡಿದರು. ದುರದೃಷ್ಟವಶಾತ್, ಸಂಸ್ಥೆಯ ನಿರ್ಮಾಣಕ್ಕೆ ಮುಂಚೆಯೇ ಜೆಮ್‌ಶೆಟ್‌ಜೀ ಟಾಟಾ ಹಾಗೂ ಮಹಾರಾಣಿ ಇಬ್ಬರೂ ಹಠಾತ್ತಾನೆ ಇಹಲೋಕ ತ್ಯಜಿಸಿದರು. ಅಂತೂ ಟಾಟಾರವರ ಕನಸು ೧೯೧೧ರಲ್ಲಿ ನನಸಾಯಿತು. ಫೆಬ್ರವರಿ ೧, ೧೯೧೧ರಂದು ಯುವರಾಜರಾದ ನಾಲ್ಮಡಿ ಕೃಷ್ಣರಾಜ ಒಡೆಯರ್ ಅಸ್ತಿಭಾರವನ್ನು ಹಾಕಿದರು. ಜೆಮ್‌ಶೆಟ್‌ಜೀ ಟಾಟಾರವರ ಇಚ್ಛೆಯಂತೆ ಸಂಸ್ಥೆಯ ನಾಮಕರಣದಲ್ಲಿ ಟಾಟಾರವರ ಹೆಸರು ಇಡಲಿಲ್ಲ. ಬದಲಾಗಿ ೧೯೨೨ರಲ್ಲಿ ಅವರ ಸ್ಮರಣಾರ್ಥವಾಗಿ ಒಂದು ಸ್ಮಾರಕವನ್ನು ನಿರ್ಮಿಸ ಲಾಯಿತು. ಇಂದು ಈ ಸಂಸ್ಥೆಯು ಕಂಪ್ಯೂಟರ್, ಬಾಹ್ಯಾಕಾಶ, ಅಣುಶಕ್ತಿ ಇತ್ಯಾದಿ ಕ್ಷೇತ್ರಗಳಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿ ಭಾರತದ ಕೀರ್ತಿ ಪತಾಕೆಯನ್ನು ಬಹು ಎತ್ತರಕ್ಕೆ ಹಾರಿಸಿದೆ.

ದೊಡ್ಡವರ ಕನಸು ದೊಡ್ಡದಾಗಿಯೇ ಇರುತ್ತದಲ್ಲವೆ?

ಪ್ರತಿಭಾ ವರ್ಮಾ

ಸುಧಾರಕ ತಾಯಿ

ಸುಬ್ರಹ್ಮಣ್ಯ ಅಯ್ಯರ್‌ರವರಿಗೆ ಕೊಡಂಗಲ್ಲೂರಿನ ರಾಜ ವಂಶಸ್ಥರೊಡನೆ ನಿಕಟವಾದ ಸಂಬಂಧವಿತ್ತು. ಏಕೆಂದರೆ ಅಯ್ಯರ್ ಪತ್ನಿ ಪ್ರತಿಭಾ ವರ್ಮ ಆ ರಾಜವಂಶಕ್ಕೆ ಸೇರಿದವಳು. ವಿದ್ಯಾ ವಂತಳೂ, ದೃಢಸ್ವಭಾವದವಳೂ ಆದ ಆಕೆಯ ಹೃದಯವೂ ಬಡ ಬಗ್ಗರಿಗೆ ಅನಾಥರಿಗೆ ದಯೆಯಿಂದ ಕೂಡಿತ್ತು. ದೀನಹೀನರಿಗೆ ಅವಳ ಸಹಾಯಹಸ್ತ ಸದಾ ಚಾಚಿರುತ್ತಿತ್ತು. ಆದರೆ ಒಂದೇ ಒಂದು ಕೊರತೆಯೆಂದರೆ ಆ ದಂಪತಿಗಳಿಗೆ ಮಕ್ಕಳಿರಲಿಲ್ಲ.



ಒಮ್ಮೆ ಸ್ವಾಮಿ ವಿವೇಕಾನಂದರು ಇವರ ಮನೆಗೆ ಭೇಟಿ ನೀಡಿದ್ದರು. ಆ ಸಮಯ ದಲ್ಲಿ ಸ್ವಾಮೀಜಿಯವರ ಆರೋಗ್ಯ ಹದಗೆಟ್ಟಿತ್ತು. ಆದರೆ ಪ್ರತಿಭಾ ವರ್ಮಾಳ ಶ್ರದ್ಧಾಭಕ್ತಿಗಳಿಂದ ಕೂಡಿದ ಅವಿರತ ಸೇವೆ ಯಿಂದಾಗಿ ಸ್ವಾಮೀಜಿ ಶೀಘ್ರವಾಗಿ ಗುಣಮುಖರಾದರು. ಇದರಿಂದ ಸಂತುಷ್ಟ ರಾದ ಸ್ವಾಮೀಜಿ ಆಕೆಗೆ, ''ತಾಯಿ, ನನಗಾಗಿ ನೀವು ಎಷ್ಟೊಂದು ಪರಿಶ್ರಮಪಟ್ಟಿರುವಿರಿ. ಭಗವಂತ ನಿಶ್ಚಿತವಾಗಿ ನಿಮ್ಮನ್ನು ಆಶೀ ರ್ವದಿಸುವನು'' ಎಂದು ಮನಃಪೂರ್ವಕ ಹರಿಸಿ, ವಿದಾಯ ಹೇಳಿ ದರು. ಅವರ ಮನೆಯಿಂದ ಕಾಲಡಿಗೆ ಹೊರಟ ಸ್ವಾಮೀಜಿ ಮಾರನೇ ದಿನ ಹಿಂದಿರುಗಿದರು. ಅವರೊಡನೆ ಏಳು ವರ್ಷದ ಬಾಲಕನನ್ನು ಕರೆತಂದಿದ್ದರು. ಪಾದ್ರಿಯೊಬ್ಬ ಆ ಮಗುವನ್ನು ಚೆನ್ನಾಗಿ ಥಳಿಸು ತ್ತಿದ್ದುದನ್ನು ಕಂಡು, ಮರುಗಿ ಅಲ್ಲಿಂದ ಆತನನ್ನು ಬಿಡಿಸಿಕೊಂಡು ಬಂದಿದ್ದರು. ಮಕ್ಕಳಿಲ್ಲದ ಪ್ರತಿಭಾ ವರ್ಮಾಳಿಗೆ ಸ್ವಾಮೀಜಿ ಆ ಬಾಲಕನ ಜವಾಬ್ದಾರಿಯನ್ನು ಒಪ್ಪಿಸಿದರು. ಮಾಧವನ್ ಪಿಳ್ಳೈ ಎಂಬ ಈತನು ಮುಂದೆ ಕಾಲೇಜಿನಲ್ಲಿ ಹೆಸರಾಂತ ಉಪನ್ಯಾಸಕನಾದನು. ೧೮೯೭ರಲ್ಲಿ ಸ್ವಾಮೀಜಿ ಪಾಶ್ಚಾತ್ಯ ದೇಶದಿಂದ ಭಾರತಕ್ಕೆ ಹಿಂತಿರುಗಿ ಬಂದಾಗ ಮದ್ರಾಸಿನಲ್ಲಿ ಅವರನ್ನು ಸ್ವಾಗತಿಸಲು ಹೋಗಿದ್ದನು. ಸಮಾಜ ಸುಧಾರಣೆಯ ಕಾರ್ಯಗಳಲ್ಲಿ ಪ್ರತಿಭಾ ವರ್ಮಾ ಸಕ್ರಿಯ ವಾಗಿ ಭಾಗವಹಿಸಿದಳು; ಸ್ತ್ರೀಶಿಕ್ಷಣ ಕ್ಷೇತ್ರದಲ್ಲೂ ಬಹಳ ಶ್ರಮಿಸಿ ದಳು. ಕೊಚ್ಚಿಯ ಅಸಹಕಾರ ಚಳುವಳಿಯಲ್ಲೂ ಆಕೆಯೇ ಮುಂದಾಳು.

''ಭಾರತದಲ್ಲಿ ಮಹಿಳೆಯ ವೈಶಿಷ್ಟ್ಯ ಯಾವುದೆಂದರೆ ಅವಳ ತಾಯ್ತನ... ಭೌತಿಕವಾಗಿ ಹುಟ್ಟಿದ ಮಗು ಆರ್ಯನಲ್ಲ; ಆಧ್ಯಾತ್ಮಿಕ ವಾಗಿ ಹುಟ್ಟಿದ ಮಗುವೇ ಆರ್ಯ'' — *ಸ್ವಾಮಿ ವಿವೇಕಾನಂದ*

ಶ್ರೀಮಾತೆಯವರ ಪತ್ರಗಳು – ೧೮

ಅನುವಾದ: ಪ್ರವ್ರಾಜಿಕಾ ಧರ್ಮಪ್ರಾಣಾ

ಪತ್ರ – ೧೦೪

ಶ್ರೀಶ್ರೀದುರ್ಗಾ

ಸೆಪ್ಟೆಂಬರ್, ೧೯೧೩

ಆಶ್ವಯುಜ ೩, ಶುಕ್ರವಾರ

ಶುಭವಾಗಲಿ.

ತಾಯಿ ಸರಯೂ, ನಿನ್ನ ಪತ್ರ ಸಿಕ್ಕಿ ಎಲ್ಲಿಲ್ಲದ ಆನಂದವನ್ನು ಪಡೆದೆ. ನಿನಗೆ ಕಾಯಿಲೆಯಾಗಿದೆ ಎಂದು ಕೇಳಿ ದುಃಖವಾಯಿತು. ಶ್ರೀಠಾಕೂರರು ಆದಷ್ಟು ಬೇಗ ವಾಸಿಯಾಗುವಂತೆ ಮಾಡಲಿ. ಅಲ್ಲದೆ ನಾನೂ ಆಶೀರ್ವಾದ ಮಾಡುತ್ತಿದ್ದೇನೆ. ಇನ್ನು ಹೆಚ್ಚೇನು ಬರೆಯಲಿ? ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆಂದು ತಿಳಿ. ಅಲ್ಲಿ ಎಲ್ಲರಿಗೂ ನನ್ನ ಆಶೀರ್ವಾದ ತಿಳಿಸು.

ಇತಿ ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಪರಮ ಶುಭಪ್ರದಳಾದ,
ಶ್ರೀಮತಿ ಸರಯೂ ಬಾಲಾ ದಾಸಿ
೨೫ ನಂ ಕಾಂಕುಲಿಯಾ ರೋಡ್, ಬಾಲಿಗಂಜ್ – ಕಲ್ಕತ್ತಾ
Calcatta

ಪತ್ರ – ೧೦೫

ಶ್ರೀ ಶ್ರೀ ದುರ್ಗಾ ಶರಣಂ

೧೫.೧೦.೧೯೧೩
Udvodhan office
12,13,Gopal Chandra Neogi Lane
Baghbazar P.O. Calcatta
೨೯ನೇ ಕಾರ್ತಿಕ

ಶುಭವಾಗಲಿ.

ನಿನ್ನ ಪತ್ರವು ಸಿಕ್ಕಿ ಸಮಾಧಾನವಾಯಿತು. ನಿನಗೆ ನನ್ನ ವಿಜಯ ದಶಮಿಯ ಆಶೀರ್ವಾದಗಳು.

ಇತಿ, ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Sriman Surendra Nath Gupta
C/o Sj. Baikunta Nath Gupta
Vil [Vill] Haripur
Sylhet

ಸೂಚನೆ: ಪತ್ರ – ೧೦೬ ಮತ್ತು ೧೧೦ : ಶ್ರೀ ಠಾಕೂರರ ಮೇಲೆ ಅತ್ಯಂತ ಭಕ್ತಿಯಿಂದಿದ್ದ ಈ ಭಕ್ತನು ಅವರ ಪದತಲದಲ್ಲಿ ಶರಣಾಗತರಾಗಲು ಇಚ್ಛಿಸುವ ಭಕ್ತರಿಗೆ ತಾನೇ ಮಂತ್ರದೀಕ್ಷೆ ನೀಡಲು ನಿಶ್ಚಯಿಸಿ, ಅದಕ್ಕಾಗಿ ಶ್ರೀಮಾತೆಯವರ ಸಮ್ಮತಿಗಾಗಿ ಅವರಿಗೆ ಪತ್ರ ಬರೆದನು. ಅದಕ್ಕೆ ಶ್ರೀಮಾತೆಯವರು ಉತ್ತರವಾಗಿ ಒಂದು ಪತ್ರದಲ್ಲಿ ತಮ್ಮ ಸಮ್ಮತಿಯನ್ನು ನೀಡಿದ್ದರೂ ಆಮೇಲೆ ಇನ್ನೊಂದು ಪತ್ರವನ್ನು ಬರೆದು ಈ ಕಾರ್ಯದಲ್ಲಿ ಎಚ್ಚರಿಕೆಯನ್ನು ನೀಡಿ, ತಮ್ಮ ಅಸಮ್ಮತಿಯನ್ನು ಸೂಚಿಸಿದ್ದಾರೆ. ಅಂತೆಯೇ ಮಾತೆಯ ನಿರ್ದೇಶನವನ್ನು ಪಾಲಿಸಿ, ಈ ಭಕ್ತನು ಈ ಕಾರ್ಯದಿಂದ ವಿಮುಖನಾದನು.

ಪತ್ರ – ೧೦೬

Udbodhan Office
12,13, Gopal Chandra Neogi Lane
Baghbazar P.O. Calcutta

ಶುಭವಾಗಲಿ.

ನಿನ್ನ ಪತ್ರವು ಸಿಕ್ಕಿ ವಿಸ್ತಾರವಾಗಿ ಎಲ್ಲವನ್ನೂ ತಿಳಿದುಕೊಂಡೆ. ನೀನು ಬರೆದಿರುವ ಏನೆಂದರೆ, ಶ್ರೀಶ್ರೀಠಾಕೂರರ ಚರಣದಲ್ಲಿ ಶರಣಾಗತರಾಗಲು ಇಚ್ಛಿಸುವ ಭಕ್ತಾದಿಗಳಿಗೆ ನೀನು ಶ್ರೀ ಶ್ರೀ ಠಾಕೂರರ ಮಂತ್ರವನ್ನು ದೀಕ್ಷೆಯಾಗಿ ಕೊಡಲು ಸಾಧ್ಯವೇ ಎಂದು. ಇದಕ್ಕೆ ಉತ್ತರವಾಗಿ ನನ್ನ ಅಭಿಪ್ರಾಯವೇನೆಂದರೆ, ಯಾರಿಗೂ ದೀಕ್ಷೆಯನ್ನು ಕೊಡಲು ನೀನು ಸಮರ್ಥನು ಹಾಗೂ ಅರ್ಹನು ಎಂದು ತೋರಿ, ಒಂದು ವೇಳೆ ನಿನಗೆ ನಿನ್ನಲ್ಲಿ ಆ ಶಕ್ತಿ, ಭರವಸೆ, ಮತ್ತು ವಿಶ್ವಾಸ ಇದ್ದರೆ ನೀನು ದೀಕ್ಷೆಯನ್ನು ಕೊಡಬಹುದು. ಇದಕ್ಕೆ ನನ್ನ ಯಾವುದೇ ಆಕ್ಷೇಪಣೆ ಇಲ್ಲ. ಠಾಕೂರರ ನಾಮವನ್ನು ಬ್ರಾಹ್ಮಣರಿಂದ ಹಿಡಿದು ಚಂಡಾಲರವರೆಗೆ ಎಲ್ಲರಿಗೂ ಕೊಡಲು ಸಾಧ್ಯ.'ಕ್ಲೀಂ' ಬೀಜವನ್ನು ನಾಮದ ಜೊತೆಯಲ್ಲಿ ಸೇರಿಸಿದರೆ ಸಾಕು. ಬ್ರಾಹ್ಮಣನಿಗೆ ಶಕ್ತಿ ಮಂತ್ರವನ್ನೂ ದೀಕ್ಷೆ ಕೊಡಬಹುದು. ಆದರೆ ಉಳಿದ ಜಾತಿಯವರಿಗೆ ಕೊಡಬಾರದು. ಆದರೂ ಒಂದು ಪಕ್ಷ ಬೇರೆ ಯಾವುದಾದರೂ ಜಾತಿಯ ಯಾವುದಾದರೂ ವಂಶದಲ್ಲಿ ಪರಂಪರೆಯಾಗಿ ಶಕ್ತಿ ಮಂತ್ರ, ದೀಕ್ಷೆ ನಡೆದುಕೊಂಡು ಬರುತ್ತಿದ್ದರೆ ಆ ವಿಶೇಷ ವಂಶದ ಜನರಿಗೆ ಶಕ್ತಿ ಮಂತ್ರ ನೀಡಲು ಸಾಧ್ಯ. ಆಮೇಲೆ ಇನ್ನೊಂದು ವಿಷಯ, ಮಂತ್ರ ನೀಡು

ವುದಾದರೆ ಸ್ವಂತ ಇಷ್ಟಮಂತ್ರ ಯಾವತ್ತೂ ಯಾರಿಗೂ ಕೊಡ ಬೇಡ. ಇಲ್ಲಿ ಎಲ್ಲವೂ ಕ್ಷೇಮ. ನಿಮಗೆಲ್ಲರಿಗೂ ನನ್ನ ಆಶೀರ್ವಾದ.

ಇತಿ , ಆಶೀರ್ವಾದಗಳೊಂದಿಗೆ,
ನಿಮ್ಮೆಲ್ಲರ ತಾಯಿ

ಪತ್ರ ಪಡೆದವರ ಹೆಸರು:
ತಾರಕನಾಥ್ ರಾಯ್ ಚೌಧುರಿ (ಬಹುಶಃ ಇರಬಹುದು)

ಸೂಚನೆ: ಈ ಪತ್ರ ಬರೆದು ಮುಂದಿನ ಪತ್ರದಲ್ಲಿಯೇ ಈ ಭಕ್ತನ ಕಲ್ಯಾಣಕ್ಕಾಗಿ ದೀಕ್ಷೆ ಕೊಡುವ ವಿಷಯದಲ್ಲಿ ಶ್ರೀಮಾತೆ ಯವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವರು. ಮಾತ್ರವಲ್ಲ ; ಶ್ರೀಮಾತೆಯವರ ಜೊತೆಯಲ್ಲಿದ್ದ ಶಿಷ್ಯ ಕಪಿಲ್ ಮಹಾರಾಜ್ ದೀಕ್ಷೆ ಕೊಡುವ ವಿಷಯದಲ್ಲಿ ತಮ್ಮ ಅಭಿಪ್ರಾಯ ವನ್ನು ತಿಳಿಸಿ, ಈ ಭಕ್ತನಿಗೆ ಎಚ್ಚರಿಕೆಯನ್ನು ನೀಡಿ ಪತ್ರ ಬರೆದು, ಶ್ರೀಮಾತೆಯವರ ಪತ್ರದ ಜೊತೆಯಲ್ಲಿ ಕಳುಹಿಸಿದ್ದಾರೆ. ಆ ಪತ್ರದ ಅನುವಾದವನ್ನೂ ಕೆಳಗೆ ಕೊಡಲಾಗಿದೆ.

ಪತ್ರ - ೧೧೦

೧.೧.೧೯೧೪

೮ನೇ ಮಾಘ, 'ಉದ್ಬೋಧನ '

ಶುಭವಾಗಲಿ.

ಮಗೂ, ನಿನಗೆ ನನ್ನ ಆಶೀರ್ವಾದ. ಸೊಸೆಗೆ ಕಾಯಿಲೆ ಯಾಗಿದೆ ಎಂದು ಕೇಳಿ ದುಃಖವಾಯಿತು. ಅವಳಿಗೆ ನನ್ನ ಆಶೀ ರ್ವಾದ ತಿಳಿಸು. ಮಂತ್ರದೀಕ್ಷೆಯನ್ನು ನೀಡುವ ಸಾಹಸ ಮಾಡ ದಿರು. ಕೊಡದಿರುವುದೇ ಉತ್ತಮ. ಇಲ್ಲಿ ಎಲ್ಲವೂ ಕ್ಷೇಮ. ನಾನು ಚೆನ್ನಾಗಿದ್ದೇನೆ.

ಇತಿ ಆಶೀರ್ವಾದ ನೀಡುತ್ತಿರುವ
ನಿನ್ನ ತಾಯಿ

ಪತ್ರ ಪಡೆದವರ ಹೆಸರು ಮತ್ತು ವಿಳಾಸ
Sriman Taraknath Roy Chowdhury
Sub Registrar,
Manahardi (Dacca)

ಕಪಿಲ್ ಮಹಾರಾಜ್ ಬರೆದಿರುವ ಪತ್ರ

ಶ್ರದ್ಧೇಯ,

ಎರಡು ತಿಂಗಳು ಕೇದಾರ ಬದರಿ ಮೊದಲಾದ ಸ್ಥಳಗಳಿಗೆ ತೀರ್ಥಯಾತ್ರೆ ಮಾಡಿ ಮರಳಿ ಇಲ್ಲಿಗೆ ಬಂದಿದ್ದೇನೆ. ನಿಮ್ಮ ನಿರ್ಧಾರವನ್ನು ಬದಲಿಸಿದಿರಿ ಎಂಬುದನ್ನು ತಿಳಿಸಿ ಸಮಾಧಾನ ವನ್ನು ಕೊಡಿ. ನೀವು ಯಾರಿಗಾದರೂ ದೀಕ್ಷೆಯನ್ನು ಕೊಡುವ ವಿಷಯದ ಬಗ್ಗೆ ನನ್ನ ವೈಯಕ್ತಿಕವಾದ ಕೆಲವು ಮಾತುಗಳಿವೆ. ಅದನ್ನು ಕೆಳಗೆ ತಿಳಿಸುತ್ತಿದ್ದೇನೆ.

ಶ್ರೀಮಾತೆಯವರು ಹಾಗೂ ಪೂಜನೀಯ ಶಾರದಾನಂದ ಮಹಾರಾಜ್ ಮೊದಲಾದ ಠಾಕೂರರ ಸಂನ್ಯಾಸಿ ಶಿಷ್ಯ ವೃಂದ ದವರು ಹೇಳಿರುವುದನ್ನು ನಾನು ಕೇಳಿದ್ದೇನೆ, ದೀಕ್ಷೆಯನ್ನು ಕೊಡುವವರು ಗುರು ಆಗುತ್ತಾರೆ ಮತ್ತು ಗುರು ಶಿಷ್ಯರ ಸಕಲ ಪಾಪಗಳಿಗೆ ಹೊಣೆಗಾರರಾಗುತ್ತಾರೆ. ಒಂದು ವೇಳೆ ಗುರುವು ಸಿದ್ಧ ಮಹಾಪುರುಷನಾದರೆ ಅವನಿಗೆ ಯಾವ ಹಾನಿಯೂ ಬರುವುದಿಲ್ಲ. ಅದಲ್ಲದಿದ್ದರೆ ಗುರು ಭಯಂಕರ ಅಪಾಯದ ಅಪಾರ ಸಮುದ್ರಕ್ಕೆ ಬೀಳಬೇಕಾಗಬಹುದು.

ನಮ್ಮ ಮಠದಲ್ಲಿ ಈಗ ಇರುವ ಸಂನ್ಯಾಸಿಗಳ ಮಧ್ಯೆ ಒಬ್ಬರು ಸಂನ್ಯಾಸಿಗಳಲ್ಲದೆ ಇನ್ನು ಯಾರೂ ಯಾರಿಗೂ ದೀಕ್ಷೆಯನ್ನು ಕೊಡುತ್ತಿಲ್ಲ. ಇನ್ನೇನು, ಪೂಜನೀಯ ಪ್ರೇಮಾನಂದ ಮಹಾ ರಾಜ್ ಮತ್ತು ಶಾರದಾನಂದ ಮಹಾರಾಜರೂ ಸಹ ಕೊಡುತ್ತಿಲ್ಲ.

ನನ್ನ ಈ ಮಾತುಗಳನ್ನು ಒಂದು ಸಲ ಚಿಂತಿಸಿ ನೋಡುವಿ ರೆಂದು ಆಶಿಸುತ್ತೇನೆ. ಇಲ್ಲಿ ಎಲ್ಲವೂ ಕ್ಷೇಮ. ನೀವು ಪತ್ನಿ ಸಮೇತ ನನ್ನ ಪ್ರಣಾಮ ಸ್ವೀಕರಿಸಿ.

ಇತಿ ನಮಸ್ಕಾರದೊಂದಿಗೆ,
ಕಪಿಲ್

ಪತ್ರ - ೧೧೭

ಶ್ರೀ ಶ್ರೀ ದುರ್ಗಾಮಾತಾ

೧೮.೧೨.೧೯೧೩
ಪೌಷ ೩, ಲಕ್ಷ್ಮೀವಾರ

ತಾಯಿ ಸರಯೂ,

ನಿನ್ನ ಪತ್ರವು ಸಿಕ್ಕಿದೆ. ಶರತ್ ಮಹಾರಾಜರಿಗೆ ಕಾಯಿಲೆ. ಇಂದಿಗೆ ೬, ೭ ದಿನಗಳಿಂದ ಅನ್ನ ಊಟ ಮಾಡಿಲ್ಲ. ಸ್ವಲ್ಪ ವಾಸಿ ಯಾಗಲಿ. ಶರತ್ ಮಹಾರಾಜ್ ಸ್ವಲ್ಪ ಹುಷಾರಾದರೆ ಹೋಗು ತ್ತೇನೆ. ನೀನು ಶೋಕಹರಣನನ್ನು ಒಂದು ಸಲ ಕಳುಹಿಸು. ನೀನು ಯಾವ ದಿನವೆಂದು ಹೇಳುವೆಯೋ ಆ ದಿನವೇ ಹೋಗುವೆನು. ಮತ್ತೆ ಇಲ್ಲಿ ಎಲ್ಲರೂ ಚೆನ್ನಾಗಿದ್ದಾರೆ. ರಾಧು ಒಂದು ರೀತಿ ಚೆನ್ನಾಗಿ ದ್ದಾಳೆ. ನಾನು ಶಾರೀರಿಕವಾಗಿ ಈಗ ಚೆನ್ನಾಗಿದ್ದೇನೆ. ನೀನು ಹೇಗಿ ರುವೆ ಎಂದು ಬರೆ. ಅಲ್ಲಿ ಎಲ್ಲರೂ ಹೇಗಿದ್ದಾರೆ. ನೀವೆಲ್ಲರೂ ಚೆನ್ನಾಗಿದ್ದೀರೆಂದು ಕೇಳಿ ಸಮಾಧಾನವಾಯಿತು. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು.

ಇತಿ, ನಿನ್ನ ತಾಯಿ.

ಪತ್ರ ಪಡೆದವರ ಹೆಸರು ಮತ್ತು ವಿಳಾಸ
ಶ್ರೀಮತಿ ಸರಯೂ ಬಾಲಾ ದೇವಿ
25, Kankulia Road
Ballygange, Calcatta

ಸ್ವಾಮಿ ವಿವೇಕಾನಂದರ ಶಿಷ್ಯ

ಶರತ್‌ಚಂದ್ರ ಚಕ್ರವರ್ತಿ

ಇಂಗ್ಲಿಷ್ ಮೂಲ : **ಛಾಯಾ ಬ್ಯಾನರ್ಜಿ** ಸಂಗ್ರಹಾನುವಾದ: **ಸ್ವರ್ಣಗೌರಿ**

ಭಾಗ ೩

ಶ್ರೀಮಾತೆಯವರು ಶರತ್‌ನನ್ನು ಭೇಟಿಯಾದಾಗಲೆಲ್ಲಾ ಅವನು ಸುಮಧುರ ಕಂಠದಿಂದ ಹಾಡುವುದನ್ನು ಕೇಳಲು ಇಚ್ಛಿಸುತ್ತಿದ್ದರು. ಒಮ್ಮೆ ಭಕ್ತನೊಬ್ಬನೊಡನೆ, ''ನಿನ್ನೆ ನೀನು ಬಲರಾಮನ ಮನೆಗೆ ಬರಲಿಲ್ಲ. ಶರತ್‌ಚಂದ್ರನು ಕೆಲವು ಹಾಡುಗಳನ್ನು ಹಾಡಿದ. ಅಹಾ! ಏನು ಭಕ್ತಿ! ಎಂತಹ ಮಾಧುರ್ಯ!'' ಎಂದು ಉದ್ಗರಿಸಿದರು. ಸಮಯ ದೊರೆತಾಗಲೆಲ್ಲಾ ಬೇಲೂರು ಮಠಕ್ಕೆ ಭೇಟಿ ನೀಡುತ್ತಿದ್ದು, ಆರಾತ್ರಿಕದ ನಂತರ ತಾನೇ ರಚಿಸಿದ ಹಾಡುಗಳನ್ನು ಹಾಡುತ್ತಾ ಆನಂದದಿಂದ ನೃತ್ಯ ಮಾಡುತ್ತಿದ್ದನು. ಶ್ರೀರಾಮಕೃಷ್ಣರ ನೇರ ಶಿಷ್ಯರಾದ ಸ್ವಾಮಿ ಬ್ರಹ್ಮಾನಂದ, ಪ್ರೇಮಾನಂದ, ಶಿವಾನಂದರು ಮತ್ತು ಗಿರೀಶ್‌ಚಂದ್ರ ಘೋಷ್ ನೃತ್ಯದಲ್ಲಿ ಪಾಲ್ಗೊಳ್ಳುತ್ತಿದ್ದರು.

ಒಮ್ಮೆ ಪೂರ್ಣಿಯಾ ಎಂಬ ಸ್ಥಳದಲ್ಲಿ ಕೆಲಸ ಮಾಡುತ್ತಿದ್ದಾಗ ತನ್ನ ಗುರುವಿನ ಅಪಾರ ಕರುಣೆ ಹಾಗೂ ಅಹೇತುಕ ಕೃಪೆಯ ಅನುಭವವಾಯಿತು. ಅದೊಂದು ಗುರುವಿನ ಜಯಂತ್ಯುತ್ಸವದ ಶುಭದಿನ. ಶರತ್‌ಚಂದ್ರನು ಕೆಲಸಕ್ಕೂ ಹೋಗಲಿಲ್ಲ , ರಜೆಯ ಚೀಟಿಯನ್ನೂ ಕಳುಹಿಸಿರಲಿಲ್ಲ. ಆ ದಿನವೇ ಇದ್ದಕ್ಕಿದ್ದಂತೆ ಬ್ರಿಟಿಷ್ ಅಧಿಕಾರಿಯೊಬ್ಬರು ತನಿಖೆಗೆಂದು ಕಛೇರಿಗೆ ಭೇಟಿಯಿತ್ತರು. ಮಾರನೆಯ ದಿನ ಸುದ್ದಿ ತಿಳಿದು ಕಳವಳದಿಂದ ಕಛೇರಿಗೆ ಧಾವಿಸಿದವನಿಗೆ ಮಹದಾಶ್ಚರ್ಯವೇ ಕಾದಿತ್ತು! ಕಛೇರಿಯಲ್ಲಿನ ತನ್ನ ಕೆಲಸಕ್ಕೆ ಶ್ಲಾಘನೆಯ ಪತ್ರ ಕಾಯುತ್ತಿತ್ತು. ಮೊದಲೇ ಬ್ರಿಟಿಷರ ಕುದೃಷ್ಟಿಯಲ್ಲಿದ್ದವನಿಗೆ ಈಗ ಕರ್ತವ್ಯಲೋಪವೆಂಬ ಘೋರ ಅಪರಾಧಕ್ಕೆ ಗುರಿಯಾಗಿ ಶಿಕ್ಷಿತನಾಗುವ ಬದಲು ಮೆಚ್ಚುಗೆಯ ಪತ್ರ! ತನ್ನ ಕಣ್ಣನ್ನೇ ನಂಬಲಾರದಾದ. ಗುರುವಿನ ಕೃಪೆಯನ್ನರಿತ ಶರತ್‌ನ ಮನ ಹಾಗೂ ನಯನಗಳೆರಡೂ ತುಂಬಿ ಬಂದವು.

ಬ್ರಾಹ್ಮಣ ಸಂಪ್ರದಾಯಸ್ಥರ ಕುಟುಂಬದಲ್ಲಿ ಜನಿಸಿದ ಶರತ್ ತುಂಬಾ ಆಚಾರಶೀಲನಾಗಿದ್ದನು. ಆದರೆ ಸ್ವಾಮೀಜಿಯವರ ಒಡನಾಟದಲ್ಲಿ ತನ್ನ ಆಚಾರ, ಸಂಪ್ರದಾಯಗಳನ್ನು ಮೀರಿ ಬೆಳೆದು ನಿಂತನು. ಅಷ್ಟೇ ಅಲ್ಲದೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿನ ಒಳ್ಳೆಯ ವಿಚಾರಗಳಿಗೆ ಮನಸೋತು ಅವರಂತೆಯೇ ಉಡುಪನ್ನು ಧರಿಸುತ್ತಿದ್ದನು. ಆದರೆ ಪುರುಲಿಯಾದಲ್ಲಿದ್ದಾಗ ಉಡುಪಿನಲ್ಲಿ ಸ್ವಾಮೀಜಿಯವರನ್ನು ಅನುಕರಿಸುತ್ತಾ ಅವರ ಚಿಂತನೆಯಲ್ಲಿಯೇ ಸದಾ ಮಗ್ನನಾಗಿರುತ್ತಿದ್ದನು. ಆ ಸಮಯದಲ್ಲಿ ಸಂಸ್ಕೃತದ ಶ್ಲೋಕಗಳು ಸ್ಫುರಿಸುತ್ತಿದ್ದವು. ಪರಿಣಾಮವಾಗಿ 'ಶ್ರೀರಾಮಕೃಷ್ಣ ಪಾಂಚಾಲಿ' ಪ್ರಕಟವಾಯಿತು. ಶ್ರೀಮಾತೆಯವರು ಹೇಳಿಕೊಟ್ಟ ಶ್ರೀರಾಮಕೃಷ್ಣರ ಪೂಜೆಯ ವಿವರಣೆಯು ಇದರಲ್ಲಿದೆ.

ಶರತ್ ಅನೇಕ ಧಾರ್ಮಿಕ ಸಭೆಗಳಲ್ಲಿ ಅಧ್ಯಕ್ಷ ಸ್ಥಾನ ವಹಿಸುತ್ತಾ ಉಪನ್ಯಾಸಗಳನ್ನು ನೀಡುತ್ತಾ ಜನರನ್ನು ಆಕರ್ಷಿಸುತ್ತಿದ್ದನು. ಆತನ ವಿಚಾರಧಾರೆಯು ಅತ್ಯಂತ ವಿಶಾಲವಾಗಿದ್ದು, ಅದ್ಭುತವಾದ ಹಾಸ್ಯರಸದಿಂದ ಕೂಡಿತ್ತು. ಪ್ರತಿದಿನವೂ ಮೊಮ್ಮಕ್ಕಳೊಡನೆ ಕುಳಿತು ಆಹಾರ ಸೇವಿಸುವಾಗ ವಿಕಟ ಪದ್ಯಗಳನ್ನು ಹೇಳಿ ಮಕ್ಕಳನ್ನು ನಗಿಸುತ್ತಿದ್ದನು. ಮಿತಾಹಾರಿಯಾದರೂ ರುಚಿಕರವಾದ ಭಕ್ಷ್ಯಗಳನ್ನು ಹಾಗೂ ವೈವಿಧ್ಯತೆಯನ್ನು ಇಷ್ಟಪಡುತ್ತಿದ್ದನು. ಅತಿಥಿಗಳನ್ನೂ ಹಾಗೆಯೇ ಪ್ರೀತಿಯಿಂದ ಸೇವಿಸುತ್ತಿದ್ದದ್ದು ಆತನ ವೈಶಿಷ್ಟ್ಯ.

ಕುಟುಂಬದ ಯಜಮಾನ: ಕುಟುಂಬದ ಜವಾಬ್ದಾರಿಯುತ ಯಜಮಾನನಾಗಿ ಶರತ್‌ಚಂದ್ರನಿಗೆ ಎಲ್ಲಾ ಆಗುಹೋಗುಗಳ ಬಗ್ಗೆಯೂ ಸದಾ ಗಮನವಿರುತ್ತಿತ್ತು. ಕುಟುಂಬದ ಎಲ್ಲಾ ವಿದ್ಯಮಾನಗಳಿಗೂ ತಾನೇ ಹೊಣೆಗಾರಿಕೆಯನ್ನು ಹೊರುತ್ತಿದ್ದನು. ಆಧ್ಯಾತ್ಮಿಕ ಪ್ರವೃತ್ತಿಯುಳ್ಳ, ಸಂಪ್ರದಾಯಸ್ಥ ಕುಟುಂಬದಲ್ಲಿ ಜನಿಸಿದ ಪತ್ನಿ ಮೋಕ್ಷದಾಯಿನಿ ಸರಳ ಸ್ವಭಾವದವಳಾಗಿದ್ದಳು. ಹೆಚ್ಚು ವಿದ್ಯಾವಂತಳಲ್ಲದಿದ್ದರೂ ಆದರ್ಶ ಗೃಹಿಣಿಯಾದ ಆಕೆ ಶ್ರೀಮಾತೆಯವರ ದೀಕ್ಷಿತ ಶಿಷ್ಯೆ. ಅನೇಕ ಬಾರಿ ಶ್ರೀರಾಮಕೃಷ್ಣರ ನೇರ ಶಿಷ್ಯರ ಹಾಗೂ ನಾಗಮಹಾಶಯರ ಸೇವೆ ಮಾಡುವ ಸುಯೋಗ ಪಡೆದ ಸೌಭಾಗ್ಯಶೀಲೆ. ಮನೆಯಲ್ಲಿ ಸಾಧುಸೇವೆ, ಸತ್ಸಂಗಗಳು ನಿರಂತರ ನಡೆಯುತ್ತಿದ್ದವು. ಆಕೆಯ ಕಾಪಟ್ಯರಹಿತ, ನಿರಾಡಂಬರ ವ್ಯಕ್ತಿತ್ವ ಎಲ್ಲರನ್ನೂ ಮೌನವಾಗಿ ಆಕರ್ಷಿಸುತ್ತಿತ್ತು. ಸದಾ ಪತಿಗೆ ವಿಧೇಯಳಾಗಿದ್ದಳು. ಶರತ್‌ಚಂದ್ರನು ಆಕೆಯನ್ನು ಬಹಳ ಆತ್ಮೀಯತೆಯಿಂದ ಕಾಣುತ್ತಿದ್ದನು. ಮಕ್ಕಳ ವಿದ್ಯಾಭ್ಯಾಸವನ್ನು ಪೋಷಿಸುತ್ತಾ ಅಕ್ಕರೆಯಿಂದ ಪ್ರೋತ್ಸಾಹಿಸುತ್ತಿದ್ದನು. ಈ ಆದರ್ಶ ಗೃಹಸ್ಥನಲ್ಲಿ ಅನಾಸಕ್ತಿ ಗೋಪ್ಯವಾಗಿತ್ತು. ಪುತ್ರಿಯರ ವಿವಾಹದ ನಂತರ ಅವರನ್ನು ಕಾಣುವ ಕಾತರತೆ ಹಾಗೂ ಬಯಕೆಯನ್ನು ವ್ಯಕ್ತಪಡಿಸುತ್ತಾ ಪತ್ರ ಬರೆಯುತ್ತಿದ್ದನು. ಆದರೆ ಅವರುಗಳು ತವರುಮನೆಗೆ ಬಂದಾಗ ಅಂತಹ ಆಸಕ್ತಿ ಏನೂ ತೋರುತ್ತಿರಲಿಲ್ಲ. ಅದೇ ದಿವ್ಯತ್ರಯರನ್ನು ಕುರಿತು ಮಾತನಾಡುವಾಗ

ಕಣ್ಣೀರು ಧಾರಾಕಾರವಾಗಿ ಹರಿಯುತ್ತಿತ್ತು. ‘‘ಕೆಸರಿನ ಮೀನಿನಂತಿರು’’ ಎಂಬ ಗುರುವಿನ ಆಣತಿಯೇ ಆಧ್ಯಾತ್ಮಿಕ ಜೀವನದ ದಾರಿದೀಪವಾಯಿತು. ಯಾರು ಶ್ರೀರಾಮಕೃಷ್ಣರ ಹಾಗೂ ಸ್ವಾಮೀಜಿಯವರ ಪದತಲದಲ್ಲಿ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳುತ್ತಾನೆಯೋ, ಆತ ಇನ್ನಾರ ದಾಸನಾಗಲೂ ಇಚ್ಛಿಸನು. ಉನ್ನತ ಬ್ರಿಟಿಷ್ ಅಧಿಕಾರಿಗಳನ್ನು ಪ್ರಸನ್ನಗೊಳಿಸದ ಕಾರಣ ಬಡ್ತಿ ದೊರೆಯದಿದ್ದರೂ ಆತನಿಗೆ ಕಿಂಚಿತ್ತೂ ಬೇಸರವಿರಲಿಲ್ಲ.

ನಿವೃತ್ತಿಯ ಜೀವನ: ಕ್ರಿ.ಶ. ೧೯೩೩ರಲ್ಲಿ ವೃತ್ತಿ ಜೀವನದಿಂದ ನಿವೃತ್ತನಾದ ಮೇಲೆ ಸುಮಾರು ಐದು ವರ್ಷಗಳ ಕಾಲ ಪಿಂಚಣಿ ಹಣದಿಂದ ಕಲ್ಕತ್ತೆಯ ತನ್ನ ಮನೆಯಲ್ಲಿ ಏಕಾಂತವಾಗಿ ಇದ್ದನು. ಆಗಾಗ್ಗೆ ಊರಿಗೆ ಭೇಟಿ ನೀಡಿ ಕುಟುಂಬದ ಸದಸ್ಯರೊಡನೆ ಆನಂದದಿಂದ ಕಾಲಕಳೆಯುತ್ತಿದ್ದನು. ಧೂಮಪಾನ ತ್ಯಜಿಸಿದ್ದರೂ ಅನಾರೋಗ್ಯದಿಂದ ಸ್ವಲ್ಪ ಕಾಲ ನರಳಬೇಕಾಯಿತು. ಈ ಮಧ್ಯೆ ದೃಷ್ಟಿಯೂ ಕ್ಷೀಣಿಸಿತು. ಶ್ರೀರಾಮಕೃಷ್ಣರ ನೇರ ಶಿಷ್ಯರ ಸಂಪರ್ಕದ ಬಯಕೆಯಿಂದ ತನ್ನ ಕೊನೆಗಾಲವನ್ನು ಕಲ್ಕತ್ತೆಯ ಮನೆಯಲ್ಲೇ ಕಳೆಯಲಿಚ್ಛಿಸಿದನು. ಕ್ರಮೇಣ ಅಂತರ್ಮುಖನಾಗಿ ಹೆಚ್ಚಿನ ಸಮಯವನ್ನು ಜಪಧ್ಯಾನಾದಿಗಳಲ್ಲಿ ಕಳೆಯತೊಡಗಿದನು. ಗುರುವಿನಾಜ್ಞೆಯನ್ನು ಪೂರ್ಣಗೊಳಿಸಲು ಈ ಬಿಡುವಿನ ಜೀವನವನ್ನು ಉಪಯೋಗಿಸಿಕೊಂಡು ‘ವಿವೇಕಭಾಷ್ಯ’ವನ್ನು ಬರೆದನು. ಬ್ರಹ್ಮಸೂತ್ರಗಳ ಮೇಲೆ ಭಾಷ್ಯ ಬರೆಯಲು ಹಿಂದೆಯೇ ಸ್ವಾಮೀಜಿ ಆಜ್ಞಾಪಿಸಿದ್ದರು. ಸ್ವಾಮೀಜಿಯವರ ಶಿಷ್ಯರಾದ ಸ್ವಾಮಿ ಶುದ್ಧಾನಂದರು ಹಸ್ತಪ್ರತಿಯನ್ನು ಪರಿಷ್ಕರಿಸಿದರು. ಏಳು ಅಧ್ಯಾಯಗಳುಳ್ಳ ಈ ಹಸ್ತಪ್ರತಿಯು ಒಂದು ಸಾವಿರಕ್ಕೂ ಹೆಚ್ಚು ಪುಟಗಳಿಂದ ಕೂಡಿತ್ತು. ಶರತ್‌ಚಂದ್ರನ ಇಹಲೋಕ ವ್ಯಾಪಾರ ಮುಗಿದ ನಂತರ ಕುರುಷಿ ಎಂಬ ಆತನ ಊರಿನಲ್ಲಿ ಈ ಗೆದ್ದಲು ಹಿಡಿದಿದ್ದ ಹಸ್ತಪ್ರತಿ ದೊರಕಿತು. ನಂತರ ‘ಉದ್ಬೋಧನ’ ಕಛೇರಿಗೆ ಕಳುಹಿಸಲಾಗಿ, ಸ್ವಲ್ಪ ಭಾಗ ಪ್ರಕಟವಾಯಿತು. ಈಗ ಇದರ ಪೂರ್ಣ ಹಸ್ತಪ್ರತಿ ಆತನ ಮಕ್ಕಳ ಬಳಿಯಿದೆ.

ಸ್ವಾಮಿ ಶಾರದಾನಂದರು ಇಚ್ಛಿಸಿದರೆಂದು ಶ್ರೀರಾಮಕೃಷ್ಣ ಶತನಾಮವನ್ನು ರಚಿಸಿ ತನ್ನ ಮೊಮ್ಮಗ ರಘುವೀರನ ಸ್ಮರಣಾರ್ಥವಾಗಿ ಪ್ರಕಟಿಸಿ, ಕಾಶಿಯ ಸೇವಾಶ್ರಮದಲ್ಲಿ ಮುಕ್ತವಾಗಿ ಹಂಚಿದನು. ತನ್ನ ವೃದ್ಧತಾಯಿಯ ಬಯಕೆಯಿಂದಾಗಿ ಮನೆಯವರನ್ನೆಲ್ಲ ಕಾಶಿಗೆ ಕರೆದೊಯ್ಯುತ್ತಿದ್ದನು ಆಗಾಗ್ಗೆ. ಈ ಕಾರಣದಿಂದ ಸೇವಾಶ್ರಮದೊಡನೆ ನಿಕಟ ಬಾಂಧವ್ಯ ಬೆಸದಿತ್ತು.

ಸ್ವಾಮಿ ವಿವೇಕಾನಂದರು ಬಿಳಿಯ ಅಮೃತಶಿಲೆಯ ಮೇಲೆ ಬಿಡಿಸಿದ್ದ ಶ್ರೀರಾಮಕೃಷ್ಣರ ಐದು ಭಾವಚಿತ್ರಗಳನ್ನು ಪಾಶ್ಚಾತ್ಯ ದೇಶದಿಂದ ತಂದಿದ್ದರು. ಅವುಗಳಲ್ಲಿ ಒಂದನ್ನು ತಮ್ಮ ಪ್ರೀತಿಯ ಬಂಗಾಳನಿಗೆ ಕೊಡುಗೆಯಾಗಿ ನೀಡಿದ್ದರು. ವಿಶೇಷ ದಿನಗಳಲ್ಲಿ ಶರತ್‌ಚಂದ್ರನು ಇದನ್ನು ದೇವರಮನೆಯಲ್ಲಿಟ್ಟು ಭಕ್ತಿಭಾವದಿಂದ ಪೂಜಿಸುತ್ತಿದ್ದನು.

ಕ್ರಿ.ಶ. ೧೯೩೯ರಿಂದ ೧೯೪೨ರ ವರೆಗೆ ತನ್ನ ಜೀವಿತದ ಕೊನೆಯ ದಿನಗಳನ್ನು ಬೆಹರಂಪುರ (ಮುರ್ಷಿದಾಬಾದ್)ದ ಮನೆ ಅಥವಾ ತನ್ನ ಹಳ್ಳಿಯ ಮನೆಯಲ್ಲಿ ಕಳೆದನು. ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ಕುರಿತು ಕೇಳಲು ಸದಾ ಸಾಧು ಬ್ರಹ್ಮಚಾರಿಗಳು, ಭಕ್ತರು ಅವರ ಮನೆಯಲ್ಲಿ ತುಂಬಿರುತ್ತಿದ್ದರು. ಶರತ್‌ಚಂದ್ರನಿಗೆ ಶ್ರೀರಾಮಕೃಷ್ಣ ಮಹಾಸಂಘದ ಸಾಧುಗಳೆಂದರೆ ಅಪಾರ ಗೌರವ. ಯಾರೇ ಸಾಧುಗಳು ಬಂದರೂ, ತನ್ನೆಲ್ಲಾ ಕೆಲಸ ಕಾರ್ಯಗಳನ್ನು ಬದಿಗಿಟ್ಟು ಇಡೀ ದಿನ ಅವರನ್ನು ಪ್ರೀತ್ಯಾದರಗಳಿಂದ ಸೇವಿಸುವುದರಲ್ಲೇ ನಿರತನಾಗಿರುತ್ತಿದ್ದನು.

ಕ್ರಿ.ಶ.೧೯೪೧ರಲ್ಲಿ ಎರಡನೇ ಮಹಾಯುದ್ಧದ ವೇಳೆಯಲ್ಲಿ ಮಗನ ಒತ್ತಾಯದ ಮೇರೆಗೆ ಬೆಹರಂಪುರದ ಮನೆಗೆ ಬರುವಾಗಲೇ ಸಂಪೂರ್ಣ ಅಂತರ್ಮುಖಿಯಾಗಿ ಬಿಟ್ಟಿದ್ದನು. ಸದಾ ಆ ಅಮೃತಶಿಲೆಯ ರಾಮಕೃಷ್ಣರ ಭಾವಚಿತ್ರದೊಡನೆ ಕಾಲ ಕಳೆಯುತ್ತಿದ್ದನು. ಆತನ ಪಾಲಿಗೆ ಇದರಲ್ಲಿ ಶ್ರೀರಾಮಕೃಷ್ಣರು ಜೀವಂತವಾಗಿದ್ದರು. ಭಾವಭಕ್ತಿಯಿಂದ ನಿತ್ಯವೂ ಪೂಜೆ, ನೈವೇದ್ಯಗಳನ್ನು ಮಾಡುತ್ತಿದ್ದನು. ಅಂತಹ ವೇಳೆಯಲ್ಲಿ ಭಕ್ತರಾಗಲಿ, ಮನೆಯವರಾಗಲಿ ಅವರಿಗೆ ತೊಂದರೆಯಾಗುವುದೆಂದು ಯಾರೂ ಹತ್ತಿರ ಸುಳಿಯುತ್ತಿರಲಿಲ್ಲ. ಆ ಸ್ಫೂರ್ತಿ ನೀಡುವ ದೃಶ್ಯವನ್ನು ದೂರದಿಂದಲೇ ನೋಡುತ್ತಾ ಸುಮ್ಮನೆ ಕಣ್ತುಂಬಿಸಿಕೊಳ್ಳುತ್ತಿದ್ದರು. ಶರತ್‌ನಿಗಾದರೋ ಸುತ್ತಲಿನ ಪರಿವೆಯೇ ಇರುತ್ತಿರಲಿಲ್ಲ. ಹೀಗೆ ದಿನಗಳು, ತಿಂಗಳುಗಳು ಉರುಳಿದವು. ಆರು ತಿಂಗಳ ಕಾಲ ಇಲ್ಲಿದ್ದು ಜನ್ಮಸ್ಥಳಕ್ಕೆ ಹೊರಟುಹೋದನು.

ಅಂತಿಮ ದಿನಗಳು: ಸ್ವಾಮಿ ವಿವೇಕಾನಂದರ ಶಿಷ್ಯನೆಂದು ಪ್ರಸಿದ್ಧನಾದ ಕಾರಣ ಈ ಹುಟ್ಟೂರಿನಲ್ಲಿ ವಿಶೇಷ ಉಪನ್ಯಾಸಗಳನ್ನು ನೀಡಲು ಅನೇಕ ಕರೆಗಳು ಬರುತ್ತಿದ್ದವು. ಶರತ್ ಯಾವ ಆಹ್ವಾನವನ್ನೂ ತಿರಸ್ಕರಿಸದೆ ಭಾವಪ್ರಚಾರ ಕಾರ್ಯದಲ್ಲಿ ಆನಂದದಿಂದ ಮಗ್ನನಾಗುತ್ತಿದ್ದನು.

ಕೊನೆಯ ದಿನಗಳಲ್ಲಿ ಅಸ್ತಮಾ ರೋಗಕ್ಕೆ ತುತ್ತಾದ ಕಾರಣ, ಅನೇಕಬಾರಿ ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಕಳೆಯಬೇಕಾಗುತ್ತಿತ್ತು. ಅಂತಹ ದಿನಗಳಲ್ಲಿ ಸಮಯ ವ್ಯರ್ಥಗೊಳಿಸದೆ ಮಂತ್ರಜಪದಲ್ಲಿ ರಾತ್ರಿಯೆಲ್ಲಾ ಕಳೆಯುತ್ತಿದ್ದನು. ಕುಳಿತು ತುಕ್ಕು ಹಿಡಿಯುವುದಕ್ಕಿಂತ ದುಡಿದು ಸವೆಯುವುದು ಮೇಲು ಎಂಬ ಸ್ವಾಮೀಜಿಯ ನುಡಿಗೆ ಮಾದರಿಯಾಗಿತ್ತು ಆತನ ಜೀವನ. ಸ್ವಾಮೀಜಿಯವರ ಕುರಿತು ಉಪನ್ಯಾಸ ಮಾಡಲು ಬಂದ ಕರೆಗಳನ್ನು ಮನ್ನಿಸಿ, ಅನಾರೋಗ್ಯವನ್ನು ಲೆಕ್ಕಿಸದೆ ಕಲ್ಲುಮುಳ್ಳಿನ ಹಾದಿಯಲ್ಲಿ ನಡೆಯುತ್ತಾ ಅಥವಾ ದೋಣಿಯಲ್ಲಿ ಹೋಗುತ್ತಿದ್ದನು ಅತ್ಯುತ್ಸಾಹದಿಂದ. ಈ ಸಮಯದಲ್ಲಿ ತನ್ನ ಗುರುವಿನಂತೆ ಉಡುಪು ಧರಿಸುತ್ತಿದ್ದನು.

ಶ್ರೀರಾಮಕೃಷ್ಣರನ್ನು ಕುರಿತು ಮಾತನಾಡುವಾಗ ಅದೆಷ್ಟು ಆವೇಶ ಭರಿತನಾಗಿ ಮಾತನಾಡುತ್ತಿದ್ದನೆಂದರೆ ಸ್ವಾಮಿ ವಿವೇಕಾನಂದರೇ ಅವನ ಮೈಮೇಲೆ ಬಂದಂತೆ ಅನಿಸುತ್ತಿತ್ತು. ಅಷ್ಟೇ ಅಲ್ಲ, ಪವಾಡ ವೆಂದರೆ ಆ ಘಳಿಗೆಗಳಲ್ಲಿ ಅಸ್ತಮಾ, ಉಸಿರಾಟದ ತೊಂದರೆ ಎಲ್ಲವೂ ಮಾಯವಾಗುತ್ತಿದ್ದವು!

ಇನ್ನೇನು ತನ್ನ ಕೊನೆಯ ದಿನಗಳು ಸಮೀಪಿಸುತ್ತಿವೆ ಎಂದರಿತ ಶರತ್‌ಚಂದ್ರನು ಸ್ವಾಮಿ ವಿರಜಾನಂದರ ಆಶೀರ್ವಾದ ಕೋರಿ ಒಂದು ಪತ್ರ ಬರೆದನು. ಅದಕ್ಕೆ ಉತ್ತರವಾಗಿ ಸ್ವಾಮಿಗಳು, ''ಶ್ರೀರಾಮಕೃಷ್ಣರಿಗೆ ಜಯವಾಗಲಿ! ಸ್ವಾಮಿ ವಿವೇಕಾನಂದರಿಗೆ ಜಯವಾಗಲಿ! ಪ್ರತಿಯೊಂದು ಉಸಿರಾಟದೊಡನೆಯೂ ಇದನ್ನು ಜಪಿಸು, ಭಯವೇಕೆ? ಆತಂಕವೇಕೆ? ನೀನೊಬ್ಬ ವೇದಾಂತಿ. ನಿನಗೆಲ್ಲಿ ರೋಗರುಜಿನಗಳ ಬಾಧೆ? ಈ ದೇಹದಿಂದ ನಿನಗೆ ಆಗಬೇಕಾದದ್ದಾರೂ ಏನು? ನೀನು ಸಚ್ಚಿದಾನಂದ, ನೀನೇ ಆ ಪರಬ್ರಹ್ಮ ಸ್ವರೂಪ, ಗುರುವಿಗೆ ಜಯವಾಗಲಿ!'' ಎಂದು ಬರೆದರು.

ಮುಂದಿನ ದಿನಗಳಲ್ಲಿ ಅಸ್ತಮಾ ಖಾಯಿಲೆ ಉಲ್ಬಣವಾಗಿ ನ್ಯುಮೋನಿಯಾಗೆ ತಿರುಗಿತು. ಒಂದು ರಾತ್ರಿ ತನ್ನ ಹಾಸಿಗೆಯ ಬಳಿಯೇ ಕುಳಿತಿದ್ದ ಮಗ ಹಾಗೂ ಅಳಿಯನನ್ನು ಕುರಿತು, ''ಧೂಪ ತನ್ನಿ ಬೇಗ, ಸ್ವಾಮೀಜಿ ಬಂದಿದ್ದಾರೆ'' ಎಂದು ಅರುಹಿ ದೊಡನೆ, ಇನ್ನು ಅಂತ್ಯಕಾಲ ಸಮೀಪಿಸಲು ತಡವಿಲ್ಲವೆಂದು ಮನೆಯವರಿಗೆಲ್ಲಾ ಮನದಟ್ಟಾಗಿಬಿಟ್ಟಿತು. ತಕ್ಷಣವೇ ಧೂಪ ಹಚ್ಚಿದರು. ಆದರೆ ಶರತ್‌ಚಂದ್ರನು ಅಸಹನೆಯಿಂದ, ''ಶ್ರೀರಾಮ ಕೃಷ್ಣರು ಬಂದಿದ್ದಾರೆ. ಅವರು ನಿಂತೇ ಇದ್ದಾರೆ, ಆಸನವನ್ನು ನೀಡಿ. ಏನು ಮಾಡುತ್ತಿದ್ದೀರಿ ನೀವೆಲ್ಲಾ?'' ಎಂದಾಗ ಯಾರ ದರ್ಶನವೂ ಆಗದ ಮನೆಯವರೆಲ್ಲಾ ತಬ್ಬಿಬ್ಬಾದರು. ''ಎಲ್ಲಿ? ಎಲ್ಲಿ?'' ಎಂಬ ಮನೆಯವರ ಪ್ರಶ್ನೆಗೆ ದುಃಖ ಹಾಗೂ ಜುಗುಪ್ಸೆ ಯಿಂದ ನೋಡಿ, ''ಅಲ್ಲೇ ಮುಂದೆ, ಅವರು ನಿಂತೇ ಇದ್ದಾರೆ, ಕಾಣುತ್ತಿಲ್ಲವೇ ನಿಮಗೆ? ಆಹಾ! ನೀವು ಆಸನ ಕೊಡಲಿಲ್ಲ, ಅವರು ಹೊರಟೇ ಹೋದರು'' ಎಂದು ಪೇಚಾಡಿದನು. ಇದಾದ ನಂತರ ಸ್ವಾಮಿ ಬ್ರಹ್ಮಾನಂದರು, ಸ್ವಾಮಿ ಯೋಗಾನಂದರು, ಸ್ವಾಮಿ ಪ್ರೇಮಾನಂದರು, ಸ್ವಾಮಿ ಶಾರದಾನಂದರು ಹೀಗೆ ಇನ್ನಿತರ ನೇರ ಶಿಷ್ಯರು ಒಬ್ಬೊಬ್ಬರಾಗಿ ದರ್ಶನ ನೀಡಿದ ಪರಿ ಣಾಮವಾಗಿ ಶರತ್‌ಚಂದ್ರನು ಪದೇ ಪದೇ ತಲೆಬಾಗಿ ವಂದಿಸು ತ್ತಿದ್ದುದನ್ನು ಉಳಿದವರೆಲ್ಲ ಕಂಡರು.

ಅಂದು ಶನಿವಾರ, ೨೩ನೇ ಆಗಸ್ಟ್, ೧೯೪೨. ಹಿರಿಯ ಮಗ ಜಯಚಂದ್ರನು ಕೆಲಸಕ್ಕೆಂದು ಊರಿಗೆ ಹೊರಟಿದ್ದನು. ಸ್ನಾನ, ತಿಂಡಿಗಳನ್ನು ಮುಗಿಸಿ ತಂದೆಗೆ ವಿದಾಯ ಹೇಳಲು ಕೊಠಡಿ ಯೊಳಗೆ ಕಾಲಿಟ್ಟ ಮಗನು ಸ್ತಂಭೀಭೂತನಾದನು! ಉಸಿರಾಟದ ತೊಂದರೆಯಿಂದಾಗಿ ಒಂದು ತಿಂಗಳಿಂದ ಎದೆಗೆ ದಿಂಬನ್ನು ಒತ್ತಿ ಹಿಡಿದು ಮಲಗಲು ಹೆಣಗಾಡುತ್ತಿದ್ದ ತಂದೆ ಈ ದಿನ ರೋಗದ ಚಿಹ್ನೆಯೇ ಇಲ್ಲದೆ ಪ್ರಶಾಂತವಾಗಿ ಮಲಗಿದ್ದಾರೆ. ಕಾಂತಿಯಿಂದ ಬೆಳಗುತ್ತಿದ್ದ ಆ ಮುಖದಲ್ಲಿ ಶಾಂತಿ ತಾಂಡವವಾಡುತ್ತಿತ್ತು. ಕುಶಲ ಮತಿ ಜಯಚಂದ್ರನಿಗೆ ತನ್ನ ತಂದೆ ಜೀವಿಸಿರಲಾರರೆಂದು ತಿಳಿ ಯಿತು, ಕೂಡಲೇ ಊರಿಗೆ ಹೋಗುವುದನ್ನು ರದ್ದುಗೊಳಿಸಿದನು.

ಆರುವ ಮುನ್ನ ಜ್ಯೋತಿ ಜೋರಾಗಿ ಬೆಳಗುವುದು. ಆ ದಿನ ವೆಲ್ಲಾ ಶರತ್‌ಚಂದ್ರನು ತನ್ನ ಇಷ್ಟದೇವತೆಯೊಡನೆ ಒಂದಾಗಿ ಭಾವದಲ್ಲಿದ್ದಂತೆ ಕಾಣುತ್ತಿತ್ತು. ಇಹಲೋಕದ ಪರಿವೆಯೇ ಇರ ಲಿಲ್ಲ. ಸಂಜೆಯ ಹೊತ್ತಿಗೆ ಎಲ್ಲರ ಮುಖದಲ್ಲೂ ಶ್ರೀರಾಮಕೃಷ್ಣ ರನ್ನೇ ದರ್ಶಿಸುತ್ತಾ, ಪೂರ್ಣಪ್ರಜ್ಞೆಯಿಂದ ದೇಹವನ್ನು ಒಗೆದು ಇಷ್ಟದೇವರ ಪಾದಾರವಿಂದ ಸೇರಿದನು. ಭಗವಂತ ತನ್ನ ಭಕ್ತರನ್ನು ಕೈಹಿಡಿದು ತನ್ನ ಲೋಕಕ್ಕೆ ಕರೆದೊಯ್ಯುವನು.

ಶರತ್‌ಚಂದ್ರನು ಕಣ್ಮರೆಯಾಗಲಿಲ್ಲ. ಜಗದ್ಗುರುಗಳ ಕೈದೀವಿಗೆ ಯಾದ ಇವರುಗಳು ಸಾಮಾನ್ಯ ಜೀವಿಗಳಂತೆ ಜೀವಿಸರು, ಕಣ್ಮರೆಯಾಗುವರು. ಸ್ವಾಮಿ ವಿವೇಕಾನಂದರೊಡನೆ ಸಂವಾದ ದಲ್ಲಿ ಚಿರಕಾಲವೂ ಜೀವಿಸುತ್ತಿದ್ದಾರೆ. ಅಂತಹ ಶ್ರೀಮಂತ ಆಧ್ಯಾ ತ್ಮಿಕ ಕೊಡುಗೆಯನ್ನು ಬಿಟ್ಟುಹೋದ ಈ ಮಹಾನುಭಾವರಿಗೆ ಮುಂದಿನ ಪೀಳಿಗೆ ಸದಾ ಕೃತಜ್ಞವಾಗಿರುತ್ತದೆ. *(ಮುಕ್ತಾಯ)*

ತ್ರಿಗುಣಾತೀತಾನಂದರ ತಾಂತ್ರಿಕ ಸಾಧನೆ

ಬಾರಾನಗರ ಮಠದಲ್ಲಿದ್ದುಕೊಂಡು ಸಾಧನೆ ಮಾಡುತ್ತಿದ್ದ ಸಮಯದಲ್ಲಿ ಸ್ವಾಮಿ ತ್ರಿಗುಣಾತೀತಾನಂದರಿಗೆ ರಾತ್ರಿಹೊತ್ತು ಸ್ಮಶಾನ ದಲ್ಲಿ ತಾಂತ್ರಿಕ ಪದ್ಧತಿ ಪ್ರಕಾರ ಸಾಧನೆ ಮಾಡಬೇಕೆಂಬ ಆಸೆ ಭುಗಿಲೆದ್ದಿತು. ಆದರೆ ಸ್ವಾಮಿ ವಿವೇಕಾನಂದರು ಅದಕ್ಕೆ ಅನುಮತಿ ನೀಡ ಲಾರರು ಎಂದು ಅವರಿಗೆ ಗೊತ್ತಿತ್ತು. ಒಂದು ದಿನ ರಾತ್ರಿ, ಉಳಿದವರೆಲ್ಲ ಮಲಗಿ ನಿದ್ರಿಸಿದ ಮೇಲೆ, ಇವರು ಸದ್ದಿಲ್ಲದೆ ಸ್ಮಶಾನದ ಕಡೆಗೆ ಹೊರಟಿದ್ದರು. ಅಷ್ಟರಲ್ಲಿ ಸ್ವಾಮೀಜಿ ಅವರನ್ನು ಕರೆದು, ''ನೀನೆಲ್ಲಿಗೆ ಹೋಗುತ್ತಿದ್ದೀಯಾ?'' ಎಂದರು. ತ್ರಿಗುಣಾತೀತಾನಂದರು ಏನೂ ಮಾತನಾಡದೆ ನಿಂತಿದ್ದರು. ಸ್ವಾಮೀಜಿ ಹೇಳಿದರು: ''ಶ್ರೀರಾಮಕೃಷ್ಣರು ನನಗೆ ಕನಸಿನಲ್ಲಿ ಕಾಣಿಸಿಕೊಂಡು, ನೀನೆಲ್ಲಿಗೆ ಹೋಗು ತ್ತಿದ್ದೀಯಾ ಎಂದು ಹೇಳಿದರು. ನೀನು ಅಲ್ಲಿಗೆ ಹೋಗಬಾರದೆಂದೂ, ಅವರು ನಮಗಾಗಿ ಇಷ್ಟೆಲ್ಲ ಮಾಡಿ ಹೋಗಿದ್ದಾರೆಂದೂ, ನಮ್ಮ ಮನಸ್ಸನ್ನು ಅವರ ಮೇಲೆಯೇ ಯಾವಾಗಲೂ ಇರಿಸಿಕೊಂಡರೆ ಸಾಕೆಂದೂ ಅವರು ಹೇಳಿದರು.'' ತ್ರಿಗುಣಾತೀತಾನಂದರು ತಾಂತ್ರಿಕ ಸಾಧನೆ ಮಾಡುವ ಪ್ರಯತ್ನವನ್ನು ಇನ್ನೆಂದಿಗೂ ಮಾಡಲಿಲ್ಲ. *('Sri Ramakrishna Saves' ಗ್ರಂಥದಿಂದ)*

ತೈತ್ತಿರೀಯ ಉಪನಿಷತ್ತು

(ಬ್ರಹ್ಮಾನಂದ ವಲ್ಲೀ)

ಸ್ವಾಮಿ ವೀರೇಶಾನಂದ

ಶ್ರೀಶಂಕರಾಚಾರ್ಯರು ಈ ಉಪನಿಷತ್ತಿನ ವ್ಯಾಖ್ಯಾನವನ್ನು ಒಂದು ಸುಂದರವಾದ ಶ್ಲೋಕದಿಂದ ಆರಂಭಿಸುತ್ತಾರೆ. ಕೇವಲ ಮಂಗಳಶ್ಲೋಕವಾಗಿ ಮಾತ್ರ ಇರದೆ, ಇದು ಇಡೀ ತೈತ್ತಿರೀಯ ಉಪನಿಷತ್ತಿನ ಸಾರಸಂಗ್ರಹವೇ ಆಗಿದೆ ಎನ್ನಬಹುದು. ಆ ಶ್ಲೋಕ ಹೀಗಿದೆ:

ಯಸ್ಮಾತ್ ಜಾತಂ ಜಗತ್ಸರ್ವಂ ಯಸ್ಮಿನ್ನೇವ ಪ್ರಲೀಯತೇ ।
ಯೇನೇದಂ ಧಾರ್ಯತೇ ಚೈವ ತಸ್ಮೈ ಜ್ಞಾನಾತ್ಮನೇ ನಮಃ ॥

'ಜಗತ್ತೆಲ್ಲವೂ ಯಾವನಿಂದ ಹುಟ್ಟಿದೆಯೋ, ಯಾರಲ್ಲಿ ಪ್ರಲಯವಾಗುತ್ತದೆಯೋ, ಮತ್ತು ಯಾರಿಂದ ಯಾವಾಗಲೂ ಧರಿಸಲ್ಪಟ್ಟಿದೆಯೋ, ಅಂಥ ಜ್ಞಾನಸ್ವರೂಪನಾದ ಪರಮಾತ್ಮನಿಗೆ ನಮಸ್ಕಾರ.'

ಉಪನಿಷತ್ತಿನ ಸಂರಚನೆ

ಈ ಉಪನಿಷತ್ತು ಕೃಷ್ಣ ಯಜುರ್ವೇದಕ್ಕೆ ಸೇರಿದೆ. ಈ ವೇದದ ತೈತ್ತಿರೀಯ ಆರಣ್ಯಕದ ಏಳನೆಯ ಪ್ರಪಾಠಕದಿಂದ ಹಿಡಿದು ಒಂಭತ್ತನೆಯ ಪ್ರಪಾಠಕದವರೆಗಿನ ಭಾಗವೇ ತೈತ್ತಿರೀಯ ಉಪನಿಷತ್ತು ಎಂದು ಪ್ರಖ್ಯಾತವಾಗಿದೆ. ಎಲ್ಲ ವೇದಗಳಿಗೂ ಭಾಷ್ಯವನ್ನು ಬರೆದ ಸಾಯಣಾಚಾರ್ಯರ ಪ್ರಕಾರ, ತೈತ್ತಿರೀಯ ಉಪನಿಷತ್ತಿನಲ್ಲಿ ಮೂರು ಭಾಗಗಳಿವೆ : 'ಸಾಂಹಿತೀ', 'ವಾರುಣೀ' ಮತ್ತು 'ಯಾಜ್ಞಿಕೀ' ಎಂದು. ತೈತ್ತಿರೀಯ ಆರಣ್ಯಕದ ಏಳನೆಯ ಪ್ರಪಾಠಕವೇ ಸಾಂಹಿತೀ ಉಪನಿಷತ್ತು. ಇದು **ಶೀಕ್ಷಾವಲ್ಲಿ** ಎಂದು ಪ್ರಸಿದ್ಧವಾಗಿದೆ. ಎಂಟು, ಒಂಭತ್ತು – ಈ ಪ್ರಪಾಠಕಗಳಿಗೆ ವರುಣನೆಂಬ ಋಷಿಯು ಸಂಪ್ರದಾಯ ಕರ್ತೃ. ಆದ್ದರಿಂದ ಇವುಗಳಿಗೆ 'ವಾರುಣೀ ಉಪನಿಷತ್ತು' ಎಂದು ಹೆಸರು. ಇವೇ ಪ್ರಸಿದ್ಧವಾದ 'ಬ್ರಹ್ಮಾನಂದ ವಲ್ಲಿ' ಮತ್ತು 'ಭೃಗು ವಲ್ಲಿ'ಗಳು. ಹತ್ತನೆಯ ಪ್ರಪಾಠಕವು ಯಜ್ಞಗಳ ಆಚರಣೆಯಲ್ಲಿ ಉಪಯೋಗಕ್ಕೆ ಬರುತ್ತದೆ. ಆದ್ದರಿಂದ ಇದಕ್ಕೆ 'ಯಾಜ್ಞಿಕೀ ಉಪನಿಷತ್' ಎಂದು ಹೆಸರು. ಇವುಗಳಲ್ಲಿ ಹತ್ತನೆಯ ಪ್ರಪಾಠಕ್ಕೆ ಶ್ರೀಶಂಕರಾಚಾರ್ಯರು ತಮ್ಮ ಭಾಷ್ಯವನ್ನು ರಚಿಸಿಲ್ಲ. ಹೀಗಾಗಿ ವರ್ತಮಾನ ಕಾಲದಲ್ಲಿ ಪ್ರಸಿದ್ಧವಾಗಿರುವ ತೈತ್ತಿರೀಯ ಉಪನಿಷತ್ತಿನಲ್ಲಿ ಈ ಭಾಗವು ಕಂಡುಬರುವುದಿಲ್ಲ.

ಸತ್ಯ – ಜ್ಞಾನ – ಅನಂತ ಬ್ರಹ್ಮ

ಬ್ರಹ್ಮವಿದ್ಯೆಯನ್ನು ಗುರುಗಳು ಶಿಷ್ಯರಿಗೆ ಹೇಳಿಕೊಡುತ್ತಿದ್ದಾರೆ. ಇದಕ್ಕೆ ಮೊದಲು ವಿದ್ಯಾಭ್ಯಾಸವು ಸರಾಗವಾಗಿ ನಡೆಯಲೆಂದು ಭಗವಂತನಲ್ಲಿ ಹೀಗೆ ಪ್ರಾರ್ಥನೆ ಮಾಡಿಕೊಳ್ಳುತ್ತಾರೆ: ''ಭಗ



ವಂತನು ನಮ್ಮಿಬ್ಬರನ್ನೂ (ಗುರು ಮತ್ತು ಶಿಷ್ಯ) ಜೊತೆಜೊತೆಯಲ್ಲಿಯೇ ಕಾಪಾಡಲಿ. ನಾವಿಬ್ಬರೂ ಶಕ್ತಿವಂತರಾಗುವಂತೆ ಆಗಲಿ. ನಾವಿಬ್ಬರೂ ತೇಜಸ್ವಿಗಳಾಗಿದ್ದುಕೊಂಡು, ಆ ಮೂಲಕ ನಮ್ಮ ಅಧ್ಯಯನವು ಸಫಲವಾಗಲಿ. ನಾವು ಪರಸ್ಪರ ಎಂದೂ ದ್ವೇಷವನ್ನು ಸಾಧಿಸದೆ ಇರುವಂತೆ ಆಗಲಿ.''

ಈ ಪ್ರಾರ್ಥನೆಯ ನಂತರ ಗುರುಗಳು ತಮ್ಮ ಉಪದೇಶವನ್ನು ಆರಂಭಿದರು: ''ಬ್ರಹ್ಮಜ್ಞನು ಅತ್ಯಂತ ಶ್ರೇಷ್ಠವಾದುದನ್ನೇ ಪಡೆದುಕೊಳ್ಳುತ್ತಾನೆ. ಏಕೆಂದರೆ, ಇಡೀ ಸೃಷ್ಟಿಯ ಮೂಲಕಾರಣವೇ ಬ್ರಹ್ಮತತ್ತ್ವ. ಹೀಗಾಗಿ ಇದೇ ಅತ್ಯಂತ ಶ್ರೇಷ್ಠವಾದ ತತ್ತ್ವ. ಹಾಗೆಯೇ ಬ್ರಹ್ಮವೆಂದರೆ ಯಾವುದೋ ಒಂದು ನಿರ್ದಿಷ್ಟವಾದ ವಸ್ತುವಲ್ಲ. ಈ ಎಲ್ಲವೂ ಆಗಿರುವುದು, ಎಲ್ಲದರಲ್ಲೂ ಇರುವುದು — ಇದನ್ನೇ ಬ್ರಹ್ಮವೆಂದು ಕರೆಯುವುದು. ಎಲ್ಲವೂ ಆಗುವ ಸ್ಥಿತಿಯೇ ಅತ್ಯಂತ ಉನ್ನತವಾದ ಸ್ಥಿತಿ, ತಾನೆ? ಇದಕ್ಕಾಗಿಯೇ ಸೂತ್ರರೂಪವಾದ ಈ ಮಂತ್ರದಲ್ಲಿ ಹೀಗೆ ಹೇಳಿದೆ : **ಸತ್ಯಂ, ಜ್ಞಾನಮ್, ಅನಂತಂ ಬ್ರಹ್ಮ** ಎಂದು. ಮಗೂ, ಇದು ಬ್ರಹ್ಮನ ಲಕ್ಷಣವನ್ನು ಸ್ಪಷ್ಟವಾಗಿ, ಕರಾರುವಾಕ್ಕಾಗಿ ತಿಳಿಸುವ ಸೂತ್ರವಾಗಿದೆ. ಇಡೀ ವೇದದ, ವೇದಾಂತದ ಸಾರವೇ ಇದಾಗಿದೆ ಎಂದು ಹೇಳಬಹುದು.

''ಸತ್ಯ, ಜ್ಞಾನ, ಅನಂತ — ಈ ಮೂರೂ ಶಬ್ದಗಳು ಒಂದೊಂದನ್ನು ಅವಲಂಬಿಸಿಲ್ಲ. ಅವು ಪರಸ್ಪರ ಸ್ವತಂತ್ರ ಲಕ್ಷಣಗಳು. ಇದರ ಅರ್ಥ ಏನು ಗೊತ್ತೆ? ಸತ್ಯವಾದುದು ಯಾವುದೋ

ಅದೇ ಬ್ರಹ್ಮ, ಜ್ಞಾನವಾದುದು ಯಾವುದೋ ಅದೇ ಬ್ರಹ್ಮ, ಅನಂತವಾದುದು ಯಾವುದೋ ಅದೇ ಬ್ರಹ್ಮ.

''ಇನ್ನು ಸತ್ಯ ಎಂದರೆ ಏನು ಎಂದು ನೋಡೋಣ. ಯಾವುದು ತನ್ನ ಸ್ವರೂಪದಲ್ಲಿ ಇದೆಯೋ ಅದು ಸ್ವಲ್ಪವೂ ಮಾರ್ಪಡುವುದಿಲ್ಲವಾದರೆ, ಅಂಥ ವಸ್ತು 'ಸತ್ಯ' ಎಂದು ಪರಿಗಣಿಸಲ್ಪಡುತ್ತದೆ. ಹೀಗಾಗಿ ವಿಕಾರ ಅಥವಾ ಮಾರ್ಪಾಡು ಹೊಂದುವ ವಸ್ತು 'ಸುಳ್ಳು' ಎಂದೇ ಹೇಳಬೇಕು, ಅಲ್ಲವೆ? ಈ ನಿಟ್ಟಿನಲ್ಲಿ ನೋಡುವುದಾದರೆ, ಬ್ರಹ್ಮತತ್ತ್ವವೇ ಸತ್ಯವಾದುದು; ಉಳಿದುದೆಲ್ಲವೂ ವಿಕಾರಹೊಂದುತ್ತದೆ. ಹೀಗಾಗಿ ಬ್ರಹ್ಮವೊಂದೇ ಸತ್ಯವಾದುದು.

''ಇನ್ನು **ಜ್ಞಾನ** ಎಂದರೆ ಏನು ಎಂದು ನೋಡೋಣ. ಜ್ಞಾನವೆಂದರೆ ಬೋಧೆ, ಬ್ರಹ್ಮವೆಂದರೆ ಪರಿಶುದ್ಧ ಬೋಧೆ. ಜಗತ್ತಿನಲ್ಲಿ ಕಂಡುಬರುವ ಎಲ್ಲ ಬಗೆಯ ಜ್ಞಾನವೂ ಸೀಮಿತವಾದುದು; ಆಯಾ ವಸ್ತುವಿಗೆ ಸಂಬಂಧಪಟ್ಟದ್ದು. ಆದರೆ ಈ ಜ್ಞಾನವು ನಿರಪೇಕ್ಷವಾದ, ಯಾವ ವಸ್ತುವಿಗೂ ಸಂಬಂಧಪಟ್ಟಿಲ್ಲದ ಜ್ಞಾನ. ಹಾಗೆಯೇ ಈ ಜ್ಞಾನವು ಯಾವ ಕರ್ತೃವಿಗೂ ಸಂಬಂಧಪಟ್ಟದ್ದಲ್ಲ. ಜ್ಞಾತೃ-ಜ್ಞೇಯ - ಈ ಎರಡೂ ಪ್ರಾಪಂಚಿಕ ಜ್ಞಾನದಲ್ಲಿ ಖಂಡಿತ ಒಳಪಟ್ಟಿರುತ್ತದೆ. ಆದರೆ ಬ್ರಹ್ಮತತ್ತ್ವವಾದ ಜ್ಞಾನವು ಸ್ವತಂತ್ರವಾದುದು; ನಿರಪೇಕ್ಷವಾದುದು.

''ಬ್ರಹ್ಮತತ್ತ್ವದ ಇನ್ನೊಂದು ಲಕ್ಷಣವೆಂದರೆ, **'ಅನಂತ'** ಎಂಬುದು. ಅಂತವಿರುವುದು ಸತ್ಯವಾಗಲಾರದು. ಏಕೆಂದರೆ, ಅಂತ್ಯ ಅಥವಾ ವಿನಾಶವುಳ್ಳ ವಸ್ತುವು ಆತ್ಯಂತಿಕ ಸತ್ಯವಾಗಲಾರದು. ಬ್ರಹ್ಮವು ಸತ್ಯ ವಸ್ತುವಾಗಿರುವುದರಿಂದ ಅದಕ್ಕೆ ಅಂತ್ಯ ಅಥವಾ ವಿನಾಶ ಇರುವುದು ಸಾಧ್ಯವೇ ಇಲ್ಲ.''

ಆತ್ಮವೇ ಬ್ರಹ್ಮವಾಗಿದೆ ಎಂಬುದು ಉಪನಿಷತ್ತುಗಳ ಸಂದೇಶ. ಈ ಬ್ರಹ್ಮವಸ್ತುವು ಬುದ್ಧಿಗುಹೆಯಲ್ಲಿರುವ ಶ್ರೇಷ್ಠವಾದ ಆಕಾಶದಲ್ಲಿ ನಿಹಿತವಾಗಿದೆ ಎಂದು ಉಪನಿಷತ್ತು ಹೇಳುತ್ತದೆ. ಬುದ್ಧಿಯು ಭೋಗ ಮತ್ತು ಮೋಕ್ಷ — ಈ ಎರಡೂ ಅನುಭವಕ್ಕೆ ಬರುವ ಅರಿವಿನ ಸ್ಥಾನ. ಈ ಬುದ್ಧಿಯಲ್ಲಿರುವ ಅವ್ಯಾಕೃತವೆಂಬ ಆಕಾಶದಲ್ಲಿ ಬ್ರಹ್ಮವಸ್ತುವನ್ನು ಧ್ಯಾನದ ಮೂಲಕ ಅನುಭವಿಸಿ ತಿಳಿದುಕೊಳ್ಳಬಹುದು ಎಂದು ಇದರ ಅರ್ಥ. ಬ್ರಹ್ಮ ಅಥವಾ ಆತ್ಮವು ಎಲ್ಲ ಕಡೆ ಇರುವಂಥದ್ದು. ಅದನ್ನು ಕೇವಲ ಹೃದಯ ಗುಹೆಯಲ್ಲಿ ಸೀಮಿತಗೊಳಿಸಲಾಗುವುದಿಲ್ಲ. ಹೀಗಾಗಿ, ಹೃದಯ ಗುಹೆಯಲ್ಲಿ ಇಡಲ್ಪಟ್ಟಿದೆ ಎಂದರೆ, ಹೃದಯ ಗುಹೆಯಲ್ಲಿ ಧ್ಯಾನ ಮಾಡಿ ಪರಿಭಾವಿಸಬಹುದಾಗಿದೆ ಎಂದರ್ಥ. ಹೇಗೆ ಸೂರ್ಯನ ಪ್ರತಿಬಿಂಬವು ನೀರಿನಲ್ಲಿ ಕಂಡುಬರುತ್ತದೆಯೋ, ಹಾಗೆಯೇ ಬುದ್ಧಿ ಆಕಾಶದಲ್ಲಿ ಬ್ರಹ್ಮ ಅಥವಾ ಆತ್ಮವನ್ನು ಭಾವಿಸಬಹುದು. ಈ ಮೂಲಕ ಧ್ಯಾನದ ವಿಧಾನವನ್ನು ಉಪನಿಷತ್ತು ಬೋಧಿಸುತ್ತಿದೆ.

ಬ್ರಹ್ಮವನ್ನು ತನ್ನದೇ ಆತ್ಮವೆಂದು ಯಾವನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೋ, ಬಯಸಬಹುದಾದ ಎಲ್ಲ ಕಾಮಗಳನ್ನೂ ಬ್ರಹ್ಮದ ಜೊತೆಗೆ ಒಮ್ಮೆಗೇ ಒಂದೇ ಕ್ಷಣದಲ್ಲಿ ಅನುಭವಿಸುತ್ತಾನೆ. ಅಂದರೆ ಜಗತ್ತಿನ ಎಲ್ಲ ಭೋಗಗಳೂ ಬ್ರಹ್ಮಾನುಭವದಲ್ಲಿಯೇ ಮಿಲಿತವಾಗಿರುತ್ತದೆ ಎಂದು ಇದರ ಅರ್ಥ. ಬ್ರಹ್ಮನ ಜೊತೆಗೆ ಎಂದರೆ, ಬ್ರಹ್ಮವಾಗಿ ಎಂದರ್ಥ. ಬ್ರಹ್ಮವಿದನಾದವನು ಬ್ರಹ್ಮನೇ ಆಗಿಬಿಡುತ್ತಾನೆ. ಬ್ರಹ್ಮವೆಂದರೆ ಎಲ್ಲವೂ, ಸರ್ವವೂ ಆಗಿರುವುದು. ಹೀಗಾಗಿ ಬ್ರಹ್ಮನಾಗುವುದೂ ಒಂದೇ, ಈ ಜಗತ್ತಿನ ಎಲ್ಲ ಭೋಗಗಳನ್ನೂ ಒಮ್ಮೆಗೇ ಅನುಭವಿಸುವುದೂ ಒಂದೇ. ಸರ್ವಜ್ಞನಾದ ಬ್ರಹ್ಮನನ್ನು ಸಾಕ್ಷಾತ್ಕಾರ ಮಾಡಿಕೊಂಡ ಅವನು ಎಲ್ಲರಿಗಿಂತ ಬುದ್ಧಿವಂತನಾಗಿರುತ್ತಾನೆ; ಶ್ರೇಷ್ಠಮಟ್ಟದ ಮೇಧಾವಿಯಾಗಿರುತ್ತಾನೆ.

ಸರ್ವಂ ಬ್ರಹ್ಮಮಯಂ ಜಗತ್

ಬ್ರಹ್ಮವೇ ಆತ್ಮ. ಆತ್ಮನಿಂದಲೇ ಆಕಾಶವು ಹುಟ್ಟಿಬಂದಿತು. ಆಕಾಶದಿಂದ ವಾಯು; ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಜಲ, ಜಲದಿಂದ ಪೃಥಿವೀ. ಪೃಥಿವಿಯಿಂದ ಎಲ್ಲ ಸಸ್ಯರಾಶಿ. ಈ ಸಸ್ಯರಾಶಿಯಿಂದಲೇ ಮನುಷ್ಯನಿಗೆ ಬೇಕಾದ ಅನ್ನ ಅಥವಾ ಆಹಾರ ಉತ್ಪನ್ನವಾಗುತ್ತದೆ. ಈ ಆಹಾರದಿಂದಲೇ ಮನುಷ್ಯನ ರೇತಸ್ಸು ಉಂಟಾಗುತ್ತದೆ. ಆ ರೇತಸ್ಸಿನಿಂದಲೇ ಒಬ್ಬ ಮನುಷ್ಯ ಜಂತುವು ಹುಟ್ಟುತ್ತಾನೆ. ಈ ಸೃಷ್ಟಿಕ್ರಮವನ್ನು ಬೋಧಿಸುವಲ್ಲಿ ಉಪನಿಷತ್ತಿನ ಉದ್ದೇಶ ಇದು: ಆಕಾಶದಿಂದ ಹಿಡಿದು ಮುಂದು ಮುಂದು ಸೃಷ್ಟಿಯಾಗುವ ಎಲ್ಲ ಜೀವಜಂತುಗಳೂ ಬ್ರಹ್ಮ ಅಥವಾ ಆತ್ಮನ ತತ್ತ್ವವೇ ಆಗಿದೆ. ಅವೆಲ್ಲದರಲ್ಲಿಯೂ ಬ್ರಹ್ಮತತ್ತ್ವವೇ ಅನುಸ್ಯೂತವಾಗಿ ಹರಿದುಬಂದಿದೆ. ಹೀಗಾಗಿ ಎಲ್ಲವೂ ಬ್ರಹ್ಮಮಯವೇ ಆಗಿದೆ; ಆತ್ಮಮಯವೇ ಆಗಿದೆ.

ಸೃಷ್ಟಿಯ ಅತ್ಯಂತ ಉನ್ನತ ಹಂತವೇ ಪುರುಷ ಅಥವಾ ಮನುಷ್ಯಜೀವಿ. ಮನುಷ್ಯ ಎಂದರೆ ಏನು? ಅವನ ಹೊರರೂಪ ಅನ್ನಮಯ ಅಥವಾ ಸ್ಥೂಲಶರೀರ. ಈ ಶರೀರವು ಅನ್ನಮಯ ಅಥವಾ ಆಹಾರಮಯವಾಗಿದೆ. ಈ ಶರೀರವೇ ತಾನು ಎಂದುಕೊಂಡರೆ, ಅದೇ ಅನ್ನಮಯಾತ್ಮ ಎನ್ನಿಸಿಕೊಳ್ಳುತ್ತದೆ. ಈ ಅನ್ನ ಅಥವಾ ಆಹಾರದಿಂದಲೇ ಎಲ್ಲ ಪ್ರಜೆಗಳ ದೇಹಗಳೂ ಹುಟ್ಟುವುದು. ಯಾವ ಯಾವ ಜೀವಿಗಳು ಈ ಭೂಮಿಯನ್ನು ಆಶ್ರಯಿಸಿವೆಯೋ, ಅವು ಈ ಅನ್ನದಿಂದಲೇ ಜೀವಿಸಿರುತ್ತವೆ. ಮತ್ತು ಕಡೆಯಲ್ಲಿ ಈ ಅನ್ನದಲ್ಲಿಯೇ ಒಳಹೊಗುತ್ತವೆ. ಹೀಗಾಗಿ ಅನ್ನವೇ ಎಲ್ಲ ಭೂತಗಳಲ್ಲಿಯೂ ಅತ್ಯಂತ ಶ್ರೇಷ್ಠವಾದುದು. ಹೀಗಾಗಿ ಅನ್ನವನ್ನೇ ಬ್ರಹ್ಮವೆಂದು ಉಪಾಸನೆ ಮಾಡಬೇಕು.

ಈ ಅನ್ನರಸಮಯವಾದ ಆತ್ಮನಿಗಿಂತಲೂ ಒಳಗಿನ ಆತ್ಮನಿದ್ದಾನೆ. ಅವನೇ ಪ್ರಾಣಮಯ ಆತ್ಮ. ಈ ಪ್ರಾಣಮಯ ಆತ್ಮದಿಂದಲೇ ಅನ್ನಮಯ ಆತ್ಮವು ಸಂಪೂರ್ಣವಾಗಿ ಮಾಡಲ್ಪಟ್ಟಿದೆ. ಅಂದರೆ ಅನ್ನಮಯವೆಂಬುದು ಪ್ರಾಣದಿಂದಲೇ ತುಂಬಿಕೊಂಡಿದೆ. ಎಲ್ಲ ಇಂದ್ರಿಯಗಳೂ ಈ ಪ್ರಾಣವನ್ನೇ ಅನುಸರಿಸುತ್ತವೆ. ಮನುಷ್ಯರೂ, ಪಶುಗಳು - ಈ ಎಲ್ಲವೂ ಪ್ರಾಣದ

ಮೇಲೆಯೇ ಅವಲಂಬಿತವಾಗಿವೆ. ಆದ್ದರಿಂದಲೇ ಈ ಪ್ರಾಣವನ್ನು ಸರ್ವಾಯುಷ ಎಂದು ಕರೆಯುತ್ತಾರೆ. ಏಕೆಂದರೆ, ಪ್ರಾಣನೇ ಎಲ್ಲ ಜೀವರಾಶಿಗಳಿಗೆ ಆಯುಸ್ಸು. ಹಿಂದಿನ ಅನ್ನಮಯ ಶರೀರಕ್ಕೆ ಪ್ರಾಣಮಯ ಆತ್ಮವೇ ಶರೀರಿ — ಅನ್ನಮಯ ಕೋಶದ ಆತ್ಮವೇ ಪ್ರಾಣಮಯ ಆತ್ಮ.

ಈ ಪ್ರಾಣಮಯನಿಗೆ ಆತ್ಮನಾಗಿ ಮತ್ತೊಬ್ಬನಿದ್ದಾನೆ. ಅವನೇ ಮನೋಮಯ ಆತ್ಮ. ಪ್ರಾಣಮಯ ಆತ್ಮವನ್ನು ಈ ಮನೋಮಯ ಆತ್ಮನೇ ತುಂಬಿಕೊಂಡಿರುತ್ತಾನೆ. ಈ ಮನೋಮಯ ಆತ್ಮನಲ್ಲಿಯೇ ಎಲ್ಲ ಇಂದ್ರಿಯಗಳು, ಪ್ರಾಣವು ಕೂಡ ಸಮ್ಮಿಲಿತವಾಗಿದೆ. ಈ ಮನೋಮಯ ಆತ್ಮವೇ ಹಿಂದಿನ ಪ್ರಾಣಮಯ ಕೋಶದ ಆತ್ಮನಾಗಿದ್ದಾನೆ. ಏಕೆಂದರೆ, ಪ್ರಾಣಮಯದ ತುಂಬ ಈ ಮನೋಮಯ ಆತ್ಮವೇ ತುಂಬಿರುತ್ತಾನೆ.

ಈ ಮನೋಮಯ ಆತ್ಮನಿಗಿಂತಲೂ ಸೂಕ್ಷ್ಮವಾದ ಇನ್ನೊಂದು ಆತ್ಮವನ್ನು ಗುರುತಿಸಬಹುದು. ಅದೇ ವಿಜ್ಞಾನಮಯ ಆತ್ಮ. ಇದನ್ನೇ ಬುದ್ಧಿ ಎನ್ನುವುದು. ಮನೋಮಯ ಆತ್ಮವು ಬುದ್ಧಿ ಆತ್ಮನಿಂದಲೇ ತುಂಬಿದ್ದಾನೆ. ಈ ವಿಜ್ಞಾನಾತ್ಮನೇ ಮನೋಮಯ ಕೋಶದ ಆತ್ಮ. ಉಪನಿಷತ್ತು ಹೇಳುತ್ತದೆ : 'ಬುದ್ಧಿಪೂರ್ವಕವಾಗಿ ನಾವು ಯಾವ ಯಾವ ಕರ್ಮಗಳನ್ನು ಮಾಡುತ್ತೇವೆಯೋ, ಅವೆಲ್ಲವೂ ಈ ಬುದ್ಧ್ಯಾತ್ಮನನ್ನೇ ಅವಲಂಬಿಸಿರುತ್ತದೆ. ಉದಾಹರಣೆಗೆ, ಯಜ್ಞಯಾಗಾದಿಗಳು, ವಿವಿಧ ರೀತಿಯ ಕರ್ಮಗಳು ಮುಂತಾದವು. ಯಾರು ಈ ವಿಜ್ಞಾನವನ್ನೇ ಆತ್ಮವೆಂದು ಉಪಾಸನೆ ಮಾಡುತ್ತಾರೆಯೋ, ಅವರು ಯಾವ ಪ್ರಮಾದವನ್ನೂ ಮಾಡುವುದಿಲ್ಲ. ಎಲ್ಲ ರೀತಿಯ ಕಾಮಗಳನ್ನೂ ಪಡೆದುಕೊಳ್ಳುತ್ತಾನೆ. ಮನೋಮಯ ಆತ್ಮವೇ ಶರೀರ. ಅದಕ್ಕೆ ವಿಜ್ಞಾನಾತ್ಮವೇ ಶರೀರಿ. ಏಕೆಂದರೆ ವಿಜ್ಞಾನಾತ್ಮವೇ ಇಡೀ ಮನೋಮಯ ಆತ್ಮವನ್ನು ತುಂಬಿಕೊಂಡಿರುತ್ತದೆ.'

ಈ ವಿಜ್ಞಾನಮಯ ಆತ್ಮನಿಗಿಂತಲೂ ಸೂಕ್ಷ್ಮವಾದ ಇನ್ನೊಬ್ಬ ಆತ್ಮನಿದ್ದಾನೆ. ಅವನೇ ಆನಂದಮಯ ಆತ್ಮ. ವಿಜ್ಞಾನಮಯನು ಆನಂದಮಯನಿಂದಲೇ ತುಂಬಿಕೊಂಡಿರುತ್ತಾನೆ. ಮನುಷ್ಯನು ಅನುಭವಿಸುವ ಎಲ್ಲ ರೀತಿಯ ಪ್ರಾಪಂಚಿಕ ಸುಖಗಳೂ ಈ ಆನಂದಮಯ ಆತ್ಮನ ಶರೀರದ ವಿವಿಧ ಅಂಗಗಳೇ ಆಗಿವೆ ಎನ್ನಬಹುದು. ಹಿಂದಿನ ಮನೋಮಯ ಕೋಶಕ್ಕೆ ಈ ಆನಂದಮಯಾತ್ಮನೇ ಆತ್ಮನಾಗಿದ್ದಾನೆ. ಏಕೆಂದರೆ, ಮನೋಮಯ ಆತ್ಮನು ಆನಂದಮಯ ಆತ್ಮನಿಂದಲೇ ತುಂಬಿಹೋಗಿದ್ದಾನೆ.

ಪ್ರಶ್ನೆ– ಅನುಪ್ರಶ್ನೆಗಳು

ಮೇಲಿನ ಉಪದೇಶಗಳನ್ನು ಕೇಳಿದ ಶಿಷ್ಯನ ಮನಸ್ಸಿನಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಅವುಗಳನ್ನು ಉಪನಿಷತ್ತು ದಾಖಲಿಸುತ್ತದೆ. ಬ್ರಹ್ಮವು ಆಕಾಶ, ವಾಯು ಮುಂತಾದವುಗಳಿಗೆ ಕಾರಣವಾಗಿದೆ ಎಂದು ಆಚಾರ್ಯರು ಹೇಳಿದ್ದಾರಲ್ಲವೇ. ಇವು ಜ್ಞಾನಿ–ಅಜ್ಞಾನಿ – ಇಬ್ಬರಿಗೂ ಸಮಾನವಾಗಿದೆಯಷ್ಟೇ. ಹೀಗಾಗಿ ಅಜ್ಞಾನಿಗೂ ಬ್ರಹ್ಮ ಪ್ರಾಪ್ತಿಯಾಗಬಹುದಲ್ಲ! ಎಂಬುದೇ ಶಿಷ್ಯನ ಪ್ರಶ್ನೆ. ಅದಕ್ಕೆ ಗುರುವನ್ನು ಶಿಷ್ಯನು ಹೀಗೆ ಕೇಳುತ್ತಾನೆ: ''ಅಜ್ಞಾನಿಯು ಈ ಲೋಕವನ್ನು ಬಿಟ್ಟುಹೊರಟುಹೋದ ಮೇಲೆ ಬ್ರಹ್ಮಲೋಕವನ್ನು ತಾನೇ ಸೇರಬೇಕು? ಅವನು ಎಲ್ಲಿಗೆ ತಾನೇ ಹೋಗುತ್ತಾನೆ? ಅದೇ ರೀತಿ, ಜ್ಞಾನಿಯಾದವನು ಯಾವ ಲೋಕವನ್ನು ಪಡೆಯುತ್ತಾನೆ? ಅವನೇನಾದರೂ ಯಾವುದಾದರೂ ಒಂದು ಲೋಕವನ್ನು ಹೋಗಿ ಸೇರುತ್ತಾನೆಯೆ?'' ಈ ಪ್ರಶ್ನೆಗಳಿಗೆ ನೇರವಾಗಿ ಗುರುವು ಉತ್ತರವನ್ನು ಹೇಳುವುದಿಲ್ಲ. ಅದಕ್ಕೆ ಬದಲಾಗಿ, ಬ್ರಹ್ಮದ ಅಸ್ತಿತ್ವವನ್ನು ಸಾಧಿಸಿ ತೋರಿಸುವುದಕ್ಕೆ ಸೃಷ್ಟಿಕಾರ್ಯವನ್ನು ವಿವರಿಸುತ್ತಾನೆ. ಇದರ ರಹಸ್ಯ ಹೀಗಿದೆ. ಈ ಸೃಷ್ಟಿಯ ಹಿಂದೆ ಒಂದು ಚೈತನ್ಯವಸ್ತು ಇರಲೇಬೇಕು. ಆ ಚೈತನ್ಯವೇ ಜಗತ್ತಿಗೆ ಕಾರಣವಾಗುತ್ತದೆ. ಈ ಚೈತನ್ಯವನ್ನೇ ಬ್ರಹ್ಮ ಎಂದು ಕರೆಯುವುದು. ಹೀಗಾಗಿ ಬ್ರಹ್ಮನ ಅಸ್ತಿತ್ವವನ್ನು ಜಗತ್ತಿನ ಸೃಷ್ಟಿಕಾರ್ಯದ ಮೂಲಕವೇ ಸಾಬೀತುಪಡಿಸಬಹುದು. ಇದು ಉಪನಿಷತ್ತಿನಲ್ಲಿ ಬರುವ ತರ್ಕಚಿಂತನೆ. ಇದರ ವಿವರಣೆ ಹೀಗಿದೆ:

'ಸೃಷ್ಟಿಗೆ ಮೊದಲು ಅವನೊಬ್ಬನೇ ಇದ್ದನು. ಅವನೇ ತಾನು ಬಹುವಾಗುವೆನು, ಹುಟ್ಟುವೆನು ಎಂಬ ಆಸೆಯನ್ನು ಬೆಳೆಸಿಕೊಂಡನು. ಹೀಗಾಗಿ ಅವನು ಜ್ಞಾನವೇ ಆಗಿರುವ ತಪಸ್ಸನ್ನು ಮಾಡಿದನು. ಆತ್ಮ ಅಥವಾ ಬ್ರಹ್ಮಕ್ಕೆ ಬೇರೆ ಯಾವ ಕಾಮನೆಗಳೂ ಇಲ್ಲ. ಹೀಗಾಗಿ ಅದು ಪಡೆದುಕೊಳ್ಳಬೇಕಾದುದು ಏನೂ ಇರುವುದಿಲ್ಲ. ಹೀಗಾಗಿ ಜ್ಞಾನವೇ ಇಲ್ಲಿ ತಪಸ್ಸು. ಯಾವುದರ ಜ್ಞಾನ? ಮುಂದೆ ಸೃಷ್ಟಿಸಬೇಕಾದ ಜಗತ್ತಿನ ಬಗೆಗಿನ ಆಲೋಚನೆಯನ್ನೇ ಇಲ್ಲಿ ಜ್ಞಾನವೆಂದು ಹೇಳಿರುವುದು. ಆ ತಪಸ್ಸಿನ ಮೂಲಕ ಅವನು ಈ ಜಗತ್ತಿನಲ್ಲಿ ಏನೇನು ಇದೆಯೋ ಎಲ್ಲವನ್ನೂ ಸೃಜಿಸಿದನು. ಹುಟ್ಟುವ ಪ್ರಾಣಿಗಳ ಕರ್ಮದ ಪ್ರಕಾರ, ದೇಶ–ಕಾಲ–ನಾಮ ಮತ್ತು ರೂಪಗಳ ಮೂಲಕ, ನಮಗೆ ಅನುಭವಕ್ಕೆ ಬರುವಂಥ ಜಗತ್ತನ್ನು ರಚಿಸಿದನು. ಪ್ರಾಣಿಗಳು ತಮ್ಮ ಬೇರೆ ಬೇರೆ ಅವಸ್ಥೆಗಳನ್ನು ಅನುಭವಿಸುತ್ತಿರುವ ಈ ಜಗತ್ತನ್ನು ಸೃಷ್ಟಿಸಿದನು.'

ತದನಂತರ ಉಪನಿಷತ್ತು ಹೇಳುತ್ತದೆ : 'ಜಗತ್ತನ್ನು ಸೃಷ್ಟಿಸಿದ ಆತ್ಮನು ಅದನ್ನು ಪ್ರವೇಶಿಸಿದನು. ಇದರ ಅರ್ಥ ಬ್ರಹ್ಮನು ಜಗತ್ತನ್ನು ಜೀವರೂಪದಿಂದ ಪ್ರವೇಶಿಸಿದನು. ಬ್ರಹ್ಮವೇ ಎಲ್ಲದಕ್ಕೂ ಕಾರಣನು. ಅವನು ಕಾರ್ಯರೂಪವಾದ ಈ ಜಗತ್ತನ್ನು ಪ್ರವೇಶಿಸಿದನು. ಇದು ಹೇಗೆ ಗೊತ್ತೆ? ಮಣ್ಣು ಮಡಕೆಯನ್ನು ಪ್ರವೇಶಿಸಿದಂತೆ. ಮಣ್ಣೇ ಮಡಕೆಯಾಗಿ ಪರಿವರ್ತನೆ ಹೊಂದುವುದಲ್ಲವೆ? ಹಾಗೆ ಆತ್ಮ ಅಥವಾ ಬ್ರಹ್ಮವಸ್ತುವೇ ಜಗತ್ತಾಗಿ ಪರಿಣಮಿಸುತ್ತದೆ. ಇಲ್ಲಿ ಪ್ರವೇಶ ಎಂಬ ಪದವೂ ಅಪಾರ್ಥವನ್ನು ಉಂಟು ಮಾಡಬಹುದು. ಪ್ರವೇಶವೆಂದರೆ ಎಲ್ಲ ಕಡೆಯೂ ಆತ್ಮನು ವ್ಯಾಪಿಸಿದ್ದಾನೆ ಎಂದರ್ಥ. ಈ ಜಗತ್ತಿನ ಒಳಗೂ, ಹೊರಗೂ ಭಗವಂತನೇ ತುಂಬಿದ್ದಾನೆ ಎಂದೇ ಇದರ ತಾತ್ಪರ್ಯ. ಈ ಜಗತ್ತೂ ಭಗವಂತನೇ, ಜಗತ್ತಿನ ಕಾರಣವೂ ಬ್ರಹ್ಮವೇ; ಜಗತ್ತಿನ ಆದ್ಯಂತವೂ

ಬ್ರಹ್ಮವೇ. ನಾವು ಯಾವುದನ್ನು ಈ ಜಗತ್ತು ಎಂದು ಕರೆಯುತ್ತೇವೆಯೋ, ಅದೆಲ್ಲವೂ ಈ ಬ್ರಹ್ಮ ವಸ್ತುವೇ.' – ಇದನ್ನು ನಮ್ಮ ಮನಸ್ಸಿನಲ್ಲಿ ಮತ್ತೆ ಮತ್ತೆ ಮೂಡಿಸಲು ಉಪನಿಷತ್ತು ಇಂತಹ ಸೂಚಕ ಭಾಷೆಯನ್ನು ಉಪಯೋಗಿಸುತ್ತದೆ.

ಈ ಜಗತ್ತನ್ನು ಪ್ರವೇಶಿಸಿರುವುದು ಮಾತ್ರವಲ್ಲ. ಅವನೇ ಈ ಎಲ್ಲವೂ ಆದನು. ಮೂರ್ತ ವಸ್ತುವೂ ಅವನೇ ಆದನು; ಅಮೂರ್ತ ವಸ್ತುವೂ ಅವನೇ ಆದನು. ಇದರರ್ಥ ಆತ್ಯಂತಿಕವಾಗಿ ಇವು ಯಾವುವೂ ಆತ್ಮವಸ್ತುವಿಗಿಂತ ಬೇರೆಯಲ್ಲ ಎಂದು. ದೇಶಕಾಲಗಳಿಂದ ಕೂಡಿ ಗೊತ್ತುಪಡಿಸಿದ ಎಲ್ಲ ವಸ್ತುಗಳೂ ಅವನೇ ಆದನು. ಹಾಗೆ ಗೊತ್ತುಪಡಿಸಲಾಗದ ವಸ್ತುಗಳೂ ಅವನೇ ಆದನು. ಪ್ರತ್ಯಕ್ಷವಾದುದು, ಪರೋಕ್ಷವಾದುದು – ಎಲ್ಲವೂ ಅವನೇ ಆದನು. ಚೈತನ್ಯ ವಸ್ತುಗಳೂ ಅವನೇ ಆದನು. ಅಚೈತನ್ಯ ವಸ್ತುಗಳು ಕೂಡ ಅವನೇ ಆದನು. ವ್ಯವಹಾರಕ್ಕೆ ಸಿಗುವ ವಸ್ತುಗಳು ಕೂಡ ಅವನೇ ಆದನು. ಇದನ್ನೇ ಉಪನಿಷತ್ತು 'ಸತ್ಯ ವಸ್ತು' ಎನ್ನುತ್ತದೆ. ವ್ಯವಹಾರಕ್ಕೆ ಸಿಲುಕದ ವಸ್ತುಗಳು ಕೂಡ ಅವನೇ ಆದನು. ಇದನ್ನು ಉಪನಿಷತ್ತು 'ಅಸತ್ಯ ವಸ್ತು' ಎಂದು ಹೆಸರಿಸುತ್ತದೆ. ಈ ಎರಡೂ ತೆರನ ವಸ್ತುಗಳ ಹಿಂದೆ ಇರುವ ಸತ್ವವೇ ಈ ಬ್ರಹ್ಮವಸ್ತು. ಬ್ರಹ್ಮವೊಂದೇ ಪರಮಾರ್ಥ ಸತ್ಯ. ಹಾಗೆಂದೇ ಉಪನಿಷತ್ತು ಬ್ರಹ್ಮವಸ್ತುವನ್ನು 'ಆತ್ಯಂತಿಕ ಸತ್ಯ' ಎಂದು ಹೇಳುತ್ತದೆ.

ಹಿಂದೆ ಬರೀ ಅಸತ್ತು ಮಾತ್ರವೇ ಇತ್ತು. ಅಂದರೆ ಜಗತ್ತು ಆಗ ಇರಲಿಲ್ಲ. ಅವ್ಯಾಕೃತ ಸ್ಥಿತಿಯಲ್ಲಿ ಇತ್ತು. ಜಗತ್ತು ನಾಮರೂಪಗಳಾಗಿ ವಿಂಗಡಣೆ ಹೊಂದಿರಲಿಲ್ಲ. ಅಂಥ ಅವ್ಯಾಕೃತ ಸ್ಥಿತಿಯಿಂದ ವ್ಯಾಕೃತವಾದ ಜಗತ್ತು ಮೂಡಿಬಂತು. ಅಂದರೆ ನಾಮರೂಪಗಳು ಮೂಡಿದವು. ಜಗತ್ತು ವಿವಿಧ ಪ್ರಕಾರದ ಜೀವಿ ವಸ್ತುಗಳಿಂದ ತುಂಬಿಕೊಂಡಿತು. ಬ್ರಹ್ಮ ತಾನೇ ತಾನಾಗಿ ಈ ಜಗತ್ತಿನ ರೂಪದಲ್ಲಿ ಕಾಣಿಸಿಕೊಂಡನು ಎಂದು ಉಪನಿಷತ್ತು ಘಂಟಾಘೋಷವಾಗಿ ಘೋಷಿಸುತ್ತದೆ. ಅದಕ್ಕೆ ಬ್ರಹ್ಮನನ್ನು 'ಸುಕೃತ' ಅಂದರೆ 'ಸ್ವಯಂ ಕರ್ತೃ' ಎಂಬ ಹೆಸರನ್ನು ಉಪನಿಷತ್ತು ನೀಡುತ್ತದೆ.

ರಸೋ ವೈ ಸಃ

ಇಷ್ಟು ಮಾತ್ರವಲ್ಲ. ಬ್ರಹ್ಮನ ಅಸ್ತಿತ್ವವನ್ನು ಇನ್ನೊಂದು ವಿಧದಲ್ಲಿಯೂ ಸಾಧಿಸಿ ತೋರಿಸಬಹುದು. ಏಕೆಂದರೆ ಬ್ರಹ್ಮವು ರಸವೇ ಆಗಿದೆ. ಹಾಗೆಂದೇ ಉಪನಿಷತ್ತು ಹೇಳುತ್ತದೆ : **ರಸೋ ವೈ ಸಃ** — ರಸವೆಂದರೆ ನಮ್ಮ ತೃಪ್ತಿ ಮತ್ತು ಆನಂದಗಳಿಗೆ ಕಾರಣವಾದುದು ಯಾವುದೋ ಅದು. ಈ ರಸ ಅಥವಾ ಬ್ರಹ್ಮವನ್ನು ಮನುಷ್ಯನು ಪಡೆದುಕೊಂಡರೆ, ಅವನು ಅತ್ಯಂತ ಆನಂದವನ್ನು ಹೊಂದುತ್ತಾನೆ. ಹೀಗೆ ಮನುಷ್ಯನ ಆನಂದಕ್ಕೆ ಕಾರಣವೇ ಬ್ರಹ್ಮ ಎಂದು ಉಪನಿಷತ್ತು ಹೇಳುತ್ತದೆ. ಇದಕ್ಕೆಂದೇ ಹೊರಗಿನ ಯಾವ ಆನಂದದ ಸಾಧನಗಳು ಇಲ್ಲದಿದ್ದರೂ, ಆತ್ಮಜ್ಞಾನಿಗಳಾದವರು ಈ ರಸ ಅಥವಾ ಬ್ರಹ್ಮವನ್ನು ಅನುಭವ ಮಾಡಿಕೊಂಡಿರುವುದರಿಂದ, ಅಂತರಂಗದಲ್ಲಿ ಆನಂದಪೂರ್ಣರಾಗಿರುತ್ತಾರೆ.

ಹಾಗೆಯೇ ಪ್ರಾಣಿಗಳ ಎಲ್ಲ ಕ್ರಿಯೆಗಳಿಗೂ ಬ್ರಹ್ಮನೇ ಕಾರಣನಾಗಿದ್ದಾನೆ. ಜೀವಿಗಳ ಎಲ್ಲ ಪ್ರವೃತ್ತಿಗಳಿಗೂ ಒಂದು ಮೂಲ ಶಕ್ತಿ ಅಥವಾ ಚೈತನ್ಯ ಇರಲೇ ಬೇಕು. ಆ ಮೂಲ ಶಕ್ತಿ ಅಥವಾ ಮೂಲ ಚೈತನ್ಯವೇ ಬ್ರಹ್ಮ ಎಂದು ಉಪನಿಷತ್ತು ಪ್ರತಿಪಾದಿಸುತ್ತದೆ.

ಬುದ್ಧಿಗುಹೆಯಲ್ಲಿನ ಪರಮ ಆಕಾಶದಲ್ಲಿ ಚೈತನ್ಯರೂಪವಾದ ಈ ಆನಂದರೂಪಿ ಬ್ರಹ್ಮವೇ ಒಬ್ಬ ಮನುಷ್ಯ ಉಸಿರು ತೆಗೆದುಕೊಳ್ಳುವುದಕ್ಕೂ, ಉಸಿರು ಬಿಡುವುದಕ್ಕೂ ಕಾರಣ. ಜಗತ್ತಿನಲ್ಲಿ ಮನುಷ್ಯರು ಅನುಭವಿಸುವ ಎಲ್ಲ ರೀತಿಯ ಆನಂದಗಳೂ, ಈ ಆತ್ಮಾನಂದ ಅಥವಾ ಬ್ರಹ್ಮಾನಂದದ ತುಣುಕುಗಳು ಮಾತ್ರ.

ಅಜ್ಞಾನಿಗಳು ಸಂಸಾರ ಭಯದಿಂದ ನರಳುತ್ತಿರುತ್ತಾರೆ. ಆತ್ಮಜ್ಞಾನಿಗಳು ಅಭಯ ಸ್ಥಿತಿಯನ್ನು ಹೊಂದಿರುತ್ತಾರೆ. ಈ ಭಯ–ಅಭಯಗಳಿಗೆ ಕಾರಣ ಯಾವುದು? ಅದೂ ಬ್ರಹ್ಮ ಎಂದು ಉಪನಿಷತ್ತು ಹೇಳುತ್ತದೆ. ಬ್ರಹ್ಮವೇ ಅಭಯ. ಬ್ರಹ್ಮ ಸ್ಥಿತಿಯೇ ಅಭಯ ಸ್ಥಿತಿ. ಏಕೆಂದರೆ ಈ ಸ್ಥಿತಿಯು ಸಾಧಾರಣ ದೃಶ್ಯರೂಪದ್ದಲ್ಲ ; ದೃಕ್‌ರೂಪದ್ದು; ಆತ್ಮರೂಪದ್ದು. ಆದ್ದರಿಂದ ಯಾವ ವಿಕಾರವೂ ಇದರಲ್ಲಿ ಇಲ್ಲ. ಜಗತ್ತಿನಲ್ಲಿ ಇರುವ ಎಲ್ಲದಕ್ಕೂ ಆಶ್ರಯವೊಂದು ಇದ್ದೇ ಇರುತ್ತದೆ. ಎಲ್ಲದಕ್ಕೂ ಆಶ್ರಯವಾಗಿ ಇದ್ದುಕೊಂಡು, ತನಗೆ ಬೇರೆ ಯಾವುದೂ ಆಶ್ರಯವಿಲ್ಲದ್ದು ಒಂದೇ. ಅದೇ ಬ್ರಹ್ಮ ಎಂದು ಉಪನಿಷತ್ತು ವರ್ಣಿಸುತ್ತದೆ.

ಅನಂತರ ಅಜ್ಞಾನಿಗೆ ಭಯ ಉಂಟಾಗುವುದರ ಕಾರಣ ಏನು ಎನ್ನುವುದನ್ನು ಉಪನಿಷತ್ತು ವಿಶ್ಲೇಷಿಸುತ್ತದೆ. ಯಾವನು ಇನ್ನೊಬ್ಬನ ಜೊತೆಗೆ ಸ್ವಲ್ಪವಾದರೂ ಅಂತರವಿದೆ ಎಂದು ಭಾವಿಸುತ್ತಾನೆಯೋ, ಅವನಿಗೆ ಭಯದ ಭಾವನೆ ಕಾಡುತ್ತದೆ. ಅವನನ್ನೇ ಅಜ್ಞಾನಿ ಎಂದು ಕರೆಯುವುದು. ಸಂಕ್ಷಿಪ್ತವಾಗಿ, ಭೇದಬುದ್ಧಿಯೇ ಅಜ್ಞಾನ; ಅದೇ ಭಯಕ್ಕೆ ಕಾರಣ. ಅಭೇದ ಬುದ್ಧಿಯೇ, ಬ್ರಹ್ಮ ಬುದ್ಧಿಯೇ ಜ್ಞಾನ; ಅದೇ ಅಭಯಕ್ಕೆ ಕಾರಣ. ಈಶ್ವರನು ಬೇರೆ, ಸಂಸಾರಿಯಾದ ನಾನು ಬೇರೆ ಎನ್ನುವುದೇ ಅಜ್ಞಾನಿಗಳ ದೃಷ್ಟಿ. ಇದೇ ಭಯಕ್ಕೆ ಕಾರಣ. ಈಶ್ವರನ ರೂಪವನ್ನು ತಾಳಿರುವ ಬ್ರಹ್ಮತತ್ತ್ವವೂ, ನನ್ನ ಆತ್ಮವೂ ಬೇರೆಯಲ್ಲ ಎಂದು ಯಾರು ಅಭೇದ ದೃಷ್ಟಿಯನ್ನು ತಾಳುವರೋ ಅವರೇ ಜ್ಞಾನಿಗಳು. ಅವರಲ್ಲಿ ಅಭಯವು ಮನೆಮಾಡಿಕೊಂಡಿರುತ್ತದೆ. ಹೀಗೆ ಭಯಕಾರಣವೂ ಬ್ರಹ್ಮ ಎಂದು ಉಪನಿಷತ್ತು ಪ್ರತಿಪಾದಿಸುತ್ತದೆ. ಹಾಗೆಯೇ ಪ್ರಸಿದ್ಧವಾಗಿರುವ ಒಂದು ಘೋಷಣೆಯನ್ನು ಮಾಡುತ್ತದೆ: 'ಈತನ ಭಯದಿಂದಲೇ ವಾಯುವು ಬೀಸುತ್ತಾನೆ; ಭಯದಿಂದಲೇ ಸೂರ್ಯನು ಉದಯಿಸುತ್ತಾನೆ; ಈತನ ಭಯದಿಂದಲೇ ಅಗ್ನಿಯೂ ಇಂದ್ರನೂ ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಾರೆ. ಐದನೆಯವನಾದ ಮೃತ್ಯುವೂ ಈತನ ಭಯದಿಂದಲೇ ಓಡಿಹೋಗುತ್ತಾನೆ.'

ಆನಂದದ ಮೀಮಾಂಸೆ

ಬ್ರಹ್ಮನ ಅಸ್ತಿತ್ವಕ್ಕೆ ಹಿಂದೆ ನೀಡಿದ ಕಾರಣಗಳನ್ನು ನೀಡುವ ಗುರುಗಳು ಈಗ ಆನಂದರೂಪನಾದ ಬ್ರಹ್ಮನ ಬಗ್ಗೆ ವಿಶ್ಲೇಷಣೆಯನ್ನು ಮಾಡುತ್ತಾರೆ. ಅದನ್ನೇ 'ಆನಂದದ ಮೀಮಾಂಸೆ' ಎಂದು ಕರೆದಿದ್ದಾರೆ. ಲೌಕಿಕ ಆನಂದವು ಯಾವುದೋ ಒಂದು ಸಾಧನದಿಂದ ಉಂಟಾಗುವ ಸಾಧ್ಯ ಅನುಭವ. ಅದಕ್ಕೆ ಆದಿ, ಅಂತ್ಯಗಳು ಇರುವುದನ್ನು ಕಾಣುತ್ತೇವೆ. ಈ ಆನಂದದಲ್ಲಿ ಉತ್ಕೃಷ್ಟವಾದುದು ಯಾವುದು ಎಂದು ತಿಳಿದುಕೊಳ್ಳುವುದೇ ಆನಂದ ಮೀಮಾಂಸೆಯಲ್ಲಿ ವಿಚಾರ ಮಾಡಿರುವ ಅಂಶ. ಲೌಕಿಕ ಆನಂದದ ಉತ್ಕೃಷ್ಟತೆಯಲ್ಲಿಯೂ ಯಾರು ವೈರಾಗ್ಯವನ್ನು ತಾಳುತ್ತಾನೆಯೋ, ಅದರಿಂದ ವಿಮುಖನಾಗುತ್ತಾನೋ ಅವನು ಮಾತ್ರವೇ ಬ್ರಹ್ಮಾನಂದಕ್ಕೆ ಯೋಗ್ಯನಾಗುತ್ತಾನೆ ಎನ್ನುವುದೇ ಉಪನಿಷತ್ತಿನ ತಾತ್ಪರ್ಯ. ಇಲ್ಲಿ ಒಂದು ಗಮನಿಸಬೇಕಾದ ಅಂಶವೆಂದರೆ, ಲೌಕಿಕವಾದ ಆನಂದವು ಕೂಡ ಬ್ರಹ್ಮಾನಂದದ ಒಂದು ಅಂಶವೇ ಆಗಿದೆ ಎನ್ನುವುದು. ಅವಿದ್ಯೆಯ ಆವರಣ ಹೆಚ್ಚಾದಂತೆ, ಜೀವಿಗಳಲ್ಲಿ ಆನಂದದ ಆವರಣವು ಹೆಚ್ಚುತ್ತ ಹೋಗುತ್ತದೆ. ದುಃಖ ಆವರಿಸಿಕೊಳ್ಳುತ್ತದೆ. ಇಲ್ಲೂ ಮಧ್ಯೆ ಮಧ್ಯೆ ಸಂತೋಷದ ಹೊನಲುಗಳು ಕಾಣಬಹುದು. ಅವು ನಿಜವಾದ ಆನಂದವಾದ ಬ್ರಹ್ಮಾನಂದದ ಝಳಕುಗಳಲ್ಲದೆ ಬೇರೆಯಲ್ಲ. ಇದನ್ನು ಗುರುಗಳು ಕಾವ್ಯಮಯವಾಗಿ, ಸೊಗಸಾಗಿ ಹೀಗೆ ಹೇಳುತ್ತಾರೆ:


''ಒಬ್ಬ ಯುವಕನನ್ನೇ ತೆಗೆದುಕೊಳ್ಳೋಣ. ಒಳ್ಳೆಯ ಅಧ್ಯಯನ ಮಾಡಿದ್ದು, ಜೀವನದಲ್ಲಿ ಬಹಳವಾದ ಆಸೆಯನ್ನು ಅವನು ಹೊಂದಿರುತ್ತಾನೆ. ಅದಲ್ಲದೆ, ದೈಹಿಕವಾಗಿಯೂ ಅವನು ಬಲಿಷ್ಠನಾಗಿರುತ್ತಾನೆ. ಅಂಥವನು ಇಡೀ ಭೂಮಿಯಲ್ಲಿರುವ ಎಲ್ಲ ಸಂಪತ್ತಿನ ಒಡೆತನವನ್ನು ಪಡೆದರೆ, ಇನ್ನೇನು ಹೇಳುವುದು?! ಅವನಿಗಿರುವ ಆನಂದವಿದೆಯಲ್ಲ, ಇದನ್ನೇ ಎಲ್ಲ ಮನುಷ್ಯರಿಗೂ ಇರುವ ಆನಂದಕ್ಕಿಂತ ಅತ್ಯಂತ ಉತ್ತಮವಾದ ಆನಂದವೆಂದು ಪರಿಗಣಿಸಿಕೊಳ್ಳೋಣ. ಇಂಥ ಉತ್ಕೃಷ್ಟ ಆನಂದಗಳ ನೂರು ಮಡಿಯಷ್ಟು ಇರುವುದು ಯಾವುದು ಗೊತ್ತೆ? ಮನುಷ್ಯ ಗಂಧರ್ವರು ಎಂದು ಕರೆಯಲ್ಪಡುವ ಉನ್ನತ ಲೋಕದ ಜೀವಿಗಳ ಆನಂದ. ಈ ಜೀವಿಯ ದೇಹವು ಮನುಷ್ಯನ ದೇಹಕ್ಕಿಂತ ಸೂಕ್ಷ್ಮವಾದುದು. ಅಲ್ಲದೆ, ಅವನು ಅನೇಕ ಶಕ್ತಿಗಳನ್ನು ಹೊಂದಿರುತ್ತಾನೆ. ಹೀಗಾಗಿ ಆನಂದವನ್ನು ಅನುಭವಿಸುವುದಕ್ಕೆ ಅವನಿಗೆ ಇರುವ ಅಡಚಣೆಗಳು ಬಹಳ ಕಡಮೆಯಾಗಿರುತ್ತವೆ. ಹೀಗಾಗಿ ಆತನ ಮನಸ್ಸೂ ಕೂಡ ಪ್ರತೀಕಾರ ರಹಿತವಾಗಿ, ತಿಳಿಯಾಗಿದ್ದು, ಸಮಾಧಾನದಿಂದ ಇರುತ್ತದೆ. ಹೀಗೆ ಮನಸ್ಸು ಶಾಂತಿಯಿಂದ ಇರುವುದರಿಂದ, ಉನ್ನತ ಲೋಕಗಳಲ್ಲಿ ಜೀವಿಗಳ ಆನಂದವು ನೂರು ನೂರು ಮಡಿ ಹೆಚ್ಚಾಗುತ್ತ ಹೋಗುತ್ತದೆ. ಮನುಷ್ಯ ಗಂಧರ್ವನ ಈ ಆನಂದವು ಶಾಸ್ತ್ರಗಳಲ್ಲಿ ಮೇಧಾವಿಯೂ, ಕಾಮರಹಿತನೂ ಆದ ಮುಮುಕ್ಷುವಿನ ಆನಂದಕ್ಕೆ ಸಮನಾಗಿದೆ. ಹೀಗೆಯೇ ಮುಂದುಮುಂದಿನ ಉನ್ನತ ಲೋಕಗಳ ಭೋಗವನ್ನು ಅವನು ತ್ಯಜಿಸುತ್ತ ಹೋದರೆ, ಅವನಲ್ಲಿ ಸ್ಫುರಿಸುವ ಆನಂದವೂ ಹೆಚ್ಚಾಗುತ್ತಲೇ ಹೋಗುತ್ತದೆ. ಕಟ್ಟಕಡೆಗೆ ಅದು ಬ್ರಹ್ಮಾನಂದವಾಗುತ್ತದೆ. ಹೀಗೆಯೇ ನಾವು ಉನ್ನತ ಲೋಕಗಳನ್ನು ವಿಚಾರ ಮಾಡುತ್ತ ಹೋದರೆ, ನಮಗೆ ತಿಳಿದುಬರುತ್ತದೆ: ಲೌಕಿಕ ಆನಂದಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದುದು ಪ್ರಜಾಪತಿಯ ಆನಂದ. ಬ್ರಹ್ಮಾನಂದವು ಅದಕ್ಕೂ ನೂರು ಪಟ್ಟು ಮಿಗಿಲಾದದ್ದು ಎಂದು.''

ಈ ಬ್ರಹ್ಮಾನಂದಕ್ಕೆ ಸಾಧನ ಅದಾವುದು? ಇದನ್ನು ಗುರುಗಳು ಸಂಕ್ಷಿಪ್ತವಾಗಿ ಹೀಗೆ ಹೇಳಿಕೊಡುತ್ತಾರೆ: ''ಒಬ್ಬನೇ ಪುರುಷನು (ಬ್ರಹ್ಮನು) ತನ್ನಲ್ಲಿಯೂ ಇರುವವನು, ಆದಿತ್ಯನಲ್ಲಿಯೂ ಇರುವವನು — ಸರ್ವಭೂತಗಳಲ್ಲಿಯೂ ಅಂತರಾತ್ಮನಾಗಿ ಇರುವವನು ಎನ್ನುವುದನ್ನು ಕಂಡುಕೊಳ್ಳುವುದೇ ಬ್ರಹ್ಮಾನಂದಕ್ಕೆ ಸಾಧನ'' ಎಂದು.

ಈ ಬ್ರಹ್ಮಜ್ಞಾನದ ಫಲ ಏನು? ಗುರುಗಳು ಹೇಳುತ್ತಾರೆ: ''ಬ್ರಹ್ಮವಿದ್ಯೆಯನ್ನು ತಿಳಿದವನು ಈ ಲೋಕದಿಂದ ಹೊರಟು ಹೋಗುವಾಗ, ಎಲ್ಲ ಕೆಳ ಸ್ತರದ ಆತ್ಮಗಳನ್ನು ದಾಟಿಹೋಗುತ್ತಾನೆ. ಅನ್ನಮಯ ಆತ್ಮ, ಪ್ರಾಣಮಯ ಆತ್ಮ, ಮನೋಮಯ ಆತ್ಮ, ವಿಜ್ಞಾನಮಯ ಆತ್ಮ. ಆನಂದಮಯ ಆತ್ಮ - ಇವುಗಳಲ್ಲಿ ತಾದಾತ್ಮ್ಯವನ್ನು ಪಡೆದುಕೊಂಡು, ಅವುಗಳನ್ನು ಮೀರಿಹೋಗುತ್ತಾನೆ. ತನ್ನ ಆತ್ಮದ ಬಗೆಗಿನ ಅರಿವನ್ನು ವಿಕಾಸಗೊಳಿಸಿಕೊಳ್ಳುತ್ತ ಹೋಗುತ್ತಾನೆ. ಎಲ್ಲಿ ಮನಸ್ಸು, ಮಾತುಗಳು ಕೂಡ ವಿಚಾರಿಸಲು ಹೋಗಿ, ಹಿಂತಿರುಗಿ ಬರುತ್ತವೆಯೋ, ಅಂಥ ಆನಂದರೂಪವಾದ ಬ್ರಹ್ಮವನ್ನು ತನ್ನ ಆತ್ಮವೆಂದೇ ತಿಳಿದುಕೊಂಡು, ಮತ್ತೆಂದಿಗೂ ಅವನು ಭಯವನ್ನು ಪಡೆಯುವುದೇ ಇಲ್ಲ. ಇದೇ ನಿರ್ವಿಕಲ್ಪ ಜ್ಞಾನ; ಇದೇ ಆತ್ಮಜ್ಞಾನ; ಇದೇ ಮಾನವ ಬದುಕಿನ ಅತ್ಯಂತ ಉತ್ಕಟ ಸ್ಥಿತಿ.'' ಅಂಥ ಭವ್ಯ ಸ್ಥಿತಿಯ ಸುಂದರ ಚಿತ್ರಣವನ್ನು ಉಪನಿಷತ್ತು ಹೀಗೆ ನೀಡುತ್ತದೆ:

''ಈ ಸ್ಥಿತಿಯಲ್ಲಿ ನಾನು ಒಳ್ಳೆಯದನ್ನು ಏಕೆ ಮಾಡಲಿಲ್ಲ? ನಾನು ಪಾಪವನ್ನೇಕೆ ಮಾಡಿದೆ? - ಈ ರೀತಿಯ ಪುಣ್ಯಪಾಪಗಳ ಯೋಚನೆಯು ವಿದ್ವಾಂಸನನ್ನು ಸುಡುವುದೇ ಇಲ್ಲ. ಪಾಪಪುಣ್ಯಗಳೆರಡನ್ನೂ ಮೀರಿಹೋಗಿರುತ್ತಾನೆ, ಅವನು. ಎಲ್ಲವನ್ನೂ ತನ್ನಾತ್ಮವನ್ನಾಗಿಯೇ ಮಾಡಿಕೊಂಡಿರುತ್ತಾನೆ, ಅವನು. ಎಲ್ಲವೂ ಅವನಿಗೆ ಆತ್ಮರೂಪವಾಗಿಯೇ ಗೋಚರಿಸುತ್ತದೆ. ಇದೇ ಉಪನಿಷತ್ತು, ಇದೇ ರಹಸ್ಯವಿದ್ಯೆ.''

ಇಲ್ಲಿಗೆ ಗುರುಗಳು ತಮ್ಮ ಉಪದೇಶವನ್ನು ಸಮಾಪ್ತಗೊಳಿಸುತ್ತಾರೆ. ಶಿಷ್ಯನನ್ನು ಲೌಕಿಕ ಆನಂದದ ತಾರತಮ್ಯದಿಂದ, ನಿರಪೇಕ್ಷ ನಿತ್ಯ ಆನಂದದ ಕಡೆಗೆ ಕರೆದುಕೊಂಡು ಹೋಗುತ್ತಾರೆ. ಇದೇ ಬ್ರಹ್ಮಾನಂದವೆಂದು ಗೊತ್ತುಮಾಡಿ ತೋರಿಸುತ್ತಾರೆ.



ಕುಸ್ತಿಪಟುವಿನ ಪರಿವರ್ತನೆ

ಕಥೆ : ಸ್ವಾಮಿ ವಿಮೂರ್ತಾನಂದ


ಚಿತ್ರ : ಮಣಿಸೆಲ್ವನ್

1

ಶ್ರೀರಾಮಕೃಷ್ಣರು ಎಲ್ಲ ಬಗೆಯ ಭಕ್ತರ ಉದ್ಧಾರಕ್ಕಾಗಿ ಅವತರಿಸಿ ಬಂದವರು. ಅವರ ಕೃಪೆ ಒಂದು ಸಲ ಯಾರ ಮೇಲಾದರೂ ಬಿದ್ದರೆ ಸಾಕು, ಅವರಲ್ಲಿ ಆಧ್ಯಾತ್ಮಿಕ ಉನ್ನತಿ ಉಂಟಾಗಿಯೇ ತೀರುವುದು...











5
ಕೂಡಲೇ ಮನ್ಮಥನ ಮನಸ್ಸಿನಲ್ಲಿದ್ದ ಅಜ್ಞಾನದ ಪರದೆ ಸರಿದುಹೋಯಿತು. ಅವನು ಶ್ರೀರಾಮಕೃಷ್ಣರ ಮುಂದೆ ಸಾಷ್ಟಾಂಗ ನಮಸ್ಕಾರ ಮಾಡಿದ.
ಸ್ವಾಮಿ, ನನ್ನನ್ನು ಕ್ಷಮಿಸಿ. ಪಾಪಿಯಾದ ನನ್ನನ್ನು ಉದ್ಧರಿಸಿ. ನಾನು ನಿಮ್ಮ ಮೊರೆಹೊಕ್ಕಿದ್ದೇನೆ.
ಜೈ ಮಾತೆ! ದಕ್ಷಿಣೇಶ್ವರಕ್ಕೆ ಬಾ. ಎಲ್ಲವೂ ಸರಿಹೋಗುವುದು.
6
ಶ್ರೀರಾಮಕೃಷ್ಣರ ಕೃಪೆಯಿಂದ ಮನ್ಮಥನು ಸಂಪೂರ್ಣವಾಗಿ ಬದಲಾದ. ಬಳಿಕ ಶ್ರೀರಾಮಕೃಷ್ಣರು ಯೋಗಿನ್-ಮಾ ಮನೆಗೆ ಹೋಗಿ, ಅಲ್ಲಿ ಸಂಕೀರ್ತನೆ ಮಾಡತೊಡಗಿದರು.
7
ಕೆಲವು ದಿನಗಳ ನಂತರ... ಈಗ ಮನ್ಮಥನು ಹೊಸ ಮನುಷ್ಯನಾಗಿದ್ದಾನೆ. ಹಿಂದಿನಂತೆ ಅವನು ಕುಸ್ತಿಗೆ ಹೋಗುತ್ತಿರಲಿಲ್ಲ. ಪ್ರತಿಯೊಬ್ಬರಿಗೂ ಪ್ರೀತಿ, ಗೌರವ ಸಲ್ಲಿಸುತ್ತಿದ್ದ.
ಅವನ ಮನೆಗೆ ಸಮೀಪದಲ್ಲೇ ಶ್ರೀರಾಮಕೃಷ್ಣರ ಶಿಷ್ಯ ಗಂಗಾಧರ (ಮುಂದೆ ಸ್ವಾಮಿ ಅಖಂಡಾನಂದರು) ವಾಸಿಸುತ್ತಿದ್ದ. ಒಂದು ದಿನ ಮನ್ಮಥ ಅವನನ್ನು ಭೇಟಿಯಾದ...
ತಮ್ಮಾ, ನಾನು ಎಂಥ ಕಡುಪಾಪಿಯೆಂದರೆ, ನನಗೆ ಶ್ರೀರಾಮಕೃಷ್ಣರನ್ನು ಭೇಟಿಯಾಗುವ ಯೋಗ್ಯತೆಯಿಲ್ಲ...
ಇಲ್ಲಣ್ಣಾ, ಹಾಗೆ ಹೇಳಬೇಡ ಶ್ರೀರಾಮಕೃಷ್ಣರು ಎಲ್ಲರಿಗೂ ಸೇರಿದವರು... ಬಾ, ಅವರ ಬಳಿಗೆ ಹೋಗೋಣ.
8
ದಕ್ಷಿಣೇಶ್ವರದಲ್ಲಿ...
ಗುರುದೇವ, ಮನ್ಮಥನು ನಿಮ್ಮನ್ನು ಕಾಣಲು ಬಂದಿದ್ದಾನೆ. ಅವನು ಹೊರಗಡೆ ನಿಂತಿದ್ದಾನೆ. ನಿಮ್ಮನ್ನು ಕಾಣಲು ಅವನು ಹಿಂಜರಿಯುತ್ತಿದ್ದಾನೆ..
ಜೈ ಮಾ! ಅವನನ್ನು ಒಳಕ್ಕೆ ಕರೆದುಕೊಂಡು ಬಾ.


9
ಮನ್ಮಥನು ತಾನು ತಂದಿದ್ದ ಸಿಹಿತಿಂಡಿಯನ್ನು ಭಕ್ತಿ, ಗೌರವಗಳೊಂದಿಗೆ ಶ್ರೀರಾಮಕೃಷ್ಣರಿಗೆ ಕೊಟ್ಟ.
ಗುರುದೇವ, ಅತಿಯಾದ ಬೆವರಿನಿಂದಾಗಿ ಅದು ನನ್ನ ದೇಹಕ್ಕೆ ಅಂಟಿಕೊಳ್ಳುತ್ತದೆ. ಆದ್ದರಿಂದ ...
ಓ, ನೀನು ಬ್ರಾಹ್ಮಣನಲ್ಲವೆ? ಮತ್ತೇಕೆ ನಿನ್ನ ಜನಿವಾರವನ್ನು ಕಿತ್ತೆಸೆದೆ?
ಸಂಪ್ರದಾಯ ಮೀರುವುದು ಒಳ್ಳೆಯದಲ್ಲ... ಜನಿವಾರ ಧರಿಸಿಕೋ. ಪ್ರತಿದಿನವೂ ಗಾಯತ್ರಿ ಜಪ ಮಾಡು.
10
ಅನಂತರ ಶ್ರೀರಾಮಕೃಷ್ಣರು ಮನ್ಮಥನನ್ನು ಕಾಳೀಮಂದಿರಕ್ಕೆ ಕರೆದೊಯ್ದರು. ಅಂದೇ ಅವರು ಅವನಿಗೆ ಮಂತ್ರದೀಕ್ಷೆ ನೀಡಿದರು.
11
ಮನ್ಮಥನು ತನ್ನ ಸಮಯವನ್ನೆಲ್ಲ ಜಪ, ಧ್ಯಾನಗಳಲ್ಲಿ ಕಳೆದ. ಅವನು ಪ್ರತಿ ಉಸಿರಿನಲ್ಲೂ ಮಂತ್ರವನ್ನು ಉಚ್ಚರಿಸತೊಡಗಿದ.
12
ಶ್ರೀರಾಮಕೃಷ್ಣರ ಕೊನೆಯ ದಿನಗಳು ಸಮೀಪಿಸಿದವು... ಅವರ ಶಿಷ್ಯ ಶಶಿ (ಮುಂದೆ ಸ್ವಾಮಿ ರಾಮಕೃಷ್ಣಾನಂದರು) ಭಕ್ತಿಯಿಂದ ಅವರ ಸೇವೆ ಮಾಡುತ್ತಿದ್ದ. ಆ ಸಂದರ್ಭದಲ್ಲಿ ಮನ್ಮಥನು ಅವರನ್ನು ನೋಡಲು ಹೋದ.
ಶಶಿ, ನಾನು ಮನ್ಮಥನೊಂದಿಗೆ ಮಾತನಾಡಬೇಕು. ಬೇರೆ ಯಾರನ್ನೂ ಒಳಕ್ಕೆ ಬಿಡಬೇಡ.
ಶಶಿ ಕಾವಲು ನಿಂತಿರಬೇಕಾದರೆ ಶ್ರೀರಾಮಕೃಷ್ಣರು ಮನ್ಮಥನಿಗೆ ಉಪದೇಶ ನೀಡಿದರು. ಸ್ವಲ್ಪ ಸಮಯದ ನಂತರ...
13
ಶಶಿ, ನನ್ನ ಭಾವಚಿತ್ರವನ್ನು ತಂದುಕೊಡು...
ಇಲ್ಲೇ ಇದೆ, ಠಾಕೂರ್.
ಶ್ರೀರಾಮಕೃಷ್ಣರು ಆ ಭಾವಚಿತ್ರವನ್ನು ಸ್ಪರ್ಶಿಸಿ ಮನ್ಮಥನಿಗೆ ಕೊಟ್ಟರು. ಆಗ ಮನ್ಮಥನಿಗೆ ಭಾವಾವಸ್ಥೆಯುಂಟಾಯಿತು.









''ಆತ್ಮನನ್ನು ಸಾಕ್ಷಾತ್ಕರಿಸಿಕೊಂಡವನ ಹೃದಯದ ಗ್ರಂಥಿಯು ನಾಶವಾಗಿ ಅವನು ಶುದ್ಧನಾಗುವನು. ಅವನ ಸಂಶಯಗಳೆಲ್ಲವೂ ನಾಶವಾಗುವವು. ಅವನ ಕರ್ಮಗಳೆಲ್ಲವೂ ಕಳಚಿಹೋಗುವುವು.''


– ಮುಂಡಕೋಪನಿಷತ್, 2.2.9

ಸುದ್ದಿ ಸಂಚಯ

ರಾಮಕೃಷ್ಣ ಮಹಾಸಂಘದ ಫೆಬ್ರವರಿ-ಮಾರ್ಚ್ ತಿಂಗಳ ಚಟುವಟಿಕೆಗಳು

ಶ್ರೀರಾಮಕೃಷ್ಣ ಜಯಂತಿ: ಮಾರ್ಚ್ ೮ರ ಶುಕ್ರವಾರದಂದು ಶ್ರೀರಾಮಕೃಷ್ಣರ ಜಯಂತಿಯನ್ನು ಬೇಲೂರು ಮಠ ಹಾಗೂ ಇತರ ಶಾಖಾ ಕೇಂದ್ರಗಳಲ್ಲಿ ಆಚರಿಸಲಾಯಿತು. ಬೇಲೂರು ಮಠದಲ್ಲಿ ಜಯಂತಿಯ ಅಂಗವಾಗಿ ಸಾರ್ವಜನಿಕ ಸಭೆ ನಡೆಯಿತು. ಸುಮಾರು ೩೫,೦೦೦ ಮಂದಿ ಭಕ್ತರು ಪ್ರಸಾದ ಭೋಜನ ಸ್ವೀಕರಿಸಿದರು. ೧೩, ೧೪ರಂದು **ಭಕ್ತಸಮ್ಮೇಳನ** ನಡೆಯಿತು. ೭ರಂದು 'ಸಾರ್ವಜನಿಕ ಉತ್ಸವ' ನಡೆಯಿತು. ವಿವಿಧ ಕೇಂದ್ರಗಳಲ್ಲಿ ಜಯಂತಿಯ ಅಂಗವಾಗಿ ವಾರ್ಷಿಕೋತ್ಸವ ಕಾರ್ಯಕ್ರಮಗಳು ನಡೆದವು.

ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣದ ೧೨೫ನೇ ವಾರ್ಷಿಕೋತ್ಸವ: **ಬಾರಾನಗರ ಮಠ**ದಲ್ಲಿ ಹಾಗೂ ಹತ್ತಿರದ ಶಾಲೆಯಲ್ಲಿ ೧೫ರಿಂದ ೨೯ರ ವರೆಗೆ ನಡೆದ ಭಾಷಣ ಕಾರ್ಯಕ್ರಮದಲ್ಲಿ ೨೬೪ ಮಂದಿ ವಿದ್ಯಾರ್ಥಿಗಳು, ೩೦ ಮಂದಿ ಅಧ್ಯಾಪಕರು ಭಾಗವಹಿಸಿದ್ದರು. **ಕೊಯಮತ್ತೂರು ಮಿಷನ್ ವಿದ್ಯಾಲಯ**ವು ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮಗಳನ್ನು ನಡೆಸಿತು. ಫೆಬ್ರ ವರಿ ೨೬, ೨೭, ಮಾರ್ಚ್ ೬ರಂದು ನಡೆದ ಈ ಸ್ಪರ್ಧೆಗಳಲ್ಲಿ ೫೦೭ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ಹಾತಮುನಿಗುಡ** (ಒರಿಸ್ಸಾ) ಆಶ್ರಮದಲ್ಲಿ ನಡೆದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ೧೪೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಫೆಬ್ರವರಿ ೨೬-೨೭ ರಂದು ನಡೆದ ಎರಡು ಯುವ ಸಮ್ಮೇಳನಗಳಲ್ಲಿ ೩೫೦ ಯುವಕರು ಭಾಗವಹಿಸಿದ್ದರು. **ಹೈದರಾಬಾದ್** ಆಶ್ರಮವು ತೆಲಂಗಾಣದ ಸೂರ್ಯಪೇಟೆ, ಕೊತಾಗುಡೇಂ, ಮಹಬೂಬ್‌ನಗರ ಹಾಗೂ ನಿರ್ಮಲ ಜಿಲ್ಲೆಗಳಲ್ಲಿ ಫೆಬ್ರವರಿ ೨೬ರಂದು ಹಾಗೂ ಮಾರ್ಚ್ ೧, ೧೧, ೨೪ರಂದು ನಡೆಸಿದ ಯುವಸಮ್ಮೇಳನದಲ್ಲಿ ೩೦೦೦ ಯುವಕರು ಭಾಗವಹಿಸಿದ್ದರು.



ರಾಜ್‌ಕೋಟ್ ಆಶ್ರಮ

ಮಾಲ್ಡಾ ಆಶ್ರಮವು ಮಾರ್ಚ್ ೧೦ರಂದು ನಡೆಸಿದ ಯುವಸಮ್ಮೇಳನದಲ್ಲಿ ೮ ಕಾಲೇಜುಗಳಿಂದ ಬಂದ ೪೭೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. **ಮಂಗಳೂರು** ಆಶ್ರಮವು ಮಾರ್ಚ್ ತಿಂಗಳಲ್ಲಿ ೧೪ ಕಾಲೇಜುಗಳಲ್ಲಿ ನಡೆಸಿದ ಭಾಷಣ ಕಾರ್ಯಕ್ರಮಗಳಲ್ಲಿ ೨೭೫೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ಮೈಸೂರು** ಆಶ್ರಮವು ಮಾರ್ಚ್ ೧ರಿಂದ ೧೫ರ ವರೆಗೆ ನಡೆಸಿ ಐದು ವಿಚಾರ ಸಂಕಿರಣದಲ್ಲಿ ಕಾಲೇಜುಗಳ ೧೦೪೪ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ನೌರಾ** ಆಶ್ರಮವು ಮಾರ್ಚ್ ೩೦ರಂದು ಏರ್ಪಡಿಸಿದ್ದ ಭಾಷಣ ಕಾರ್ಯಕ್ರಮದಲ್ಲಿ ೧೨೦೦ ಮಂದಿ ಭಾಗವಹಿಸಿದ್ದರು. **ಪುಣೆ** ಆಶ್ರಮವು ಮಹಾರಾಷ್ಟ್ರದ ನಾಸಿಕ್ ಹಾಗೂ ಅಮರಾವತಿ ಜಿಲ್ಲೆಗಳ ೫ ಕಾಲೇಜುಗಳಲ್ಲಿ ಫೆಬ್ರವರಿ-ಮಾರ್ಚ್ ತಿಂಗಳಲ್ಲಿ ನಡೆಸಿದ ಬುಡಕಟ್ಟು ಯುವ ಸಮ್ಮೇಳನದಲ್ಲಿ ೧೦೭೭ ಮಂದಿ ಯುವಕರು ಭಾಗವಹಿಸಿದ್ದರು. **ಶ್ರೀನಗರ** ಆಶ್ರಮವು ಮಾರ್ಚ್ ೨೪ರಂದು ಬಾರಾಮುಲ್ಲಾ ಜಿಲ್ಲೆಯ ಹೆಣ್ಣುಮಕ್ಕಳ ಅನಾಥಾಲಯದಲ್ಲಿ ನಡೆಸಿದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ೬೦ ಮಂದಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು. **ವಡೋದರ** ಆಶ್ರಮವು ನವೆಂಬರ್‌ನಿಂದ ಜನವರಿ ತನಕ ನಡೆಸಿದ ಪ್ರಬಂಧ ಸ್ಪರ್ಧೆಯಲ್ಲಿ ೨೧೩ ಶಾಲೆಯ ೧೧೫೯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮಾರ್ಚ್ ತಿಂಗಳಲ್ಲಿ ಬಹುಮಾನ ವಿತರಣೆ ನಡೆಯಿತು. **ವಿಜಯವಾಡ** ಆಶ್ರಮವು ಮಾರ್ಚ್ ೨೦ರಂದು ನಡೆಸಿದ ವಿಶೇಷ ಪ್ರೇರಕ ಭಾಷಣದಲ್ಲಿ ೬೭೦ ವಿದ್ಯಾರ್ಥಿಗಳು ಹಾಗೂ ೬೦ ಮಂದಿ ಅಧ್ಯಾಪಕರು ಭಾಗವಹಿಸಿದ್ದರು.

ಶಾಖಾ ಕೇಂದ್ರಗಳಲ್ಲಿ ನಡೆದ ಚಟುವಟಿಕೆಗಳು

ಲಕ್ನೋ ಸೇವಾಶ್ರಮದ ವಿವೇಕಾನಂದ ಪಾಲಿಕ್ಲಿನಿಕ್ ಹಾಗೂ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್‌ನ ಸುವರ್ಣ ಮಹೋತ್ಸವದ ವರ್ಷಾಚರಣೆಯ ಉದ್ಘಾಟನೆಯು ಫೆಬ್ರವರಿ ೧೮ರಂದು ಜರುಗಿತು. **ರಾಜ್‌ಕೋಟ್** ಆಶ್ರಮವು ಫೆಬ್ರವರಿ ೨೪ರಂದು ಸ್ವಾಮಿ ವಿವೇಕಾನಂದರ ಗುಜರಾತ್ ಭೇಟಿಯ ೧೨೫ ನೇ ವಾರ್ಷಿಕೋತ್ಸವದ ಅಂಗವಾಗಿ ಒಂದು ಸ್ಮರಣಸಂಚಿಕೆಯನ್ನು ಹೊರತಂದಿದೆ. **ಚೆನ್ನೈ** ರಾಮಕೃಷ್ಣ ಮಠವು ಮಾರ್ಚ್ ೧೭, ೧೮ ರಂದು ಚೆನ್ನೈ ಕಪಾಲೀಶ್ವರ ದೇವಾಲಯದ ರಥಯಾತ್ರೆಯ ಸಂದರ್ಭದಲ್ಲಿ ಸುಮಾರು ೨೦,೦೦೦ ಮಂದಿ ಭಕ್ತರಿಗೆ ಮಜ್ಜಿಗೆ ಪಾನೀಯವನ್ನು ವಿತರಣೆ ಮಾಡಿತು. NAAC ಸಂಸ್ಥೆಯು ಬೇಲೂರು ಮಠದ RKMVERI (ಖಾಸಗಿ ವಿ.ವಿ.)ಗೆ ಅತಿ ಹೆಚ್ಚಿನ ಗ್ರೇಡ್ A++ ನೀಡಿದೆ.

ಮೌಲ್ಯ ಶಿಕ್ಷಣ ಕಾರ್ಯಕ್ರಮಗಳು ಹಾಗೂ ಯುವ ಸಮ್ಮೇಳನಗಳು

ಬಾರಾನಗರ ಮಿಷನ್ ಆಶ್ರಮವು ಕೊಲ್ಕತ್ತದ ೪ ಕಾಲೇಜುಗಳಲ್ಲಿ ಮಾರ್ಚ್ ೨೭ರಿಂದ ೨೯ರ ವರೆಗೆ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳನ್ನು ನಡೆಸಿತು. ಇದರಲ್ಲಿ ೩೦೪ ವಿದ್ಯಾರ್ಥಿಗಳು ಹಾಗೂ ೧೧೮ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. **ದೆಹಲಿ** ಆಶ್ರಮವು ಫೆಬ್ರವರಿ ೨ ರಂದು ನಡೆಸಿದ ವಿದ್ಯಾರ್ಥಿ ಸಮ್ಮೇಳನದಲ್ಲಿ ಹಲವು ಶಾಲೆಗಳಿಂದ ಬಂದ ೮೨೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದಲ್ಲದೆ, ದೆಹಲಿ, ಎರ್ನಾಕುಲಂ, ಚಂಡೀಗಢ, ಗುಡಗಾಂ, ವಿಶಾಖಪಟ್ಟಣ ಮುಂತಾದ ಕಡೆ ಫೆಬ್ರವರಿ ೧೬ ಇಂದ ಮಾರ್ಚ್ ೮ರ ವರೆಗೆ ನಡೆಸಿದ ಮೌಲ್ಯ ಶಿಕ್ಷಣ ಕಾರ್ಯಕ್ರಮಗಳಲ್ಲಿ ೬೭೬ ಅಧ್ಯಾಪಕರು ಹಾಗೂ ಪ್ರಿನ್ಸಿಪಾಲರು, ೧೬೯ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇದಲ್ಲದೆ ಆಶ್ರಮವು ಹರಿಯಾಣ, ಮಧ್ಯಪ್ರದೇಶ, ರಾಜಸ್ಥಾನಗಳ ಸರಕಾರಿ ಶಾಲೆಗಳಿಗೆ ೧೧೦ LED ಪ್ರೊಜೆಕ್ಟರ್‌ಗಳನ್ನು ಕೂಡ ವಿತರಿಸಿತು. **ಗುರಪ್** ಆಶ್ರಮವು ಮಾರ್ಚ್ ೧೫ರಂದು ನಡೆಸಿದ ಮೌಲ್ಯ ಶಿಕ್ಷಣ ವಿಚಾರ ಸಂಕಿರಣಗಳಲ್ಲಿ ೨೮೧೪ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದರು. **ರಾಜ್‌ಕೋಟ್** ಆಶ್ರ ಮವು ಮಾರ್ಚ್ ೧೫ರಿಂದ ೧೮ರ ತನಕ ನಡೆಸಿದ ಎರಡು ಮೌಲ್ಯ ಶಿಕ್ಷಣ ಕಾರ್ಯಕ್ರಮಗಳಲ್ಲಿ ೧೬೦ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. **ವಡೋದರ** ಕೇಂದ್ರವು ಜನವರಿಯಿಂದ ಮಾರ್ಚ್ ತನಕ ಗುಜರಾತಿನ ೪ ಜಿಲ್ಲೆಗಳಲ್ಲಿನ ೨೧ ಶಾಲೆಗಳಲ್ಲಿ ನಡೆಸಿದ ಮೌಲ್ಯಶಿಕ್ಷಣ ಕಾರ್ಯಕ್ರಮಗಳಲ್ಲಿ ಒಟ್ಟು ೧೭೦ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಶ್ರೀನಗರ ಆಶ್ರಮ



ವಿಜಯವಾಡ ಆಶ್ರಮ



Managing Editor : Swami Atmajnananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

ಆರ್ಕಿಡ್ ಟ್ರಾವೆಲ್ & ಟೂರ್ಸ್

Orchid
Travel & Tours

www.orchidtours.net

8 ದಿನಗಳ ಶ್ರೀ ಮುಕ್ತಿನಾಥ ಯಾತ್ರೆ (ಸಾಲಿಗ್ರಾಮಂ) ಬೆಂಗಳೂರಿನಿಂದ ವಿಮಾನದಲ್ಲಿ



ಪ್ರವಾಸ ಸ್ಥಳಗಳು : ಶ್ರೀ ಮುಕ್ತಿನಾಥ ದೇವಸ್ಥಾನ, ಪಶುಪತಿನಾಥ ದೇವಸ್ಥಾನ, ಜಲನಾರಾಯಣ ದೇವಸ್ಥಾನ, ಶ್ರೀ ಕೃಷ್ಣ ದೇವಸ್ಥಾನ, ಕಠ್ಮಂಡು ಸಿಟಿ ಟೂರ್, ಪೋಕ್ರಾ–ಬಿಂದಾಬಾಸಿನಿ ದೇವಸ್ಥಾನ, ತಾಲಭೈರವಿ ದೇವಸ್ಥಾನ, ದೋಣಿಯಲ್ಲಿ ಪೋಕ್ರಾ ಲೇಕ್ ಒಂದು ವಿಹಾರ, ಮನೋಕಾಮನ ದೇವಸ್ಥಾನ (ಕೇಬಲ್ ಕಾರ್‌ನಲ್ಲಿ)

11 ದಿನಗಳ ಸಿಂಗಾಪುರ–ಮಲೇಶಿಯ–ಥೈಲ್ಯಾಂಡ್ ಪ್ರವಾಸ



ಸಿಂಗಾಪುರ : ಸಿಟಿ ಟೂರ್, ಸೆಂಟೋಸ ಐಲ್ಯಾಂಡ್ ಜೊತೆಗೆ ಸಿ ಅಕ್ವೇರಿಯಂ, ವಿಂಗ್ಸ್ ಆಫ್ ಟೈಮ್, ಜುರೋಂಗ್ ಬರ್ಡ್‌ಪಾರ್ಕ್, ಯುನಿವರ್ಸಲ್ ಸ್ಟುಡಿಯೋ,

ಮಲೇಶಿಯ : ಕೌಲಾಲಂಪುರ್ ಸಿಟಿ ಟೂರ್, ಬಾಟು ಗುಹೆ, ಪುತ್ರಜಯ, ಜಂಟಿಂಗ್ ಹೈಲ್ಯಾಂಡ್, ಕೆ.ಎಲ್. ಟವರ್

ಥೈಲ್ಯಾಂಡ್ : ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ಮರೀನಾ ಪಾರ್ಕ್, ವಾಕರ್ ಸ್ಟ್ರೀಟ್

15 ಮತ್ತು 18 ದಿನಗಳ ಗ್ರ್ಯಾಂಡ್ ಯು.ಕೆ.–ಯುರೋಪ್ ಪ್ರವಾಸ



ಯು.ಕೆ. ಫ್ರಾನ್ಸ್, ಬೆಲ್ಜಿಯಂ, ನೆದರ್‌ಲ್ಯಾಂಡ್, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಆಸ್ಟ್ರೀಯಾ, ಲಿಚೆನ್‌ಟೆನ್‌ಸ್ಟೈನ್, ಇಟಲಿ, ವ್ಯಾಟಿಕನ್

18 ಮತ್ತು 12 ದಿನಗಳ ಅಮೇರಿಕಾ ಪ್ರವಾಸ



ಪ್ರವಾಸ ಸ್ಥಳ : ನ್ಯೂಯಾರ್ಕ್, ವಾಷಿಂಗ್ಟನ್, ನಯಾಗರ ಫಾಲ್ಸ್, ಲಾಸ್‌ವೆಗಾಸ್, ಲಾಸ್ ಎಂಜಲೀಸ್, ಸ್ಯಾನ್‌ಫ್ರಾನ್ಸಿಸ್‌ಕೋ

8 ದಿನಗಳ ಕಾಂಬೋಡಿಯಾ ಥೈಲ್ಯಾಂಡ್ ಪ್ರವಾಸ



ಪ್ರವಾಸ ಸ್ಥಳ : ಕಾಂಬೋಡಿಯಾ – ಸಿಯಾಮ್‌ರಿಪ್, ಅಂಕೊರ್‌ವಾಟ್, ಟೋನ್ ಸ್ಯಾಪ್ ಸರೋವರ, ತಾಪ್ರಾಮ್, ಬಯಾನ್, ಬಪೂನ್ ದೇವಾಲಯಗಳು, ಥೈಲ್ಯಾಂಡ್ – ಪಟ್ಟಾಯ, ಕೋರಲ್ ಐಲ್ಯಾಂಡ್, ಸಫಾರಿ ವರ್ಲ್ಡ್ ಹಾಗೂ ಬ್ಯಾಂಕಾಕ್ ಸಿಟಿ ಟೂರ್, ವಾಕರ್ ಸ್ಟ್ರೀಟ್

7 ದಿನಗಳ ರಷ್ಯಾ ಪ್ರವಾಸ



ಮಾಸ್ಕೋ : ಕ್ರೆಮ್‌ಲಿನ್ ಗ್ರೌಂಡ್, ರೆಡ್ ಸ್ಕ್ವೆರ್, ರಷ್ಯಾ ಸರ್ಕಸ್, ಅಂಡರ್‌ಗ್ರೌಂಡ್ ಟೂರ್ ಆಫ್ ಮಾಸ್ಕೊ (ಮೆಟ್ರೊ), ಸಿಟಿ ಟೂರ್

ಸೆಂಟ್ ಪೀಟರ್ಸ್‌ಬರ್ಗ್ : ಗ್ರ್ಯಾಂಡ್ ಪ್ಯಾಲೇಸ್, ಪೀಟರ್ ಓಫ್ ಗಾರ್ಡನ್, ಹೆರ್ಮಿಟೇಜ್ ಮ್ಯೂಸಿಯಂ, ನೇವ ಬೋಟ್ ರೈಡ್, ಸೈಂಟ್ ಐಸಾಕ್ಸ್ ಕೆಥಡ್ರಲ್, ಸಿಟಿ ಟೂರ್

Orchid
Travel & Tours
BASAVANAGUDI
#98, 1st Floor, DVG Road
Office 080-26621983, 26617178
Mobile +91 9900080793 / 9880079588

For more details please Contact :

Orchid
Travel & Tours
MALLESHWARAM
198, 1st Floor, 11th Cross
Office 080 - 23445598, 23445559
Mobile +91 9900080791 / 9880079644

VIVEKA PRABHA (KANNADA MONTHLY)
May 2019, Vol.20, No.03, No.of pages: 44

Registered With Registrar of News Papers of India under 72356/2000.postal Regn.No.KA/SK/MYS/480/ 2018-20. LICENCED TO POST W.P.P. AT YADAVAGIRI MYSORE 570 020. VIDE LICENCE NO. SK/WPP/MYS.155/2018-20

Printed at mayur graphics,Bangalore